**ಸನ್ಮಾನ್ಯ ಶ್ರೀ. ಬಸವರಾಜ ಎಸ್ ಬೊಮ್ಮಾಯಿ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ : 24.01.2022 ರಂದು ಅಪರಾಹ್ನ 12.00 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳ ಗೃಹ ಕಛೇರಿ "ಕೃಷ್ಣಾ" ಇಲ್ಲಿ ಜರುಗಿದ ನೆಫ್ರೋ-ಯುರಾಲಜಿ ಸಂಸ್ಥೆಯ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು :**

<u>ಸಭೆಯಲ್ಲಿ ಹಾಜರಿದ್ದ ಸದಸ್ಯರು :</u>

| | | |
|---|---|---|
| 1. | ಸನ್ಮಾನ್ಯ ಶ್ರೀ. ಬಸವರಾಜ ಎಸ್ ಬೊಮ್ಮಾಯಿ<br>ಮಾನ್ಯ ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು,<br>ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ<br>ಬೆಂಗಳೂರು. | ಅಧ್ಯಕ್ಷರು |
| 2. | ಸನ್ಮಾನ್ಯ ಡಾ॥ ಕೆ. ಸುಧಾಕರ್,<br>ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು<br>ಕರ್ನಾಟಕ ಸರ್ಕಾರ ಮತ್ತು ಉಪಾಧ್ಯಕ್ಷರು,<br>ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ<br>ಬೆಂಗಳೂರು. | ಉಪಾಧ್ಯಕ್ಷರು |
| 3. | ಶ್ರೀ. ನವೀನ್ ರಾಜ್ ಸಿಂಗ್,<br>ಭಾ.ಆ.ಸೇ.<br>ಸರ್ಕಾರದ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>(ವೈದ್ಯಕೀಯ ಶಿಕ್ಷಣ) ಬಹುಮಹಡಿಗಳ ಕಟ್ಟಡ,<br>ಬೆಂಗಳೂರು. | ಸದಸ್ಯರು |
| 4. | ಶ್ರೀ. ಡಿ. ರಂದೀಪ್,<br>ಭಾ.ಆ.ಸೇ.,<br>ಆಯುಕ್ತರು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,<br>ಆರೋಗ್ಯ ಸೌಧ, ಬೆಂಗಳೂರು. | ಸದಸ್ಯರು |

5. ಡಾ॥ ಪಿ.ಜಿ. ಗಿರೀಶ್,
ನಿರ್ದೇಶಕರು — ಸದಸ್ಯರು
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಆನಂದರಾವ್ ವೃತ್ತ,
ಬೆಂಗಳೂರು.

6. ಡಾ॥ ಇಂದುಮತಿ,
ನಿರ್ದೇಶಕರು, — ಸದಸ್ಯರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಆನಂದರಾವ್ ವೃತ್ತ, ಬೆಂಗಳೂರು.

7. ಡಾ॥ ಜಿ.ಕೆ. ವೆಂಕಟೇಶ್, — ಅಧಿಕಾರೇತರ ಸದಸ್ಯರು
ಯುರಾಲಜಿಸ್ಟ್ ಹಾಗೂ ನಿರ್ದೇಶಕರು (ನಿವೃತ್ತ),
ನೆಫ್ರೋ-ಯುರಾಲಜಿ ಸಂಸ್ಥೆ
ಬೆಂಗಳೂರು.

8. ಡಾ॥ ಕೇಶವಮೂರ್ತಿ.ಆರ್., — ಸದಸ್ಯ ಕಾರ್ಯದರ್ಶಿಗಳು
ನಿರ್ದೇಶಕರು,
ನೆಫ್ರೋ-ಯುರಾಲಜಿ ಸಂಸ್ಥೆ,
ಬೆಂಗಳೂರು.

---

ನೆಫ್ರೋ-ಯುರಾಲಜಿ ಸಂಸ್ಥೆಯ ನಿರ್ದೇಶಕರು ಹಾಗೂ ಆಡಳಿತ ಮಂಡಳಿ ಸಭೆಯ ಸದಸ್ಯ ಕಾರ್ಯದರ್ಶಿಗಳಾದ ಡಾ॥ ಕೇಶವಮೂರ್ತಿ.ಆರ್. ಇವರು ಸಭೆಯಲ್ಲಿ ಹಾಜರಿದ್ದ ನೆಫ್ರೋ-ಯುರಾಲಜಿ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ. ಬಸವರಾಜ ಎಸ್ ಬೊಮ್ಮಾಯಿ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಸನ್ಮಾನ್ಯ ಡಾ॥ ಕೆ. ಸುಧಾಕರ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಮತ್ತು ಉಪಾಧ್ಯಕ್ಷರು, ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರುಗಳನ್ನು ಗೌರವಪೂರ್ವಕವಾಗಿ ಸಭೆಗೆ ಸ್ವಾಗತಿಸಿ, ಸನ್ಮಾನ್ಯ ಅಧ್ಯಕ್ಷರು ಸಭೆಯನ್ನು ಜರುಗಿಸಿಕೊಡುವಂತೆ ಕೋರಿದರು.

ತದನಂತರ, ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ, ಸಂಸ್ಥೆಯ ಕಾರ್ಯನಿರ್ವಹಣೆಯ ವಾರ್ಷಿಕ ವರದಿಯ ಬಗ್ಗೆ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಕಿರುಪರಿಚಯ ನೀಡಿ, ದಿನಾಂಕ : 26.12.2019 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ನಡವಳಿ ಮತ್ತು ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಗಳನ್ನು ಸ್ಥಿರೀಕರಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ, ಸದರಿ ಅನುಪಾಲನಾ ವರದಿಯಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಕ್ರಮ ಸಂಖ್ಯೆ : 10 ಮತ್ತು 11 ಬಾಕಿ ಇರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿ, ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರು ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಕ್ರಮ ಸಂಖ್ಯೆ : 10 ರಲ್ಲಿನ ನೆಫ್ರೋ-ಯುರಾಲಜಿ ಸಂಸ್ಥೆಯ ಅನೆಕ್ಸ್ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಅವಶ್ಯಕವಾಗಿರುವ ಹೆಚ್ಚುವರಿ ಅನುದಾನ ರೂ. 7.50 ಕೋಟಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ ದಿನಾಂಕ : 26.12.2019ರಂದು ಜರುಗಿದ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲಾಗಿ, ಕಾಮಗಾರಿ ಮೊತ್ತವು ನಿಗದಿಯಾದ ಮೊತ್ತಕ್ಕಿಂತ ಶೇ. 25 ರಷ್ಟು ಅಧಿಕವಾಗಿದ್ದಲ್ಲಿ, ಸಚಿವ ಸಂಪುಟದಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಿದ್ದರ ಬಗ್ಗೆ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಈ ಹೆಚ್ಚುವರಿ ಅನುದಾನ ರೂ. 7.50 ಕೋಟಿಯನ್ನು ಆಂತರಿಕ ಸಂಪನ್ಮೂಲದಿಂದ ಸರಿದೂಗಿಸುವ ಬಗ್ಗೆ ಸಚಿವ ಸಂಪುಟದಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಕ್ರಮವಹಿಸುವಂತೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಸೂಚಿಸಲಾಯಿತು.

ಕ್ರಮ ಸಂಖ್ಯೆ : 12 ರಲ್ಲಿನ ನೆಫ್ರೋ-ಯುರಾಲಜಿ ಸಂಸ್ಥೆಯ ಮೈಸೂರು ಘಟಕಕ್ಕೆ ಜಮೀನು ಮಂಜೂರಾತಿ ಬಗ್ಗೆ ಚರ್ಚಿಸಲಾಗಿ, ಮೈಸೂರು ಕೆ.ಆರ್. ಆಸ್ಪತ್ರೆಯ ಪಿ.ಕೆ.ಟಿ.ಬಿ. ಸ್ಯಾನಿಟೋರಿಯಂ ಆಸ್ಪತ್ರೆಯ ಆವರಣದಲ್ಲಿರುವ ಭೂಮಿಯಲ್ಲಿ ಅವಶ್ಯವಿರುವ 05 ಎಕರೆ ಜಮೀನನ್ನು ನೆಫ್ರೋ-ಯುರಾಲಜಿ ಸಂಸ್ಥೆಯ ಮೈಸೂರು ಘಟಕಕ್ಕೆ ಮಂಜೂರು ಮಾಡಿಕೊಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಬಗ್ಗೆ ಡೀನ್ ಹಾಗೂ ನಿರ್ದೇಶಕರು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರೊಂದಿಗೆ ಚರ್ಚಿಸಲಾಗಿದ್ದು, ದಿನಾಂಕ : 26.12.2019ರಂದು ಜರುಗಿದ ಆಡಳಿತ ಮಂಡಳಿ ಸಭೆಯಲ್ಲಿ ಮೈಸೂರು ಕೆ.ಆರ್.ಆಸ್ಪತ್ರೆಯ ಪಿ.ಕೆ.ಟಿ.ಬಿ. ಸ್ಯಾನಿಟೋರಿಯಂ ಆಸ್ಪತ್ರೆಯ ಆವರಣದಲ್ಲಿರುವ ಭೂಮಿಯಲ್ಲಿ ಅವಶ್ಯವಿರುವ 05 ಎಕರೆ ಜಮೀನನ್ನು ನೆಫ್ರೋ-ಯುರಾಲಜಿ ಸಂಸ್ಥೆಯ ಮೈಸೂರು ಘಟಕಕ್ಕೆ ಹಸ್ತಾಂತರಿಸಲು ಅನುಮೋದನೆ ನೀಡಿ, ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರಿಗೆ ಸೂಚಿಸಲಾಗಿದ್ದ ಬಗ್ಗೆ ಆಡಳಿತ ಮಂಡಳಿಯ ಗಮನಕ್ಕೆ ತರಲಾಗಿ, ಸಂಸ್ಥೆಯ ಬಳಕೆದಾರರ ಶುಲ್ಕ (User Charges) ಹಾಗೂ ಸರ್ಕಾರದ ಕೊಡುಗೆಯೊಂದಿಗೆ ಮೈಸೂರಿನಲ್ಲಿ ನೆಫ್ರೋ-ಯುರಾಲಜಿ ಘಟಕವನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಪರಿಶೀಲಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಸೂಚಿಸಲಾಯಿತು.

ಉಳಿದಂತೆ, ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲು ಹಾಗೂ ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ (2) :** **ದಿನಾಂಕ : 04.01.2020, ದಿನಾಂಕ : 07.10.2020 ಮತ್ತು ದಿನಾಂಕ : 20.07.2021 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಹಾಗೂ ಅಧ್ಯಕ್ಷರು ಆರ್ಥಿಕ ಸಮಿತಿ, ನೆಫ್ರೋ-ಯುರಾಲಜಿ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ನೆಫ್ರೋ-ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸಿ, ನಡವಳಿಗಳಲ್ಲಿನ ಈ ಕೆಳಕಂಡ ಶಿಫಾರಸ್ಸುಗಳನ್ನು ಈ ಕೆಳಕಂಡಂತೆ ಅನುಮೋದಿಸಲಾಯಿತು :**

**ದಿನಾಂಕ : 04.01.2020ರ ಆರ್ಥಿಕ ಸಮಿತಿ ಸಭೆಯ ಅಂಶಗಳು :**

**ವಿಷಯ (ಅ) :** **ದಿನಾಂಕ: 29.09.2018 ರಂದು ಜರುಗಿದ ನೆಫ್ರೋ-ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ದಿನಾಂಕ : 26.12.2019ರ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ಬಗ್ಗೆ ಆರ್ಥಿಕ ಸಮಿತಿಯಲ್ಲಿ ಮಂಡಿಸಿದೆ.**

ದಿನಾಂಕ: 29.09.2018 ರಂದು ಜರುಗಿದ ನೆಫ್ರೋ-ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಮತ್ತು ಅದರ ಮೇಲೆ ಕೈಗೊಂಡ ಅನುಪಾಲನಾ ವರದಿಯನ್ನು ಮಂಡಿಸಲಾಗಿ,

ಸದರಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲು ಹಾಗೂ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ದಿನಾಂಕ : 26.12.2019 ರಂದು ಜರುಗಿದ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ಬಗ್ಗೆ ಆರ್ಥಿಕ ಸಮಿತಿಯ ಗಮನಕ್ಕೆ ತರಲಾಗಿ, ಆರ್ಥಿಕ ಸಮಿತಿಯು ಒಪ್ಪಿಗೆ ಸೂಚಿಸಿರುವ ಬಗ್ಗೆ ಸಭೆಯಲ್ಲಿ ಮಂಡಿಸಲಾಗಿ, ಅನುಮೋದಿಸಿತು.

**ವಿಷಯ (ಆ) :** **ನೆಫ್ರೋ-ಯುರಾಲಜಿ ಸಂಸ್ಥೆಯ 2019-20ನೇ ಸಾಲಿನ ಆಯವ್ಯಯವನ್ನು ಆರ್ಥಿಕ ಸಮಿತಿಯ ಶಿಫಾರಸ್ಸಿನನ್ವಯ ಆಡಳಿತ ಮಂಡಳಿಯು ಅನುಮೋದಿಸುವ ಬಗ್ಗೆ.**

ನೆಫ್ರೋ-ಯುರಾಲಜಿ ಸಂಸ್ಥೆಯ 2019-20ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು, 2018-19ನೇ ಸಾಲಿನ ಅನುಮೋದಿತ ಅಂದಾಜುಗಳು ಹಾಗೂ 2019-20 ನೇ ಸಾಲಿನ ಪರಿಷ್ಕೃತ ಅಂದಾಜುಗಳೊಂದಿಗೆ ಮಂಡಿಸಲಾಗಿದೆ.

**2019-20ನೇ ಸಾಲಿನ ರಾಜಸ್ವ ಅಂದಾಜುಗಳ ವಿವರಗಳು:-**

**2019-20ನೇ ಸಾಲಿಗೆ ರಾಜಸ್ವ ಲೆಕ್ಕ ಶೀರ್ಷಿಕೆಯಲ್ಲಿ ಒಟ್ಟಾರೆ ರೂ. 5990.00 ಲಕ್ಷ ರೂ.ಗಳನ್ನು ವಿವಿಧ ಮೂಲಗಳಿಂದ ಸ್ವೀಕರಿಸಲಾಗುವ ವಿವರಗಳು ಈ ಕೆಳಕಂಡಂತಿವೆ.**

**ಎ.) ರಾಜಸ್ವ**

| | | | ಲಕ್ಷ ರೂ.ಗಳಲ್ಲಿ |
|---|---|---|---|
| 1) | ಕರ್ನಾಟಕ ಸರ್ಕಾರದ ಅನುದಾನ | - | 3530.00 |
| 2) | ಆಸ್ಪತ್ರೆ ಬಳಕೆದಾರರ ಶುಲ್ಕ | - | 2000.00 |
| 3) | ದೇಣಿಗೆ | - | 0.00 |
| 4) | ಬಡ್ಡಿ | - | 400.00 |
| 5) | ಕ್ಲಿನಿಕಲ್ / ವಿದ್ಯಾರ್ಥಿಗಳ ಶುಲ್ಕ | - | 50.00 |
| 6) | ಇತರೆ | - | 10.00 |
| | ಒಟ್ಟು | | 5990.00 |

2019–20ನೇ ಸಾಲಿನ ಆಯವ್ಯಯದ ಸ್ವವಿವರ ವೆಚ್ಚದ ಅಂದಾಜುಗಳು ಈ ಕೆಳಕಂಡಂತಿವೆ.

**ಬಿ). ಬಂಡವಾಳ:–**

**ಬಂಡವಾಳ ಲೆಕ್ಕ ಶೀರ್ಷಿಕೆಯಲ್ಲಿ ಒಟ್ಟಾರೆ ರೂ. 950.00 ಲಕ್ಷ ರೂ.ಗಳನ್ನು ಅಂದಾಜಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ.**

| | | |
|---|---|---|
| **1) ಮೈಸೂರು ಶಾಖೆಗಾಗಿ** | **–** | **100.00 ಲಕ್ಷ ರೂ.ಗಳು** |
| **2) ಅನೆಕ್ಸ್ ಕಟ್ಟಡ** | **–** | **850.00 ಲಕ್ಷ ರೂ.ಗಳು** |
| | **ಒಟ್ಟು** | **950.00 ಲಕ್ಷ ರೂ ಗಳು** |

**ಒಟ್ಟು (ಎ+ಬಿ) = 5990.00+950=6940.00**

ರಾಜಸ್ವ ವೆಚ್ಚಗಳ ಪ್ರಸ್ತಾವನೆ:–

1) **ವೇತನ ಮತ್ತು ಭತ್ಯೆಗಳು:–**2018–19ನೇ ಸಾಲಿನಲ್ಲಿ 2079.01 ಲಕ್ಷ ರೂ.ಗಳು ವೆಚ್ಚವಾಗಿದ್ದು, 2019–20ನೇ ಆರ್ಥಿಕ ಸಾಲಿನಲ್ಲಿ ರೂ. 2513.00 ಲಕ್ಷಗಳನ್ನು ಈ ಉಪಶೀರ್ಷಿಕೆಯಲ್ಲಿ ಅಂದಾಜಿಸಲಾಗಿದೆ.

2) **ಪೆಟ್ರೋಲ್ ಡೀಸೆಲ್:–** ಸಂಸ್ಥೆಯ ಒಂದು ಆಂಬ್ಯುಲೆನ್ಸ್, ಮೂರು ವಾಹನಗಳು ಹಾಗೂ ಒಂದು ಜನರೇಟರ್‌ಗಳಿದ್ದು ಇವುಗಳ ನಿರ್ವಹಣೆಗೆ 2019–20ನೇ ಸಾಲಿಗೆ ರೂ 5.00 ಲಕ್ಷಗಳನ್ನು ವೆಚ್ಚವನ್ನು ಅಂದಾಜಿಸಲಾಗಿದೆ.

3) **ವಿದ್ಯುತ್ ಮತ್ತು ನೀರು ಸರಬರಾಜು:–** 2018–19ನೇ ಸಾಲಿನಲ್ಲಿ ರೂ. 99.68 ಲಕ್ಷ ವೆಚ್ಚ ಭರಿಸಲಾಗಿದ್ದು, ಈಗಾಗಲೇ ವಿದ್ಯುತ್ ಬಳಕೆ ಶುಲ್ಕದ ದರಗಳನ್ನು ಹೆಚ್ಚಿಸಿರುವುದರಿಂದ ಹಾಗೂ ನೀರು ಸರಬರಾಜಿನಲ್ಲಿ ಬಳಕೆ ದರಗಳನ್ನು ಹೆಚ್ಚಿಸಿರುವುದರಿಂದ 2019–20ನೇ ಸಾಲಿನಲ್ಲಿ ರೂ 150.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದೆ.

4) **ಔಷಧಿ ಮತ್ತು ರಸಾಯನಿಕಗಳು:–** 2018–19ನೇ ಸಾಲಿನಲ್ಲಿ 808.30 ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದ್ದು, ಹೊರರೋಗಿ ವಿಭಾಗ, ತುರ್ತು ಚಿಕಿತ್ಸೆ, ತೀವ್ರ ನಿಗಾ ಘಟಕಗಳಲ್ಲಿ ಔಷಧಿ ಬಳಕೆ ಹೆಚ್ಚಾಗುತ್ತಿದ್ದು ಮತ್ತು ಔಷಧಿ ದರಗಳು ಸಹ ಪ್ರತಿವರ್ಷ ಏರುತ್ತಿರುವುದರಿಂದ, 2019–20ನೇ ಸಾಲಿನಲ್ಲಿ ಈ ಉಪಶೀರ್ಷಿಕೆಗೆ 1000.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

5) **ಕಛೇರಿ ವೆಚ್ಚ:–** ಕಛೇರಿ ವೆಚ್ಚದ ಶೀರ್ಷಿಕೆಯಲ್ಲಿ ಲೇಖನ ಸಾಮಗ್ರಿಗಳು ಹಾಗೂ ಇತರೆ ವೆಚ್ಚಗಳಿಗೆ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

6) **ಪೀಠೋಪಕರಣ :–** ವಾರ್ಡ್‌ಗಳಿಗೆ ಅವಶ್ಯವಿರುವ ಪೀಠೋಪಕರಣಗಳು, ರೋಗಿಗಳ ಮಂಚ, ಬೆಡ್‌ಸೈಡ್ ಲಾಕರ್ಸ್, ಮೇಜು, ಕುರ್ಚಿಗಳು ಮುಂತಾದವುಗಳಿಗೆ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

7) **ಟೆಲಿಫೋನ್ ವೆಚ್ಚ:–** ಆಸ್ಪತ್ರೆ ಸಂಪರ್ಕ ವ್ಯವಸ್ಥೆ, ಆಡಳಿತ ವ್ಯವಹಾರ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗ್ರಂಥಾಲಯ ಅಂತರ್ಜಾಲ ಸಂಪರ್ಕ ವ್ಯವಸ್ಥೆಯನ್ನು ಸ್ಥಾಪಿಸಿಕೊಂಡಿರುವುದರಿಂದ 6.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

8) **ವಾಹನ ಮತ್ತು ನಿರ್ವಹಣೆ:–** ಒಂದು ಆಂಬುಲೆನ್ಸ್ ಮತ್ತು ಮೂರು ಇತರೆ ವಾಹನಗಳಿದ್ದು ಇವುಗಳ ಸರ್ವೀಸ್, ರಿಪೇರಿ ವೆಚ್ಚಗಳಿಗೆ ಪ್ರಸಕ್ತ ಸಾಲಿನಲ್ಲಿ 5.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

9) **ಜಾಹೀರಾತು:–** ಸಂಸ್ಥೆಯಲ್ಲಿ ಔಷಧಿ ಉಪಕರಣ ಸಲಕರಣೆಗಳ ಸಂಗ್ರಹಣೆ ಮತ್ತು ನೇಮಕಾತಿ ಪ್ರಕ್ರಿಯೆಗಳಿಗೆ ಕೆ.ಟಿ.ಪಿ.ಪಿ. ನಿಯಮಗಳ ರೀತ್ಯ ಜಾಹೀರಾತು ನೀಡಬೇಕಾಗಿರುವುದರಿಂದ, 4.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

10) **ವೈದ್ಯಕೀಯ ಉಪಕರಣಗಳು:–** 2017–18ನೇ ಸಾಲಿನಲ್ಲಿ ಈ ಟೆಂಡರ್ ಮೂಲಕ ವೈದ್ಯಕೀಯ ಉಪಕರಣಗಳನ್ನು ಖರೀದಿಸುವ ಸಲುವಾಗಿ ಈ ಸಂಬಂಧ 419.84 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

11) **ಆತಿಥ್ಯ ವೆಚ್ಚ:–** ಆಡಳಿತ ಮಂಡಳಿ ಸಭೆ ಹಾಗು ಇತರೆ ಸಭೆಗಳಿಗೆ ಆಹ್ವಾನಿಸುವ ಸದಸ್ಯರುಗಳಿಗೆ ಆತಿಥ್ಯಕ್ಕೆ 3.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

12) **ಪಥ್ಯಾಹಾರ ವೆಚ್ಚ:** ಸಂಸ್ಥೆಯಲ್ಲಿ ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿಯಲ್ಲಿ ಚಿಕಿತ್ಸೆ ನೀಡುವ ರೋಗಿಗಳಿಗೆ ಪಥ್ಯಾಹಾರಕ್ಕಾಗಿ ರೂ.10.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದೆ.

13) **ಹಾಸಿಗೆ ಮತ್ತು ವಸ್ತ್ರಗಳು:–** ಕೆಹೆಚ್‌ಡಿಸಿಎಲ್ ಮೂಲಕ ಪ್ರಸಕ್ತ ಸಾಲಿನಲ್ಲಿ ರೋಗಿಗಳಿಗೆ ಅವಶ್ಯವಿರುವ ಹಾಸಿಗೆ ವಸ್ತ್ರಗಳು ಹಾಗು ತೀವ್ರ ನಿಗಾ ಘಟಕ ಮತ್ತು ಓ.ಟಿ.ವಸ್ತ್ರಗಳ ಅವಶ್ಯಕತೆ ಗಮನಿಸಿ ಖರೀದಿಸಲು ಉದ್ದೇಶಿಸಿದ್ದು 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

14) **ಕಿರು ಕಾಮಗಾರಿಗಳು:–** ಸಿವಿಲ್, ಎಲೆಕ್ಟ್ರಿಕಲ್, ನೀರು ಸರಬರಾಜು, ಸಂಸ್ಥೆಗೆ ಬಣ್ಣ ಹಾಕುವ ಕಾಮಗಾರಿ ಇತ್ಯಾದಿಗಳಿಗೆ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

15) **ಲೈಬ್ರರಿ:–** ಸಂಸ್ಥೆಯಲ್ಲಿ ಸ್ನಾತ್ತಕೋತ್ತರ ಕೋರ್ಸ್‌ಗಳಾದ ಎಂಸಿಹೆಚ್ ಯುರಾಲಜಿ, ಡಿಎಂ ನೆಫ್ರೋಲಜಿ ಇವುಗಳೊಂದಿಗೆ ಫೆಲೋಷಿಪ್ ಕೋರ್ಸ್‌ಗಳು, ಡಿಪ್ಲೊಮೋ ಇನ್ ಡಯಾಲಿಸಿಸ್, ಲ್ಯಾಬೋರೇಟರಿ ಹಾಗೂ ಓಟಿ ಟೆಕ್ನಾಲಜಿ ಕೋರ್ಸ್‌ಗಳು ಜರುಗುತ್ತಿದ್ದು ವಿದ್ಯಾರ್ಥಿಗಳಿಗೆ ಅವಶ್ಯವಿರುವ ಪುಸ್ತಕ, ಜರ್ನಲ್ಸ್‌ಗಳ ಸಂಗ್ರಹಣೆಗೆ 36.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

16) **ಆಸ್ಪತ್ರೆ ಅವಶ್ಯಗಳು:–** ಔಷಧಿ ಮತ್ತು ರಾಸಾಯನಿಕಗಳನ್ನು ಹೊರತುಪಡಿಸಿ ಆಸ್ಪತ್ರೆ ಶುಚೀಕರಣಕ್ಕೆ ಅವಶ್ಯವಿರುವ ವಸ್ತುಗಳ ಸಂಗ್ರಹಣೆಗೆ 100.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

17) **ಪ್ರಯಾಣ ವೆಚ್ಚ :–** ವೈದ್ಯಕೀಯ ಬೋಧಕ ಸಿಬ್ಬಂದಿಯು ವೈಜ್ಞಾನಿಕ ಪ್ರಬಂಧಗಳನ್ನು ವೈದ್ಯಕೀಯ ಸಮಾವೇಶಗಳಲ್ಲಿ ಮಂಡಿಸಲು ಪ್ರಯಾಣ ಭತ್ಯೆಗೆ 3.00 ಲಕ್ಷ ರೂ.ಗಳ (ಮೂರು ಲಕ್ಷ ರೂಪಾಯಿಗಳು ಮಾತ್ರ) ವೆಚ್ಚವನ್ನು ಅಂದಾಜಿಸಲಾಗಿದೆ.

18) **ಎಕ್ಸ್–ರೇ ಫಿಲಂಗಳು:–** ಸಂಸ್ಥೆಯಲ್ಲಿ ಡಿಜಿಟಲ್ ಎಕ್ಸ–ರೇ ಸಂಗ್ರಹಣೆಯಾಗಿರುವುದರಿಂದ ಎಕ್ಸ್–ರೇ ಫಿಲಂ ಅವಶ್ಯಕತೆ ಕಡಿಮೆಯಾಗಿದ್ದು ಎಕ್ಸ್–ರೇ ಫಿಲಂಗಳ ಸಂಗ್ರಹಣೆಗೆ 10.00 ಲಕ್ಷ ರೂ.ಗಳ (ಹದಿಮೂರು ಲಕ್ಷ ರೂಪಾಯಿಗಳು ಮಾತ್ರ) ವೆಚ್ಚವನ್ನು ಅಂದಾಜಿಸಲಾಗಿದೆ.

19) **ವೃತ್ತಿಪರರಿಗೆ ಹಣ ಸಂದಾಯ:–** ಚಾರ್ಟರ್ಡ್ ಅಕೌಂಟೆಂಟ್‌ಗಳಿಗೆ ಲೆಕ್ಕ ತಪಾಸಣಾ ಶುಲ್ಕ, ಕಾನೂನು ಸಲಹೆಗಾರರ (ವಕೀಲರ) ಶುಲ್ಕ ಹಾಗು ಇನ್ನಿತರೆ ವೃತ್ತಿಪರ ವೆಚ್ಚಗಳಿಗೆ 18.00 ಲಕ್ಷ ರೂ.ಗಳ (ಹತ್ತು ಲಕ್ಷ ರೂಪಾಯಿಗಳು ಮಾತ್ರ) ವೆಚ್ಚವನ್ನು ಅಂದಾಜಿಸಲಾಗಿದೆ.

20) **ಮಜೂರಿ :–** ಭದ್ರತಾ ಸಿಬ್ಬಂದಿ ಸೇವೆ ಪಡೆದುಕೊಳ್ಳಲು 56.16 ಲಕ್ಷ ರೂ.ಗಳನ್ನು ಅಂದಾಜಿಸಲಾಗಿದೆ.

21) **ಗಣಕೀಕರಣ/ತಂತ್ರಾಂಶ:–** 2012–13ನೇ ಸಾಲಿನಿಂದ ಗಣಕೀಕರಣ ಯೋಜನೆ ಜಾರಿಯಲ್ಲಿದ್ದು ತಂತ್ರಾಂಶವನ್ನು ಬಳಸಲಾಗುತ್ತಿದ್ದು, ಸದರಿ ಯೋಜನೆಯು 2019–20ನೇ ಸಾಲಿನಲ್ಲಿ ಮುಂದುವರಿಯುತ್ತಿರುವುದರಿಂದ ಅವಶ್ಯವಿರುವ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

22) **ಫೀ (ಶುಲ್ಕ):–** ಸಂಸ್ಥೆಯು ಭಾರತೀಯ ವೈದ್ಯಕೀಯ ಮಂಡಳಿ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗು ಇತರೆ ಸಂಸ್ಥೆಗಳಿಂದ ಮಾನ್ಯತೆಗೆ ಹಾಗೂ ಇತರೆ ಶುಲ್ಕ ಸಂದಾಯ ಮಾಡಬೇಕಾಗಿರುವುದರಿಂದ 1.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

23) **ರಿಪೇರಿ ಹಾಗೂ ನಿರ್ವಹಣೆ:–** ಪೀಠೋಪಕರಣ, ಸಿ.ಎಸ್.ಎಸ್.ಡಿ, ಜನರೇಟರ್‌ಗಳು ವಾಷಿಂಗ್ ಯಂತ್ರಗಳು, ಹವಾ ನಿಯಂತ್ರಣ, ನೀರೆತ್ತುವ ಪಂಪ್‌ಗಳು ಹಾಗೂ ಇನ್ನಿತರೆ ವಸ್ತುಗಳ ರಿಪೇರಿ ಹಾಗೂ ನಿರ್ವಹಣೆಗೆ 150.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

24) **ಕೈತೋಟ ನಿರ್ವಹಣೆ :–** ಸಂಸ್ಥೆಯ ಕೈತೋಟ ನಿರ್ವಹಣೆಗಾಗಿ ರೂ. 5.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದೆ.

25) **ಉಪಕರಣಗಳ ವಾರ್ಷಿಕ ನಿರ್ವಹಣೆ:–** ಸಂಸ್ಥೆಯಲ್ಲಿ ಈಗಾಗಲೇ ಸಂಗ್ರಹಣೆಯಾಗಿರುವ ವೆಂಟಿಲೇಟರ್ಸ್, ಮಾನಿಟರ್ಸ್‌ಗಳು, ಓ.ಟಿ.ಲೈಟ್, ಟೇಬಲ್‌ಗಳು, ಆಕ್ಸಿಜನ್ ಲೈನ್, ಸಕ್ಷನ್ ಲೈನ್ ಹಾಗೂ ಇನ್ನಿತರೆ ಉಪಕರಣಗಳ ವಾರ್ಷಿಕ ನಿರ್ವಹಣೆಗೆ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

26) **ವೈದ್ಯಕೀಯ ಕಾರ್ಯಾಗಾರ ಮತ್ತು ಸಭೆಗಳು :** ಸಂಸ್ಥೆಯಲ್ಲಿ ವೈದ್ಯಕೀಯ ಕಾರ್ಯಾಗಾರ ಮತ್ತು ಸಭೆಗಳನ್ನು ಜರುಗಿಸಲು 5.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

27) **ಸಂಶೋಧನಾ ವೆಚ್ಚ/ಎನ್.ಎ.ಬಿ.ಹೆಚ್ :** ರೂ.250 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದೆ.

28) **ವೈದ್ಯಕೀಯ ಮರುಪಾವತಿ :** ಸಂಸ್ಥೆಯಲ್ಲಿ ವೈದ್ಯಕೀಯ ಮರುಪಾವತಿಗಾಗಿ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

29) **ಶೈಕ್ಷಣಿಕ ವೆಚ್ಚ:** ಸಂಸ್ಥೆಯ ಶೈಕ್ಷಣಿಕ ಚಟುವಟಿಕೆಗಳಿಗಾಗಿ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

ಇನ್ನು ಮುಂದೆ ಆ ಸಾಲಿನ ಆಯವ್ಯಯವನ್ನು ಏಪ್ರಿಲ್–ಮೇ ತಿಂಗಳಲ್ಲೇ ಆರ್ಥಿಕ ಸಮಿತಿಯ ಅನುಮೋದನೆ ಪಡೆಯುವಂತೆ ಸೂಚಿಸಿ, ಮೇಲ್ಕಂಡಂತೆ 2019–20ನೇ ಸಾಲಿನ ಆಯವ್ಯಯವನ್ನು ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡಿರುವ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸನ್ನು ಆಡಳಿತ ಮಂಡಳಿಯು ಅನುಮೋದಿಸಿತು.

**ವಿಷಯ (ಇ) : ಸಂಸ್ಥೆಯ 2018–2019 ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪಟ್ಟಿಯನ್ನು ಆಡಳಿತ ಮಂಡಳಿಯು ಅನುಮೋದಿಸುವ ಬಗ್ಗೆ.**

2018–19ನೇ ಸಾಲಿನ ಲೆಕ್ಕಪತ್ರ ಪರಿಶೋಧನೆಗಾಗಿ ಸಂಸ್ಥೆಯ ಲೆಕ್ಕಪರಿಶೋಧಕರಾಗಿ ನೇಮಕಗೊಂಡಿರುವ ಮೆ॥ ಎಂ ಎಸ್ ಆರ್ ಕೆ ಅಂಡ್ ಕಂಪನಿ, ಚಾರ್ಟೆಡ್ ಅಕೌಂಟೆಂಟ್ಸ್, ನಂ.176, ಮೂರನೇ ಮಹಡಿ, 10ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ಇವರು ಪರಿಶೋಧಿಸಲ್ಪಟ್ಟ ಸಂಸ್ಥೆಯ 2018–2019ನೇ ಸಾಲಿನ ಲೆಕ್ಕಪತ್ರಗಳ ಪಟ್ಟಿಗಳನ್ನು ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಆರ್ಥಿಕ ಸಮಿತಿಯು ಪರಿಶೀಲಿಸಿ ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯು ಅನುಮೋದನೆ ಕೋರಲಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸನ್ನು ಆಡಳಿತ ಮಂಡಳಿಯು ಅನುಮೋದಿಸಿತು.

**ವಿಷಯ (ಈ) : 2019–20 ನೇ ಸಾಲಿಗೆ ಸಂಸ್ಥೆಗೆ ಅವಶ್ಯಕವಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳ ಸಂಗ್ರಹಣೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.**

ನೆಫ್ರೋ–ಯುರಾಲಜಿ ಸಂಸ್ಥೆಗೆ ಚಿಕಿತ್ಸೆಗಾಗಿ ಬರುವ ರೋಗಿಗಳಿಗೆ ಉತ್ತಮ ರೀತಿಯಲ್ಲಿ ಚಿಕಿತ್ಸೆಗಳನ್ನು ನೀಡಲು ಈ ಕೆಳಗೆ ತಿಳಿಸಿರುವ ವೈದ್ಯಕೀಯ ಉಪಕರಣಗಳ ಅವಶ್ಯಕತೆ ಇರುತ್ತದೆ.

| Sl. No | Name of the equipments | Qty | Approx. |
|---|---|---|---|
| 1 | C-Arm Fluroscopy Unit | 2 | 70 Lakhs |
| 2 | OT Tables | 4 | 60 Lakhs |
| 3 | OT Lights | 4 | 20 Lakhs |
| 4 | Ultrasound Scan | 1 | 25 Lakhs |
| 5 | Flexible Ureteroscope | 3 | 15 Lakhs |
| 6 | PACS System | 1 | 50 Lakhs |
| | MYSORE UNIT | | |
| 7 | Cardiac Monitors | 10 | 10 Lakhs |
| 8 | Syringe Pump | 10 | 5 Lakhs |
| 9 | ICU Ventilators | 3 | 30 Lakhs |
| 10 | Laparoscopy Urlogy Instruments | 1 | 10 Lakhs |
| 11 | Three Chip Camera | 1 | 10 Lakhs |
| 12 | 30 Watt Laser | 1 | 30 Lakhs |
| 13 | Miscellaneous | - | 84 Lakhs |
| | | | |
| | **Total** | | **420 Lakhs** |

ಸಂಸ್ಥೆಗೆ ಅವಶ್ಯಕವಿರುವ ಮೇಲ್ಕಂಡ ವೈದ್ಯಕೀಯ ಉಪಕರಣಗಳನ್ನು ನಿಯಮಾನುಸಾರ, ಬೆಂಗಳೂರು ಸಂಸ್ಥೆಗೂ ಹಾಗೂ ಮೈಸೂರು ಘಟಕಕ್ಕೂ ಸಂಗ್ರಹಿಸಲು ಆಡಳಿತ ಮಂಡಳಿಯ ಅನುಮೋದನೆಗಾಗಿ ಶಿಫಾರಸ್ಸು ನೀಡುವಂತೆ ಕೋರಲಾಗಿ, ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದಲೇ ವೈದ್ಯಕೀಯ ಉಪಕರಣಗಳನ್ನು ಸಂಗ್ರಹಿಸಲು ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿದ್ದರ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ನಿಯಮಾನುಸಾರ ಕ್ರಮವಹಿಸುವಂತೆ ಸೂಚಿಸಿ ಅನುಮೋದಿಸಿತು.

**ವಿಷಯ (ಉ) : ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ಹಾಲಿ ಇರುವ ಹೊರರೋಗಿ ಚಿಕಿತ್ಸಾ ವಿಭಾಗದ ಕಟ್ಟಡವನ್ನು ನೂತನವಾಗಿ ನಿರ್ಮಿಸುವ ಸಂಬಂಧ ಆರ್ಥಿಕ ಸಮಿತಿಯ ಶಿಫಾರಸ್ಸಿಗೆ ಆಡಳಿತ ಮಂಡಳಿಯು ಅನುಮೋದನೆ ನೀಡುವ ಬಗ್ಗೆ.**

ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ಹಾಲಿ ಇರುವ ಹೊರರೋಗಿ ಚಿಕಿತ್ಸಾ ವಿಭಾಗದ ಕಟ್ಟಡವು ಈ ಹಿಂದೆ ಜಯದೇವ ಹೃದ್ರೋಗ ಸಂಸ್ಥೆಯು ಉಪಯೋಗಿಸುತ್ತಿದ್ದ, ಹಳೆಯ ಕಟ್ಟಡವಾಗಿದ್ದು, ಪ್ರಸ್ತುತ ಶಿಥಿಲಾವಸ್ಥೆಯ ಹಂತ ತಲುಪಿರುತ್ತದೆ. ನೆಫ್ರೋಲಜಿ ಹಾಗೂ ಯುರಾಲಜಿಗೆ ಸಂಬಂಧಿಸಿದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಸರಿಸುಮಾರು 300 ರಿಂದ 350 ಸಂಖ್ಯೆಯ ರೋಗಿಗಳು ಸಂಸ್ಥೆಗೆ ದಿನವಹಿ ಭೇಟಿ ನೀಡುತ್ತಿದ್ದು, ಹಾಲಿ ಇರುವ ಷೆಡ್ ಮಾದರಿಯ ಕಟ್ಟಡದ ಸ್ಥಳವು ಸಂಕುಚಿತವಾಗಿರುವುದರಿಂದ, ಸೂಕ್ತ ರೀತಿಯಲ್ಲಿ ಹೊರರೋಗಿ ವಿಭಾಗವನ್ನು ನಿರ್ವಹಿಸಲು ಕಷ್ಟವಾಗುತ್ತಿದೆ. ಆದುದರಿಂದ, ಸದರಿ ಕಟ್ಟಡವನ್ನು ಕೆಡವಿ 03 ಅಂತಸ್ತುಗಳ ಕಟ್ಟಡವನ್ನು ನೂತನವಾಗಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಸದರಿ ಕಟ್ಟಡ ನಿರ್ಮಾಣಕ್ಕಾಗಿ ಅಂದಾಜು ರೂ. 16.00 ಕೋಟಿಗಳ ಅನುದಾನದ ಅವಶ್ಯಕತೆ ಇದ್ದು, ಈ ಸಂಬಂಧ ಸಂಬಂಧಪಟ್ಟ ಅಭಿಯಂತರರಿಂದ Line Estimate ಪಡೆದು ದಿನಾಂಕ 26.12.2019 ರಂದು ಜರುಗಿದ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿ, ಆಡಳಿತ ಮಂಡಳಿಯು ಆಡಳಿತಾತ್ಮಕ ಅನುಮೋದನೆ ನೀಡಿತು.

ತತ್ಸಂಬಂಧ, ಆಡಳಿತ ಮಂಡಳಿಯ ಆಡಳಿತಾತ್ಮಕ ಅನುಮೋದನೆಯ ಮೇರೆಗೆ, ಪ್ರಸ್ತಾಪಿತ ಹೊರರೋಗಿ ಕಟ್ಟಡ ಕಾಮಗಾರಿಗಾಗಿ ಅಂದಾಜಿಸಲಾದ ರೂ.16 ಕೋಟಿ ಅನುದಾನವನ್ನು ಮಂಜೂರು ಮಾಡಲು ಆಡಳಿತ ಮಂಡಳಿಯ ಅನುಮೋದನೆಗೆ ಆರ್ಥಿಕ ಸಮಿತಿಯು ಶಿಫಾರಸ್ಸು ನೀಡುವಂತೆ ಕೋರಲಾಗಿ, ಆರ್ಥಿಕ ಸಮಿತಿಯು ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಂಸ್ಥೆಯಲ್ಲಿ ಲಭ್ಯವಿರುವ ಆಂತರಿಕ ಸಂಪನ್ಮೂಲವನ್ನು ಬಳಕೆ ಮಾಡಿಕೊಂಡು ಹೊರರೋಗಿ ಕಟ್ಟಡವನ್ನು ಹಂತ–ಹಂತವಾಗಿ (Stage Wise) ನಿರ್ಮಾಣ ಮಾಡಿಕೊಳ್ಳುವಂತೆ ಸೂಚಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿರುವ ಮೇರೆಗೆ ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಸಮ್ಮತಿಸಿತು.

**ವಿಷಯ (ಊ) : ಸಂಸ್ಥೆಯ ಅನೆಕ್ಸ್ ಕಟ್ಟಡಕ್ಕೆ ಅವಶ್ಯಕವಿರುವ ಪೀಠೋಪಕರಣಗಳನ್ನು ಖರೀದಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ.**

ಸಂಸ್ಥೆಗೆ ಹೊಂದಿಕೊಂಡಂತೆ ಸುಮಾರು 150 ಹಾಸಿಗೆ ಸಾಮರ್ಥ್ಯದ ಮೂರು ಅಂತ್ತಸಿನ ಅನೆಕ್ಸ್ ಕಟ್ಟಡ ನಿರ್ಮಾಣ ಕಾಮಗಾರಿಯು ಅಂತಿಮ ಹಂತದಲ್ಲಿದ್ದು, ಸರ್ಕಾರದ ಆದೇಶ ಸಂಖ್ಯೆ ಆಕುಕ 16 ಎಂ.ಎಸ್.ಎಫ್ 2016 ದಿನಾಂಕ 06.04.2017 ರಲ್ಲಿ ಅನೆಕ್ಸ್ ಕಟ್ಟಡಕ್ಕೆ ಅವಶ್ಯಕವಿರುವ ವೈದ್ಯಕೀಯ ಉಪಕರಣ ಹಾಗೂ ಪೀಠೋಪಕರಣಗಳನ್ನು ಖರೀದಿಸಲು ಮತ್ತು ಇತರೇ ಮೂಲಭೂತ ಸೌಲಭ್ಯಗಳಿಗಾಗಿ ರೂ. 425 ಲಕ್ಷಗಳ ಅನುದಾನ ಮಂಜೂರಾತಿಗೆ ಆಡಳಿತಾತ್ಮಕ ಅನುಮತಿ ದೊರಕಿರುತ್ತದೆ.

ಇಂದಿನ ಮಾರುಕಟ್ಟೆಯ ದರಗಳಿಗೆ ಅನುಗುಣವಾಗಿ ಅತ್ಯವಶ್ಯಕವಾದ ವೈದ್ಯಕೀಯ ಉಪಕರಣಗಳು, ಪೀಠೋಪಕರಣಗಳು, ಹಾಗೂ ಇತರೆ ಮೂಲ ಭೂತ ಸೌಲಭ್ಯಗಳನ್ನು ಹೊಂದಲು ಕನಿಷ್ಠ 20 ಕೋಟಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುವುದರಿಂದ, ಅಗತ್ಯವಿರುವ ರೂ. 20 ಕೋಟಿ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಲು ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡುವಂತೆ ಕೋರಲಾಗಿ, ಆರ್ಥಿಕ ಸಮಿತಿಯು ಸಂಸ್ಥೆಯಲ್ಲಿ ಲಭ್ಯವಿರುವ ಆಂತರಿಕ ಸಂಪನ್ಮೂಲದಿಂದ ಅತ್ಯವಶ್ಯಕವಾದ ವೈದ್ಯಕೀಯ ಉಪಕರಣಗಳು, ಪೀಠೋಪಕರಣಗಳು, ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಹೊಂದುವಂತೆ ಸೂಚಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿತು.

| INSTITUTE OF NEPHROUROLOGY<br>LIST OF EQUIPMENTS/INSTRUMENTS/FURNITURES | | |
|---|---|---|
| **SL NO** | **NAMES** | **NOS** |
| 1 | Cardiac Monitor | 60 |
| 2 | Defibrilator | 12 |
| 3 | Haemodialysis Machine | 50 |
| 4 | Mechanical Ventilator | 20 |
| 5 | ABG Machine | 2 |
| 6 | Infusion Pump | 30 |
| 7 | Syringe Pump | 30 |
| 8 | Pulse oxymeter Machine | 18 |

| | | |
|---|---|---|
| 9 | Finger Tip Pulse Oxymeter | 20 |
| 10 | ET CO2 Monitor | 7 |
| 11 | NIV Machine | 12 |
| 12 | Resusitation Kit | 15 |
| 13 | ECG Machine | 17 |
| 14 | Nebulizer | 23 |
| 15 | Digital BP Appratus | 43 |
| 16 | Stethoscope | 66 |
| 17 | Portable Electrical Suction Machine | 18 |
| 18 | Glucometer | 24 |
| 19 | B Type O2 Cylinder with jar | 49 |
| 20 | Wall mounted O2 Regulator with jar | 259 |
| 21 | Wall mounted Suction Regulator with jar | 259 |
| 22 | Bed Pan Washer | 5 |
| 23 | Fogging Machine | 5 |
| 24 | Portable x-ray Machine | 2 |
| 25 | Special Cots (4 Fold) | 107 |
| 26 | General ward cots ( 2 Fold) | 133 |
| 27 | Bed side Locker Special | 162 |
| 28 | Matress Rexin | 107 |
| 29 | Matress Soft Foam | 107 |
| 30 | Pillow Rexin | 133 |
| 31 | Pillow Soft Foam | 133 |
| 32 | Patient examination Couch | 9 |
| 33 | Cardiac Table | 108 |
| 34 | Endocart | 4 |
| 35 | Portable IV Stand with 4 Hooks | 130 |
| 36 | Crash Cart | 15 |
| 37 | Treatment Trolley | 11 |
| 38 | Dressing trolley | 15 |
| 39 | Oxygen Trolley | 15 |

| | | |
|---|---|---|
| 40 | Moveable Screen (Three fold Screen) | 15 |
| 41 | Back Rest | 10 |
| 42 | Alpha Bed | 19 |
| 43 | X-ray View Box | 28 |
| 44 | Wheel chair | 43 |
| 45 | Patient Shifting Trolley (Special) | 23 |
| 46 | Patient Shifting Trolley (General) | 17 |
| 47 | Indent Trolley | 13 |
| 48 | Linen Changing Trolley | 15 |
| 49 | wringler trolley | 20 |
| 50 | Bio-Medical Waste Management Trolley | 16 |
| 51 | Laundry Trolley with lid | 4 |
| 52 | Weighing Scale | 14 |
| 53 | Refrigerator | 16 |
| 54 | Spot Light | 4 |
| 55 | Wrinch | 20 |
| 56 | 02 opner Key | 20 |
| 57 | Computer with table | 18 |
| 58 | Printer | 18 |
| 59 | Central monitor | 5 |
| 60 | Racks | 68 |
| 61 | Cupboard | 46 |
| 62 | Pigeon Hole CupBoard | 30 |
| 63 | S S Stools | 100 |
| 64 | Notice Board | 18 |
| 65 | Tandom Chair Single Seated | 56 |
| 66 | Tandom Chair 3 Seated | 50 |
| 67 | Ladder | 5 |
| 68 | wooden table with chair | 25 |
| 69 | S S Foot step | 33 |
| 70 | Spillage Kit | 15 |

| | | |
|---|---|---|
| 71 | S S Bed Pan Washer | 20 |
| 72 | Weighing scale with stand | 2 |
| 73 | Diwan cots | 6 |
| 74 | Air port chair ( 3 seated ) | 4 |
| 75 | Executive chair | 12 |
| 76 | Rotating chair revolving | 13 |
| 77 | Rotating Stools ( Adjustable) | 6 |
| 78 | Aquagurd | 12 |
| 79 | Geyser | 14 |
| 80 | Tissue holder | 25 |
| 81 | Tea pai ( Special ward) | 6 |
| 82 | Soap dispenser | 20 |
| 83 | Sofa set ( Special ward) | 6 |
| 84 | Micro oven | 9 |
| 85 | Square trolly | 32 |
| 86 | Square trolly (Laparoscopic Big) | 4 |
| 87 | Manual BP appratus | 24 |
| 88 | Digital Thermometer | 50 |

ಮೇಲ್ಕಂಡ ವೈದ್ಯಕೀಯ ಉಪಕರಣಗಳು, ಪೀಠೋಪಕರಣಗಳು, ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಸಂಸ್ಥೆಯಲ್ಲಿ ಲಭ್ಯವಿರುವ ಆಂತರಿಕ ಸಂಪನ್ಮೂಲದಿಂದ ಹೊಂದುವಂತೆ ಆರ್ಥಿಕ ಸಮಿತಿಯು ಸೂಚಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಆಡಳಿತ ಮಂಡಳಿಯು ಅನುಮೋದಿಸಿತು.

**ವಿಷಯ (ಋ) : ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂದರ್ಶಕ ವೈದ್ಯರ ಗೌರವಧನವನ್ನು ಪರಿಷ್ಕರಿಸಲು ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡುವ ಬಗ್ಗೆ.**

ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂದರ್ಶಕ ವೈದ್ಯರಿಗೆ ರೂ. 60,000/-ಗಳ ಗೌರವಧನವನ್ನು ನೀಡಲಾಗುತ್ತಿದೆ. ಲಭ್ಯವಿರುವ 08 ಹಾಸಿಗೆ ಸೌಲಭ್ಯವುಳ್ಳ ತೀವ್ರ ನಿಗಾ ಘಟಕಕ್ಕೆ Intensivist ಸೇವೆ ಪಡೆಯಲು ಕಷ್ಟವಾಗುತ್ತಿದ್ದು, ಸದರಿ ಘಟಕವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಕಷ್ಟಸಾಧ್ಯವಾಗುತ್ತಿದೆ. ಅಲ್ಲದೇ, ಪ್ರಸ್ತುತ ಪಾವತಿಸುತ್ತಿರುವ ಗೌರವಧನವು 5 ವರ್ಷಗಳ ಹಿಂದೆ ಪರಿಷ್ಕೃತವಾಗಿದ್ದು, ಸದರಿ ಗೌರವಧನಕ್ಕೆ ಪರಿಣಿತ ವೈದ್ಯರುಗಳು ಲಭ್ಯವಾಗುತ್ತಿಲ್ಲ. ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಯದೇವ ಹೃದ್ರೋಗ ಸಂಸ್ಥೆ, ಪಿ.ಎಂ.ಎಸ್.ಎಸ್.ವೈ, ಗ್ಯಾಸ್ಟ್ರೋಎಂಟ್ರಾಲಜಿ ಹಾಗೂ ಟ್ರಾಮಾ ಕೇರ್ ಸೆಂಟರ್‌ಗಳಲ್ಲಿ ರೂ. 1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಗಳವರೆಗೆ

ಗೌರವಧನವನ್ನು ನೀಡಲಾಗುತ್ತಿದೆ. ತತ್ಸಂಬಂಧ ಸಂಸ್ಥೆಯಲ್ಲಿ ಪ್ರಸಕ್ತ ನೀಡುತ್ತಿರುವ ರೂ. 60,000/– ಗಳ ಗೌರವಧನವನ್ನು ರೂ. 1,00,000/– ಗಳಿಗೆ ಪರಿಷ್ಕರಿಸಿ ಪಾವತಿಸಲು ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡುವಂತೆ ಕೋರಲಾಗಿ, ಈ ಬಗ್ಗೆ ಸಮ್ಮತಿಸಿ, ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡಿದ್ದ ಮೇರೆಗೆ, ಆರ್ಥಿಕ ಸಮಿತಿಯ ಶಿಫಾರಸ್ಸನ್ನು ಆಡಳಿತ ಮಂಡಳಿಯು ಅನುಮೋದಿಸಿತು.

**ವಿಷಯ (ಎ) : ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನಿವೃತ್ತ ಸರ್ಕಾರಿ ನೌಕರರನ್ನು ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಮಾಸಿಕ ಗುತ್ತಿಗೆ ವೇತನವನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ರೀತ್ಯ ನಿಗದಿಪಡಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.**

ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನಿವೃತ್ತ ಸರ್ಕಾರಿ ನೌಕರರನ್ನು ನೇಮಕಾತಿ ಮಾಡಿಕೊಳ್ಳುವ ಸಂದರ್ಭಗಳಲ್ಲಿ ಮಾಸಿಕ ವೇತನವನ್ನು ನಿಗದಿಪಡಿಸಲು ಕರ್ನಾಟಕ ನಾಗರೀಕ ಸೇವಾ ನಿಯಾಮಾವಳಿಗಳ 1957 ರ ನಿಯಮ 313 ರಿಂದ 320ರ ಅನುಸಾರ ಕ್ರಮವಹಿಸಲು ಆಡಳಿತ ಮಂಡಳಿಯ ಅನುಮೋದನೆಗೆ ಆರ್ಥಿಕ ಸಮಿತಿಯ ಶಿಫಾರಸ್ಸು ಕೋರಲಾಗಿ, ಮೇಲ್ಕಂಡ ನಿಯಮದಂತೆ ಕ್ರಮವಹಿಸಲು ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿದ್ದನ್ವಯ, ಆಡಳಿತ ಮಂಡಳಿಯು ಅನುಮೋದಿಸಿತು.

**ವಿಷಯ (ಏ) : ಸಂಸ್ಥೆಯಲ್ಲಿ 05 ಶುಶ್ರೂಷಕ ಹುದ್ದೆಗಳನ್ನು ಸೃಜಿಸಲು ಆಡಳಿತ ಮಂಡಳಿಯು ಅನುಮೋದನೆ ನೀಡುವ ಬಗ್ಗೆ.**

ಸಂಸ್ಥೆಯಲ್ಲಿ ಒಟ್ಟು 115 ಶುಶ್ರೂಷಕರ ಹುದ್ದೆಗಳು ಸೃಜನೆಯಾಗಿದ್ದು, ಸದರಿ ಹುದ್ದೆಗಳಲ್ಲಿ 05 ಶುಶ್ರೂಷಕರ ಹುದ್ದೆಗಳನ್ನು ದಿನಾಂಕ : 26.12.2019ರಂದು ಜರುಗಿದ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಮೇಲ್ದರ್ಜೆಗೇರಿಸಲು ಅನುಮೋದನೆ ಪಡೆಯಲಾಗಿದೆ. ತತ್ಸಂಬಂಧ ಸದರಿ ಮೇಲ್ದರ್ಜೆಗೇರಿಸಿದ ಹುದ್ದೆಗಳಿಂದ ತೆರವಾದ 05 ಶುಶ್ರೂಷಕರ ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲು ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡುವಂತೆ ಕೋರಲಾಗಿ, 05 ಶುಶ್ರೂಷಕ ಹುದ್ದೆಗಳನ್ನು ಸೃಜಿಸಲು ಶಿಫಾರಸ್ಸು ನೀಡಿತು ಹಾಗೂ ಆರ್ಥಿಕ ಇಲಾಖೆಗೆ ಅನುಮತಿಗಾಗಿ ಸಲ್ಲಿಸಲು ತಿಳಿಸಿತು.

**ಹುದ್ದೆಯ ವಿವರ, ವೇತನ ಶ್ರೇಣಿ, ವಾರ್ಷಿಕ ಅಂದಾಜು ವೆಚ್ಚ ಇವುಗಳ ವಿವರ ಕೆಳಕಂಡಂತಿದೆ:**

| **ಕ್ರಮ ಸಂಖ್ಯೆ** | **ಹುದ್ದೆಯ ಹೆಸರು** | **ಸೃಜಿಸುವ ಹುದ್ದೆಗಳ ಸಂಖ್ಯೆ** | **ವೇತನ ಶ್ರೇಣಿ (ರೂ.)** | **ಸರಾಸರಿ ಮಾಸಿಕ ವೇತನ ಮತ್ತು ಭತ್ಯೆಗಳು (ಒಬ್ಬರಿಗೆ)(ರೂ)** | **ಸರಾಸರಿ ಮಾಸಿಕ ವೇತನ ಮತ್ತು ಭತ್ಯೆಗಳು (ಐವರಿಗೆ)(ರೂ.)** | **ಅಂದಾಜು ವಾರ್ಷಿಕ ವೆಚ್ಚ (ಐವರಿಗೆ)(ರೂ.)** |
|---|---|---|---|---|---|---|
| 1 | ಶುಶ್ರೂಷಕರು | 05 | 33450–62600 | 45241.00 | 226205.00 | 2714460.00 |

ಆರ್ಥಿಕ ಸಮಿತಿಯ ಶಿಫಾರಸ್ಸಿನಂತೆ, 05 ಶುಶ್ರೂಷಕ ಹುದ್ದೆಗಳನ್ನು ಸೃಜಿಸಲು ಹಾಗೂ ಆರ್ಥಿಕ ಇಲಾಖೆಗೆ ಅನುಮತಿಗಾಗಿ ಸಲ್ಲಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ನಿಯಮಾನುಸಾರ ಕ್ರಮವಹಿಸುವಂತೆ ಸೂಚಿಸಿ, ಅನುಮೋದಿಸಿತು.

**ವಿಷಯ (ಐ) : ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಹಿರಿಯ ತಂತ್ರಜ್ಞರ ಹುದ್ದೆಗಳನ್ನು ಸೃಜಿಸಲು ಆಡಳಿತ ಮಂಡಳಿಯು ಅನುಮೋದನೆ ನೀಡುವ ಬಗ್ಗೆ.**

ಸಂಸ್ಥೆಯಲ್ಲಿ ಈ ಕೆಳಕಂಡಂತೆ ತಂತ್ರಜ್ಞರ ಖಾಯಂ ಹುದ್ದೆಗಳು ಸೃಜನೆಯಾಗಿದ್ದು, ಸದರಿ ಹುದ್ದೆಗಳಲ್ಲಿ 13 ವರ್ಷಗಳಿಂದಲೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದರಿ ನೌಕರರು ಪದೋನ್ನತಿಗೆ ಅರ್ಹರಿದ್ದು, ಪದೋನ್ನತಿ ನೀಡಲು ಅವಶ್ಯಕ ಹುದ್ದೆಗಳು ಸೃಜನೆಯಾಗಿರುವುದಿಲ್ಲ. ತತ್ಸಂಬಂಧ ಹಿರಿಯ ತಂತ್ರಜ್ಞರ ಹುದ್ದೆಗಳನ್ನು ಈ ಕೆಳಕಂಡಂತೆ ಮೇಲ್ದರ್ಜೆಗೇರಿಸಿ ಅದರಿಂದ ತೆರವಾಗುವ ತಂತ್ರಜ್ಞರ ಹುದ್ದೆಗಳನ್ನು ಸೃಜಿಸಲು ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡುವಂತೆ ಕೋರಲಾಗಿ, **ಹುದ್ದೆಯ ವಿವರ, ವೇತನ ಶ್ರೇಣಿ, ವಾರ್ಷಿಕ ಅಂದಾಜು ವೆಚ್ಚ ಇವುಗಳ ವಿವರ ಈ ಕೆಳಕಂಡಂತಿದೆ:**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಸೃಜಿಸುವ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ (ರೂ.) | ಸರಾಸರಿ ಮಾಸಿಕ ವೇತನ ಮತ್ತು ಭತ್ಯೆಗಳು (ಒಬ್ಬರಿಗೆ)(ರೂ) | ಸರಾಸರಿ ಮಾಸಿಕ ವೇತನ ಮತ್ತು ಭತ್ಯೆಗಳು (ರೂ.) | ಅಂದಾಜು ವಾರ್ಷಿಕ ವೆಚ್ಚ (ರೂ.) |
|---|---|---|---|---|---|---|
| 1 | ಡಯಾಲಿಸಿಸ್ ಹಿರಿಯ ತಂತ್ರಜ್ಞರು | 04 | 30350–58250 | 41048.00 | 205240.00 | 2462880.00 |
| 2 | ಶಸ್ತ್ರಚಿಕಿತ್ಸಾ ಹಿರಿಯ ತಂತ್ರಜ್ಞರು | 02 | 30350–58250 | 41048.00 | 82096.00 | 985152.00 |
| 3 | ಪ್ರಯೋಗಶಾಲಾ ಹಿರಿಯ ತಂತ್ರಜ್ಞರು | 03 | 30350–58250 | 41048.00 | 123144.00 | 1477728.00 |
| 4 | ಕ್ಷ–ಕಿರಣ ಹಿರಿಯ ತಂತ್ರಜ್ಞರು | 03 | 30350–58250 | 41048.00 | 123144.00 | 1477728.00 |
| **ಒಟ್ಟು** | | | | | | **6403488.00** |

ಮೇಲ್ಕಂಡಂತೆ ಹಿರಿಯ ತಂತ್ರಜ್ಞರ ಹುದ್ದೆಗಳನ್ನು ಮೇಲ್ದರ್ಜೆಗೇರಿಸಿ, ಅದರಿಂದ ತೆರವಾಗುವ ತಂತ್ರಜ್ಞರ ಹುದ್ದೆಗಳನ್ನು ನಿಯಮಾನುಸಾರ ಸೃಜಿಸುವಂತೆ ಸೂಚಿಸಿ, ಆರ್ಥಿಕ ಇಲಾಖೆಗೆ ಅನುಮತಿಗಾಗಿ ಸಲ್ಲಿಸಲು ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ನಿಯಮಾನುಸಾರ ಕ್ರಮವಹಿಸುವಂತೆ ಸೂಚಿಸಲಾಯಿತು.

**ವಿಷಯ (ಒ) : ಸಂಸ್ಥೆಯ ಹಿರಿಯ ವಾಹನ ಚಾಲಕರ ಹುದ್ದೆಗಳನ್ನು ಸೃಜಿಸಲು ಆಡಳಿತ ಮಂಡಳಿಯು ಅನುಮೋದನೆ ನೀಡುವ ಬಗ್ಗೆ.**

ಸಂಸ್ಥೆಯಲ್ಲಿ ವಾಹನ ಚಾಲಕರ 04 ಖಾಯಂ ಹಾಗೂ 01 ಹೊರಗುತ್ತಿಗೆ ಆಧಾರಿತ ಹುದ್ದೆಗಳು ಸೃಜನೆಯಾಗಿದ್ದು, ಸದರಿ ಹುದ್ದೆಗಳಲ್ಲಿ 10 ವರ್ಷಗಳಿಂದಲೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರಿ ಆದೇಶ ಸಂಖ್ಯೆ : ಆಇ 05 ಎಸ್ ಆರ್ ಪಿ 89 ಬೆಂಗಳೂರು ದಿನಾಂಕ : 6ನೇ ಜುಲೈ 1989 ರಲ್ಲಿ ಮಂಜೂರಾಗಿರುವ 5 ಹುದ್ದೆಗಳಲ್ಲಿ ಶೇ. 20 ರಷ್ಟು ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಲು ಅವಕಾಶವಿರುತ್ತದೆ. ಸಂಸ್ಥೆಯಲ್ಲಿ 04 ಚಾಲಕರು ಪದೋನ್ನತಿಗೆ ಅರ್ಹರಿದ್ದು, ಪದೋನ್ನತಿ ನೀಡಲು ಅವಶ್ಯಕ ಹುದ್ದೆಗಳು ಸೃಜನೆಯಾಗಿರುವುದಿಲ್ಲ. ತತ್ಸಂಬಂಧ ಪ್ರಸ್ತಾಪಿತ ಆದೇಶದಂತೆ 01 ಹಿರಿಯ ವಾಹನ ಚಾಲಕರ ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲು ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡುವಂತೆ ಕೋರಲಾಗಿ, ಮೇಲ್ಕಂಡ ಸರ್ಕಾರದ ಆದೇಶದನ್ವಯ ಕ್ರಮವಹಿಸುವಂತೆ ಸೂಚಿಸಿ, ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡಿತು.

**ಹುದ್ದೆಯ ವಿವರ, ವೇತನ ಶ್ರೇಣಿ, ವಾರ್ಷಿಕ ಅಂದಾಜು ವೆಚ್ಚ ಇವುಗಳ ವಿವರ ಈ ಕೆಳಕಂಡಂತಿದೆ:**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಸೃಜಿಸುವ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ (ರೂ.) | ಸರಾಸರಿ ಮಾಸಿಕ ವೇತನ ಮತ್ತು ಭತ್ಯೆಗಳು (ಒಬ್ಬರಿಗೆ)(ರೂ) | ಅಂದಾಜು ವಾರ್ಷಿಕ ವೆಚ್ಚ (ರೂ.) |
|---|---|---|---|---|---|
| 1 | ಹಿರಿಯ ವಾಹನ ಚಾಲಕರು | 01 | 27650–52650 | 37396.00 | 448752.00 |
| ಒಟ್ಟು | | | | | **448752.00** |

ನಿಯಮಾನುಸಾರ, ಸಂಸ್ಥೆಯಲ್ಲಿ 01 ಹಿರಿಯ ವಾಹನ ಚಾಲಕರ ಹುದ್ದೆಯನ್ನು ಸೃಜಿಸಲು ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿರುವ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ದಿನಾಂಕ : 07.10.2020ರ ಆರ್ಥಿಕ ಸಮಿತಿ ಸಭೆಯ ಅಂಶಗಳು :**

**ವಿಷಯ (ಅ) : ದಿನಾಂಕ : 04.01.2020 ರಂದು ಜರುಗಿದ ನೆಫ್ರೋ–ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಆಡಳಿತ ಮಂಡಳಿಯು ಅನುಮೋದನೆ ನೀಡುವ ಬಗ್ಗೆ.**

ದಿನಾಂಕ: 04.01.2020 ರಂದು ಜರುಗಿದ ನೆಫ್ರೋ–ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಮತ್ತು ಅದರ ಮೇಲೆ ಕೈಗೊಂಡ ಅನುಪಾಲನಾ ವರದಿಯನ್ನು ಮಂಡಿಸಲಾಗಿ,

ಸದರಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲು ಹಾಗೂ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಮುಂದೆ ಜರುಗುವ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಸೂಚಿಸಿರುವ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸಲಾಗಿ, ಅನುಮೋದಿಸಿತು.

**ವಿಷಯ (ಆ) : ನೆಫ್ರೋ–ಯುರಾಲಜಿ ಸಂಸ್ಥೆಯ 2020–21ನೇ ಸಾಲಿನ ಆಯವ್ಯಯವನ್ನು ಆಡಳಿತ ಮಂಡಳಿಯು ಅನುಮೋದಿಸುವ ಬಗ್ಗೆ.**

ನೆಫ್ರೋ–ಯುರಾಲಜಿ ಸಂಸ್ಥೆಯ 2020–21ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು, 2019–20ನೇ ಸಾಲಿನ ಅನುಮೋದಿತ ಅಂದಾಜುಗಳು ಹಾಗೂ 2020–21 ನೇ ಸಾಲಿನ ಪರಿಷ್ಕೃತ ಅಂದಾಜುಗಳೊಂದಿಗೆ ಮಂಡಿಸಲಾಗಿದೆ. (ಮೈಸೂರು ಘಟಕದ ಆಯವ್ಯಯ ಒಳಗೊಂಡಿರುತ್ತದೆ)

2020–21ನೇ ಸಾಲಿನ ರಾಜಸ್ವ ಅಂದಾಜುಗಳ ವಿವರಗಳು:–

**2020–21ನೇ ಸಾಲಿಗೆ ರಾಜಸ್ವ ಲೆಕ್ಕ ಶೀರ್ಷಿಕೆಯಲ್ಲಿ ಒಟ್ಟಾರೆ ರೂ. 5030.40 ಲಕ್ಷ ರೂ.ಗಳನ್ನು ವಿವಿಧ ಮೂಲಗಳಿಂದ ಸ್ವೀಕರಿಸಲಾಗುವ ವಿವರಗಳು ಈ ಕೆಳಕಂಡಂತಿವೆ.**

ಎ.) ರಾಜಸ್ವ: **ಲಕ್ಷ ರೂ.ಗಳಲ್ಲಿ**

| | | |
|---|---|---|
| 1. | **ಕರ್ನಾಟಕ ಸರ್ಕಾರದ ಸಹಾಯಾನುಧನ** | 3870.40 |
| 2. | **ಆಸ್ಪತ್ರೆ ಬಳಕೆದಾರರ ಶುಲ್ಕ** | 600.00 |
| 3. | **ದೇಣಿಗೆ** | 0.00 |
| 4. | **ಬಡ್ಡಿ** | 500.00 |
| 5. | **ಕ್ಲಿನಿಕಲ್ / ವಿದ್ಯಾರ್ಥಿಗಳ ಶುಲ್ಕ** | 50.00 |
| 6. | **ಇತರೆ** | 10.00 |
| | **ಒಟ್ಟು** | 5030.40 |

**ಬಿ). ಬಂಡವಾಳ:-**

**ಬಂಡವಾಳ ಲೆಕ್ಕ ಶೀರ್ಷಿಕೆಯಲ್ಲಿ ಒಟ್ಟಾರೆ ರೂ. 850.00 ಲಕ್ಷ ರೂ.ಗಳನ್ನು ಅಂದಾಜಿಸಲಾಗಿದೆ.**

**ವಿವರಗಳು ಈ ಕೆಳಕಂಡಂತಿವೆ.**

| | |
|---|---|
| 1) ಅನೆಕ್ಸ್ ಕಟ್ಟಡ | 850.00 ಲಕ್ಷ ರೂ.ಗಳು |
| | **ಒಟ್ಟು 850.00 ಲಕ್ಷ ರೂ ಗಳು** |

**ಒಟ್ಟು (ಎ+ಬಿ)= 5030.40+850.00=5880.40**

**ರಾಜಸ್ವ ವೆಚ್ಚಗಳ ಪ್ರಸ್ತಾವನೆ:-**

1) **ವೇತನ ಮತ್ತು ಭತ್ಯೆಗಳು:-**2019-20ನೇ ಸಾಲಿನಲ್ಲಿ 2280.19 ಲಕ್ಷ ರೂ.ಗಳು ವೆಚ್ಚವಾಗಿದ್ದು, 2020-21ನೇ ಆರ್ಥಿಕ ಸಾಲಿನಲ್ಲಿ 2470.40 ಲಕ್ಷ ರೂ.ಗಳನ್ನು ಈ ಉಪಶೀರ್ಷಿಕೆಯಲ್ಲಿ ಅಂದಾಜಿಸಲಾಗಿದೆ.

2) **ಪೆಟ್ರೋಲ್ ಡೀಸೆಲ್:-** ಸಂಸ್ಥೆಯ ಎರಡು ಆಂಬ್ಯುಲೆನ್ಸ್, ಮೂರು ವಾಹನಗಳು ಹಾಗೂ ಒಂದು ಜನರೇಟರ್‌ಗಳಿದ್ದು ಇವುಗಳ ನಿರ್ವಹಣೆಗೆ 2019-20ನೇ ಸಾಲಿನಲ್ಲಿ 2.80 ಲಕ್ಷ ರೂ.ಗಳು ವೆಚ್ಚವಾಗಿದ್ದು 2020-21ನೇ ಸಾಲಿಗೆ 5.00ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

3) **ವಿದ್ಯುತ್ ಮತ್ತು ನೀರು ಸರಬರಾಜು:-** 2019-20ನೇ ಸಾಲಿನಲ್ಲಿ ರೂ. 98.28 ಲಕ್ಷ ವೆಚ್ಚ ಭರಿಸಲಾಗಿದ್ದು, ಈಗಾಗಲೇ ವಿದ್ಯುತ್ ಬಳಕೆ ಶುಲ್ಕದ ದರಗಳನ್ನು ಹೆಚ್ಚಿಸಿರುವುದರಿಂದ ಹಾಗೂ ನೀರು ಸರಬರಾಜಿನಲ್ಲಿ ಬಳಕೆ ದರಗಳನ್ನು ಹೆಚ್ಚಿಸಿರುವುದರಿಂದ 2020-21ನೇ ಸಾಲಿನಲ್ಲಿ 110.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

4) **ಔಷಧಿ ಮತ್ತು ರಸಾಯನಿಕಗಳು:-** 2019-20 ನೇ ಸಾಲಿನಲ್ಲಿ 952.63 ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದ್ದು, ಹೊರರೋಗಿ ವಿಭಾಗ, ತುರ್ತು ಚಿಕಿತ್ಸೆ ತೀವ್ರ ನಿಗಾ ಘಟಕಗಳಲ್ಲಿ ಔಷಧಿ ಬಳಕೆ ಹೆಚ್ಚಾಗುತ್ತಿದ್ದು ಮತ್ತು ಔಷಧಿ ದರಗಳು ಸಹ ಪ್ರತಿವರ್ಷ ಏರುತ್ತಿರುವುದರಿಂದ, 2020-21ನೇ ಸಾಲಿನಲ್ಲಿ ಈ ಉಪಶೀರ್ಷಿಕೆಗೆ 1200.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

5) **ಕಛೇರಿ ವೆಚ್ಚ:-** ಕಛೇರಿ ವೆಚ್ಚದ ಶೀರ್ಷಿಕೆಯಲ್ಲಿ ಲೇಖನ ಸಾಮಗ್ರಿಗಳು ಹಾಗೂ ಇತರೆ ವೆಚ್ಚಗಳಿಗೆ 30.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

6) **ಪೀಠೋಪಕರಣ :–** ವಾರ್ಡ್‌ಗಳಿಗೆ ಅವಶ್ಯವಿರುವ ಪೀಠೋಪಕರಣಗಳು, ರೋಗಿಗಳ ಮಂಚ, ಬೆಡ್‌ಸೈಡ್ ಲಾಕರ್ಸ್, ಮೇಜು, ಕುರ್ಚಿಗಳು ಮುಂತಾದವುಗಳಿಗೆ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

7) **ಟೆಲಿಫೋನ್ ವೆಚ್ಚ:–** ಆಸ್ಪತ್ರೆ ಸಂಪರ್ಕ ವ್ಯವಸ್ಥೆ, ಆಡಳಿತ ವ್ಯವಹಾರ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗ್ರಂಥಾಲಯ ಅಂತರ್ಜಾಲ ಸಂಪರ್ಕ ವ್ಯವಸ್ಥೆಯನ್ನು ಸ್ಥಾಪಿಸಿಕೊಂಡಿರುವುದರಿಂದ 5.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

8) **ವಾಹನ ಮತ್ತು ನಿರ್ವಹಣೆ:–** ಒಂದು ಆಂಬುಲೆನ್ಸ್ ಮತ್ತು ಮೂರು ಇತರೆ ವಾಹನಗಳಿದ್ದು ಇವುಗಳ ಸರ್ವೀಸ್, ರಿಪೇರಿ ವೆಚ್ಚಗಳಿಗೆ ಪ್ರಸಕ್ತ ಸಾಲಿನಲ್ಲಿ 3.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

9) **ಜಾಹೀರಾತು:–** ಸಂಸ್ಥೆಯಲ್ಲಿ ಔಷಧಿ ಉಪಕರಣ ಸಲಕರಣೆಗಳ ಸಂಗ್ರಹಣೆ ಮತ್ತು ನೇಮಕಾತಿ ಪ್ರಕ್ರಿಯೆಗಳಿಗೆ ಕೆ.ಟಿ.ಪಿ.ಪಿ. ನಿಯಮಗಳ ರೀತ್ಯ ಜಾಹೀರಾತು ನೀಡಬೇಕಾಗಿರುವುದರಿಂದ, 5.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

10) **ವೈದ್ಯಕೀಯ ಉಪಕರಣಗಳು:–** 2019–20**ನೇ ಸಾಲಿನಲ್ಲಿ ಈ ಟೆಂಡರ್ ಮೂಲಕ ವೈದ್ಯಕೀಯ ಉಪಕರಣಗಳನ್ನು ಖರೀದಿಸುವ ಸಲುವಾಗಿ** 245.07 ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದ್ದು, 2020–21 **ನೇ ಸಾಲಿನಲ್ಲಿ** 448.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

| Sl. NO. | Name of the Equipment | Amount (Rs.) |
|---|---|---|
| | **Mysore Unit** | |
| 1 | Dialysis Machine – 10Nos. | 9000000.00 |
| 2 | Laproscopy set - 1 Nos | 1500000.00 |
| 3 | Flexible uretoroscope – 2 Nos | 1100000.00 |
| 4. | Laser Machine – 01 No. | 3200000.00 |
| | **Bangalore Unit** | |
| 1 | Modulare OT | 25000000.00 |
| 2 | Operation Microscope | 5000000.00 |
| | **TOTAL** | 44800000.00 |

11) **ಆತಿಥ್ಯ ವೆಚ್ಚ:–** ಆಡಳಿತ ಮಂಡಳಿ ಸಭೆ ಹಾಗು ಇತರೆ ಸಭೆಗಳಿಗೆ ಆಹ್ವಾನಿಸುವ ಸದಸ್ಯರುಗಳಿಗೆ ಆತಿಥ್ಯಕ್ಕೆ 5.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

12) **ಪಥ್ಯಾಹಾರ ವೆಚ್ಚ:** ಸಂಸ್ಥೆಯಲ್ಲಿ ವಾಜಪೇಯಿ ಆರೋಗ್ಯಶ್ರೀ ಯೋಜನಯಡಿಯಲ್ಲಿ ಚಿಕಿತ್ಸೆ ನೀಡುವ ರೋಗಿಗಳಿಗೆ ಪಥ್ಯಾಹಾರಕ್ಕಾಗಿ ರೂ.10.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದೆ.

13) **ಹಾಸಿಗೆ ಮತ್ತು ವಸ್ತ್ರಗಳು:– 2019–20ನೇ ಸಾಲಿನಲ್ಲಿ** ರೋಗಿಗಳಿಗೆ ಅವಶ್ಯವಿರುವ ಹಾಸಿಗೆ ವಸ್ತ್ರಗಳು ಹಾಗು ತೀವ್ರ ನಿಗಾ ಘಟಕ ಮತ್ತು ಓ.ಟಿ ವಸ್ತ್ರಗಳನ್ನು ಖರೀದಿಸಲು 2020–21 ನೇ ಸಾಲಿಗೆ 20.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

14) **ಕಿರು ಕಾಮಗಾರಿಗಳು:–** ಸಿವಿಲ್, ಎಲೆಕ್ಟ್ರಿಕಲ್, ನೀರು ಸರಬರಾಜು, ಸಂಸ್ಥೆಗೆ ಬಣ್ಣ ಹಾಕುವ ಕಾಮಗಾರಿ ಇತ್ಯಾದಿಗಳಿಗೆ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

15) **ಲೈಬ್ರರಿ:–** ಸಂಸ್ಥೆಯಲ್ಲಿ ಸ್ನಾತ್ತಕೋತ್ತರ ಕೋರ್ಸ್‌ಗಳಾದ ಎಂಸಿಹೆಚ್ ಯುರಾಲಜಿ, ಡಿಎಂ ನೆಫ್ರೋಲಜಿ ಇವುಗಳೊಂದಿಗೆ ಫೆಲೋಷಿಪ್ ಕೋರ್ಸ್‌ಗಳು, ಡಿಪ್ಲಮೋ ಇನ್ ಡಯಾಲಿಸಿಸ್, ಲ್ಯಾಬೋರೇಟರಿ ಹಾಗೂ ಓಟಿ ಟೆಕ್ನಾಲಜಿ ಕೋರ್ಸ್‌ಗಳು ಜರುಗುತ್ತಿದ್ದು ವಿದ್ಯಾರ್ಥಿಗಳಿಗೆ ಅವಶ್ಯವಿರುವ ಪುಸ್ತಕ, ಜರ್ನಲ್ಸ್‌ಗಳ ಸಂಗ್ರಹಣೆಗೆ 2019–20ನೇ ಸಾಲಿನಲ್ಲಿ 28.50 ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದ್ದು, 2020–21ನೇ ಸಾಲಿನಲ್ಲಿ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

16) **ಆಸ್ಪತ್ರೆ ಅವಶ್ಯಗಳು:–** ಆಸ್ಪತ್ರೆ ಶುಚೀಕರಣ ಅವಶ್ಯವಿರುವ ವಸ್ತುಗಳ ಸಂಗ್ರಹಣೆಗೆ 60.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

17) **ಪ್ರಯಾಣ ವೆಚ್ಚ :–** ವೈದ್ಯಕೀಯ ಬೋಧಕ ಸಿಬ್ಬಂದಿಯು ವೈಜ್ಞಾನಿಕ ಪ್ರಬಂಧಗಳನ್ನು ವೈದ್ಯಕೀಯ ಸಮಾವೇಶಗಳಲ್ಲಿ ಮಂಡಿಸಲು ಪ್ರಯಾಣ ಭತ್ಯೆಗೆ 2.00 ಲಕ್ಷ ರೂ.ಗಳ (ಎರಡು ಲಕ್ಷ ರೂಪಾಯಿಗಳು ಮಾತ್ರ) ವೆಚ್ಚವನ್ನು ಅಂದಾಜಿಸಲಾಗಿದೆ.

18) **ಎಕ್ಸ್–ರೇ ಫಿಲಂಗಳು:– 2019–20ನೇ ಸಾಲಿನಲ್ಲಿ** ಎಕ್ಸ್–ರೇ ಫಿಲಂಗಳ ಸಂಗ್ರಹಣೆಗೆ 18.88 ಲಕ್ಷ ರೂ.ಗಳು ವೆಚ್ಚವಾಗಿದ್ದು, 2020–21ನೇ ಸಾಲಿಗೆ 30.00 ಲಕ್ಷ ರೂಗಳ ವೆಚ್ಚವನ್ನು ಅಂದಾಜಿಸಲಾಗಿದೆ.

19) **ವೃತ್ತಿಪರರಿಗೆ ಹಣ ಸಂದಾಯ:–** ಚಾರ್ಟರ್ಡ್ ಅಕೌಂಟೆಂಟ್‌ಗಳಿಗೆ ಲೆಕ್ಕ ತಪಾಸಣಾ ಶುಲ್ಕ ಹಾಗು ಇನ್ನಿತರೆ ವೃತ್ತಿಪರ ವೆಚ್ಚಗಳಿಗೆ 10.97 ಲಕ್ಷ ರೂ.ಗಳು ವೆಚ್ಚವಾಗಿದ್ದು 2020–21 ನೇ ಸಾಲಿಗೆ 20.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

20) **ಮಜೂರಿ :–** ಭದ್ರತಾ ಸಿಬ್ಬಂದಿ ಸೇವೆ ಪಡೆದುಕೊಳ್ಳಲು 2019–20ನೇ ಸಾಲಿನಲ್ಲಿ 60.74 ಲಕ್ಷ ರೂ.ಗಳು ವೆಚ್ಚವಾಗಿದ್ದು, 2020–21ನೇ ಸಾಲಿಗೆ 60.00 ಲಕ್ಷ ರೂ.ಗಳನ್ನು ಅಂದಾಜಿಸಲಾಗಿದೆ.

21) **ಗಣಕಯಂತ್ರ/ತಂತ್ರಾಂಶ:– ಗಣಕಯಂತ್ರ ಖರೀದಿಗಾಗಿ** 2019–20ನೇ ಸಾಲಿನಲ್ಲಿ 7.68 ಲಕ್ಷ ರೂ.ಗಳು ವೆಚ್ಚವಾಗಿದ್ದು 2020–21ನೇ ಸಾಲಿನಲ್ಲಿ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

22) **ಫೀ (ಶುಲ್ಕ):–** ಸಂಸ್ಥೆಯು ಭಾರತೀಯ ವೈದ್ಯಕೀಯ ಮಂಡಳಿ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗು ಇತರೆ ಸಂಸ್ಥೆಗಳಿಂದ ಮಾನ್ಯತೆಗೆ ಹಾಗೂ ಇತರೆ ಶುಲ್ಕ ಸಂದಾಯ ಮಾಡಬೇಕಾಗಿರುವುದರಿಂದ 2.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

23) **ರಿಪೇರಿ ಹಾಗೂ ನಿರ್ವಹಣೆ:–** ಪೀಠೋಪಕರಣ, ಸಿ.ಎಸ್.ಎಸ್.ಡಿ, ಜನರೇಟರ್‌ಗಳು ವಾಷಿಂಗ್ ಯಂತ್ರಗಳು, ಹವಾ ನಿಯಂತ್ರಣ, ನೀರೆತ್ತುವ ಪಂಪ್‌ಗಳು ಹಾಗೂ ಇನ್ನಿತರೆ ವಸ್ತುಗಳ ರಿಪೇರಿ ಹಾಗೂ ನಿರ್ವಹಣೆಗೆ 150.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

24) **ಕೈತೋಟ ನಿರ್ವಹಣೆ :–** ಸಂಸ್ಥೆಯ ಕೈತೋಟ ನಿರ್ವಹಣೆಗಾಗಿ ರೂ. 5.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದೆ.

25) **ಉಪಕರಣಗಳ ವಾರ್ಷಿಕ ನಿರ್ವಹಣೆ:–** ಸಂಸ್ಥೆಯಲ್ಲಿ ಈಗಾಗಲೇ ಸಂಗ್ರಹಣೆಯಾಗಿರುವ ವೆಂಟಿಲೇಟರ್ಸ್, ಮಾನಿಟರ್ಸ್‌ಗಳು, ಓ.ಟಿ.ಲೈಟ್, ಟೇಬಲ್‌ಗಳು, ಆಕ್ಸಿಜನ್ ಲೈನ್, ಸಕ್ಷನ್ ಲೈನ್ ಹಾಗೂ ಇನ್ನಿತರೆ ಉಪಕರಣಗಳ ವಾರ್ಷಿಕ ನಿರ್ವಹಣೆಗೆ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

26) **ವೈದ್ಯಕೀಯ ಕಾರ್ಯಾಗಾರ ಮತ್ತು ಸಭೆಗಳು :** ಸಂಸ್ಥೆಯಲ್ಲಿ ವೈದ್ಯಕೀಯ ಕಾರ್ಯಾಗಾರ ಮತ್ತು ಸಭೆಗಳನ್ನು ಜರುಗಿಸಲು 5.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

27) **ಎನ್‌ಎಬಿಹೆಚ್: ಸಂಸ್ಥೆಗೆ ಎನ್‌ಎಬಿಹೆಚ್ ಮಾನ್ಯತೆ ಪಡೆಯಲು 2020–21ನೇ ಸಾಲಿಗೆ ರೂ.5 ಲಕ್ಷಗಳ** ವೆಚ್ಚವನ್ನು ಅಂದಾಜಿಸಲಾಗಿದೆ.

28) **ವೈದ್ಯಕೀಯ ಮರುಪಾವತಿ :** ಸಂಸ್ಥೆಯಲ್ಲಿ ವೈದ್ಯಕೀಯ ಮರುಪಾವತಿಗಾಗಿ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

29) **ಶೈಕ್ಷಣಿಕ ವೆಚ್ಚ:** ಸಂಸ್ಥೆಯ ಶೈಕ್ಷಣಿಕ ಚಟುವಟಿಕೆಗಳಿಗಾಗಿ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

**ಕೋವಿಡ್ –2019 ರ ತುರ್ತು ಪರಿಸ್ಥಿತಿ ಹಿನ್ನೆಲೆಯಲ್ಲಿ ಆರ್ಥಿಕ ವರ್ಷದ ಆರಂಭದಿಂದಲೂ ಸಹ ಬಳಕೆದಾರರ ಶುಲ್ಕದಲ್ಲಿ ಸಂಗ್ರಹಣೆಯು ಪ್ರತಿ ದಿನವೂ ಕಡಿಮೆಯಾಗುತ್ತಿರುವುದರಿಂದ 2020–21 ನೇ ಸಾಲಿನಲ್ಲಿ ಬಳಕೆದಾರರ ಶುಲ್ಕದ ಆದಾಯವು ಗರಿಷ್ಠ 6.00 ಕೋಟಿಯಾಗುತ್ತದೆ ಎಂದು ಅಂದಾಜಿಸಲಾಗಿರುತ್ತದೆ.**

ಮೇಲ್ಕಂಡಂತೆ 2020–21ನೇ ಸಾಲಿನ ಆಯವ್ಯಯವನ್ನು ಆಡಳಿತ ಮಂಡಳಿಯು ಅನುಮೋದಿಸಲು ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿರುವ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (ಇ) : ಸಂಸ್ಥೆಯ 2019–2020 ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪಟ್ಟಿಯನ್ನು ಆಡಳಿತ ಮಂಡಳಿಯು ಅನುಮೋದಿಸುವ ಬಗ್ಗೆ.**

2019–20ನೇ ಸಾಲಿನ ಲೆಕ್ಕಪತ್ರ ಪರಿಶೋಧನೆಗಾಗಿ ಸಂಸ್ಥೆಯ ಲೆಕ್ಕಪರಿಶೋಧಕರಾಗಿ ನೇಮಕಗೊಂಡಿರುವ ಮೆ॥ ಎಂ ಎಸ್ ಆರ್ ಕೆ ಅಂಡ್ ಕಂಪನಿ, ಚಾರ್ಟಡ್ ಅಕೌಂಟೆಂಟ್ಸ್, ನಂ.176, ಮೂರನೇ ಮಹಡಿ, 10ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ಇವರು ಪರಿಶೋಧಿಸಲ್ಪಟ್ಟ ಸಂಸ್ಥೆಯ 2018–2019ನೇ ಸಾಲಿನ ಲೆಕ್ಕಪತ್ರಗಳ ಪಟ್ಟಿಗಳನ್ನು ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಆರ್ಥಿಕ ಸಮಿತಿಯು ಪರಿಶೀಲಿಸಿ ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡುವಂತೆ ಕೋರಲಾಗಿ, ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿದ್ದು, ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿ, ಅನುಮೋದಿಸಿತು.

**ವಿಷಯ (ಈ) : ಕೋವಿಡ್ –19 ರತುರ್ತು ಸಂದರ್ಭದಲ್ಲಿ ವೆಚ್ಚವಾಗಿರುವ ಮೊತ್ತಕ್ಕೆ ಘಟನೋತ್ತರ ಮಂಜೂರಾತಿ ನೀಡುವ ಬಗ್ಗೆ.**

ಕೋವಿಡ್–19ರ ತುರ್ತುಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಂಸ್ಥೆಗೆ ಅತ್ಯವಶ್ಯಕ ವಸ್ತುಗಳನ್ನು ಖರೀದಿಸಲು ವೆಚ್ಚವಾಗಿರುವ ರೂ. 70,74,251.00/– (ರೂಪಾಯಿ ಎಪ್ಪತ್ತು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಇನ್ನೂರ ಐವತ್ತೊಂದು ಮಾತ್ರ) ಗಳಿಗೆ ಘಟನೋತ್ತರ ಮಂಜೂರಾತಿ ನೀಡಲು ಆಡಳಿತ ಮಂಡಳಿಗೆ ಶಿಫಾರಸ್ಸು ಮಾಡುವಂತೆ ಕೋರಲಾಗಿ, ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿರುವ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (ಉ) : ಆದಾಯ ತೆರಿಗೆ ವಿಧಿಸಿರುವುದನ್ನು ಆದಾಯ ತೆರಿಗೆ ಇಲಾಖೆಯ ಆಯುಕ್ತರ ಮುಂದೆ ಅಪೀಲು ದಾಖಲಿಸುವ ಬಗ್ಗೆ.**

ನೆಫ್ರೋ–ಯುರಾಲಜಿ ಸಂಸ್ಥೆಯು ಚಾರಿಟಬಲ್ ಟ್ರಸ್ಟ್ ಆಗಿದ್ದು, ಆದಾಯ ತೆರಿಗೆ ಇಲಾಖೆಯಿಂದ ಸಂಸ್ಥೆಯ ಪ್ರಾರಂಭದಿಂದಲೂ ಆದಾಯ ತೆರಿಗೆ ವಿನಾಯ್ತಿ ಇದ್ದು, 2014 ರಲ್ಲಿ ರೂ. 1,00,76,405/–, 2016 ರಲ್ಲಿ ರೂ. 34,82,450/– ಮತ್ತು 2018 ರೂ. 17,49,21,900/–ಗಳ ಒಟ್ಟು ರೂ. 18,84,80,755 ಆದಾಯ ತೆರಿಗೆ ವಿಧಿಸಿದ್ದು, ಈ ಬಗ್ಗೆ ಆದಾಯ ತೆರಿಗೆ ಇಲಾಖೆಯ ಆಯುಕ್ತರ ಮುಂದೆ ಅಪೀಲು ದಾಖಲಿಸುವ ಸಂಬಂಧ ರೂ. 33,60,000/–ಗಳನ್ನು ಠೇವಣಿಕರಿಸಲಾಗಿದ್ದು, ಆಪೀಲು ಇತ್ಯರ್ಥಗೊಳ್ಳಬೇಕಾಗಿರುತ್ತದೆ. ಈ ಅಂಶವನ್ನು ಆರ್ಥಿಕ ಸಮಿತಿಯ ಅವಗಾಹನೆಗಾಗಿ ಸಲ್ಲಿಸಲಾಗಿ, ಸದರಿ ಅಂಶದ ಮೇಲೆ ಆದಷ್ಟು ಶೀಘ್ರವಾಗಿ ಸಂಸ್ಥೆಯ ಲೆಕ್ಕ ಪರಿಶೋಧಕರು ಕ್ರಮ ಕೈಗೊಳ್ಳುವಂತೆ ಸೂಚಿಸಿರುವ ಬಗ್ಗೆ ಮಂಡಿಸಲಾಗಿ, ನಿಯಮಾನುಸಾರ ಕ್ರಮವಹಿಸುವಂತೆ ಸೂಚಿಸಲಾಯಿತು.

**ವಿಷಯ (ಊ) : ಸಂಸ್ಥೆಯ ಎಂ.ಸಿ.ಹೆಚ್ ಯುರಾಲಜಿ ಹಾಗೂ ಡಿ.ಎಂ ನೆಫ್ರೋಲಜಿ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳಿಗೆ ಸರ್ಕಾರವು ಪರಿಷ್ಕರಿಸುವ ಶಿಷ್ಯವೇತನವನ್ನು ಅನುಷ್ಠಾನಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಮಂಜೂರಾತಿ ನೀಡಲು ಆಡಳಿತ ಮಂಡಳಿಯು ಅನುಮೋದನೆ ನೀಡುವ ಬಗ್ಗೆ.**

ಸಂಸ್ಥೆಯ ಎಂ.ಸಿ,ಹೆಚ್ ಯುರಾಲಜಿ ಹಾಗೂ ಡಿ.ಎಂ ನೆಫ್ರೋಲಜಿ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಸರ್ಕಾರದ ಆದೇಶ ಸಂಖ್ಯೆ : ಎಂಇಡಿ 49 ಆರ್‌ಜಿಯು 2020, ಬೆಂಗಳೂರು ದಿನಾಂಕ : 16.05.2020ನ್ನು ಅನುಷ್ಠಾನಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಮಂಜೂರಾತಿ ಪಡೆಯಲು ಆಡಳಿತ ಮಂಡಳಿಯ ಅನುಮೋದನೆಗಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸು ಕೋರಲಾಗಿ, ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಗೆ ಮಂಡಿಸಲಾಗಿ ಅನುಮೋದಿಸಿತು.

**ವಿಷಯ (ಋ) : ಸಂಸ್ಥೆಯ ವೈದ್ಯಕೀಯ ಸಿಬ್ಬಂದಿಯವರಿಗೆ ಅನುಷ್ಠಾನಗೊಳಿಸಿರುವ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗೆ ಘಟನೋತ್ತರ ಮಂಜೂರಾತಿ ನೀಡುವ ಬಗ್ಗೆ.**

ಸರ್ಕಾರದ ಆದೇಶ ಸಂಖ್ಯೆ : ಆಕುಕ/102/ಎಂಎಂಸಿ/2019, ಬೆಂಗಳೂರು. ದಿನಾಂಕ : 04.05.2020 ರ ಪ್ರಕಾರ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರಿಗೆ ಪರಿಷ್ಕೃತ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸಿದ್ದು, ಈ ಕ್ರಮಕ್ಕೆ ಘಟನೋತ್ತರ ಮಂಜೂರಾತಿ ಪಡೆಯಲು ಆಡಳಿತ ಮಂಡಳಿಯ ಅನುಮೋದನೆಗಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸು ಕೋರಲಾಗಿ, ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿರುವ ಮೇರೆಗೆ, ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (ಎ) : ನೂತನ ಪಿಂಚಣಿ ಯೋಜನೆಯಡಿ (ಎನ್.ಪಿ.ಎಸ್) ಸಂಸ್ಥೆಯ ವಂತಿಗೆಯನ್ನು ಶೇ.10 ರಿಂದ ಶೇ.14 ಕ್ಕೆ ಹೆಚ್ಚಿಸುವ ಬಗ್ಗೆ.**

ಸರ್ಕಾರಿ ಆದೇಶ ಸಂಖ್ಯೆ: ಆಇ 37 ಪಿಇಎನ್ 2019, ಬೆಂಗಳೂರು, ದಿನಾಂಕ : 31.08.2019 ರ ಪ್ರಕಾರ ನೂತನ ಪಿಂಚಣಿ ಯೋಜನೆಯಡಿ (ಎನ್.ಪಿ.ಎಸ್) ಸಂಸ್ಥೆಯ ವಂತಿಗೆಯನ್ನು ಶೇ.10 ರಿಂದ ಶೇ.14 ಕ್ಕೆ ಹೆಚ್ಚಿಸಲು ಆಡಳಿತ ಮಂಡಳಿಯ ಅನುಮೋದನೆಗಾಗಿ ಶಿಫಾರಸ್ಸು ನೀಡುವಂತೆ ಆರ್ಥಿಕ ಸಮಿತಿಯನ್ನು ಕೋರಲಾಗಿ, ಸದರಿ ಸರ್ಕಾರಿ ಆದೇಶದಂತೆ ಕ್ರಮ ವಹಿಸಲು ಸೂಚಿಸಿರುವ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (ಏ) : ಶಿಷ್ಯವೇತನದ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕರ ಶಿಷ್ಯವೇತನವನ್ನು ಪರಿಷ್ಕರಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ.**

ಸಂಸ್ಥೆಯಲ್ಲಿ ಶಿಷ್ಯವೇತನದ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕರಿಗೆ ಪ್ರಸ್ತುತ ರೂ. 14000/– ಗಳ ಶಿಷ್ಯವೇತನವನ್ನು ಪಾವತಿಸುತ್ತಿದ್ದು, ಸದರಿ ವೇತನವನ್ನು ಹೆಚ್ಚಿಸಬೇಕೆಂದು ಶುಶ್ರೂಷಕರು ಮನವಿ ಸಲ್ಲಿಸಿರುವುದರಿಂದ ಪ್ರಸ್ತುತ ಪಾವತಿಸುತ್ತಿರುವ ಶಿಷ್ಯವೇತನವನ್ನು ರೂ. 14000/– ಗಳಿಂದ ರೂ. 30000/– ಗಳಿಗೆ ಹೆಚ್ಚಿಸಲು ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಲು ಕೋರಲಾಗಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಇವರು ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳಲ್ಲಿ ಗುತ್ತಿಗೆ /ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಏಕರೂಪ ವೇತನವನ್ನು ನಿಗದಿಪಡಿಸಲು ರಚಿಸಿರುವ ಸಮಿತಿಯು ಶೀಘ್ರವಾಗಿ ಕ್ರಮವಹಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರಿಗೆ ಸೂಚಿಸಲಾಗಿದ್ದ ವಿಷಯವನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸಿನಂತೆ ಕ್ರಮವಹಿಸಲು ಸೂಚಿಸಿತು.

**ವಿಷಯ (ಐ) : ಸಂಸ್ಥೆಯ ಕಾನೂನು ಸಲಹೆಗಾರರಾದ ಶ್ರೀ.ಕೆ.ಎಮ್.ಪ್ರಕಾಶ್ ರವರು ನೀಡಿರುವ ಶುಲ್ಕಗಳನ್ನು ಪರಿಗಣಿಸುವ ಬಗ್ಗೆ ಆರ್ಥಿಕ ಸಮಿತಿಯ ಶಿಫಾರಸ್ಸಿಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ.**

ಸಂಸ್ಥೆಯ ಕಾನೂನು ಸಲಹೆಗಾರರಾದ ಶ್ರೀ. ಕೆ.ಎಂ.ಪ್ರಕಾಶ್ ರವರು ಸಂಸ್ಥೆಯ ಪರವಾಗಿ ಕಾನೂನು ಪ್ರಕರಣಗಳಿಗೆ ನ್ಯಾಯಾಲಯದಲ್ಲಿ ಪ್ರತಿನಿಧಿಸುತ್ತಿರುವುದರಿಂದ ಹಾಗೂ ಸಂಸ್ಥೆಗೆ ಕಾನೂನು ಪ್ರಕರಣಗಳಲ್ಲಿ ಸಲಹೆ–ಸೂಚನೆಗಳನ್ನು ನೀಡುತ್ತಿರುವುದರಿಂದ ಇದಕ್ಕೆ ತಗಲುವ ಶುಲ್ಕಗಳ ಪಟ್ಟಿಯನ್ನು ನೀಡಿರುತ್ತಾರೆ, ಇದೇ ವಕೀಲರು ನ್ಯಾಯಾಲಯದಲ್ಲಿ BMCRI ಪ್ರಕರಣಗಳನ್ನು ಪ್ರತಿನಿಧಿಸುತ್ತಿದ್ದು, ಸದರಿ ಸಂಸ್ಥೆಯು ಪಾವತಿಸುತ್ತಿರುವ ಶುಲ್ಕವನ್ನೇ ಅಳವಡಿಸಿಕೊಂಡು ಪಾವತಿಸಲು ಉದ್ದೇಶಿಸಿದ್ದು, ತತ್ಸಂಬಂಧ BMCRI ರವರು ನೀಡಿರುವ ಶುಲ್ಕಗಳ ಪಟ್ಟಿಯನ್ನು ಪರಿಗಣಿಸಿ ನಿಗದಿಪಡಿಸಲು ಆಡಳಿತ ಮಂಡಳಿಗೆ ಅನುಮೋದನೆ ಪಡೆಯಲು ಶಿಫಾರಸ್ಸು ನೀಡಲು ಆರ್ಥಿಕ ಸಮಿತಿಯನ್ನು ಕೋರಲಾಗಿ, ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿದ್ದ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, BMCRI ನಲ್ಲಿ ಕಾನೂನು ಸಲಹೆಗಾರರಿಗೆ ಪ್ರಸ್ತುತ ಪಾವತಿಸುತ್ತಿರುವ ಈ ಕೆಳಕಂಡ ಶುಲ್ಕದ ಪಟ್ಟಿಯನ್ನು ಸಂಸ್ಥೆಯಲ್ಲಿಯೂ ಅಳವಡಿಸಿಕೊಳ್ಳುವಂತೆ ಸೂಚಿಸಿ ಅನುಮೋದಿಸಿತು.

| ಕ್ರಮ ಸಂಖ್ಯೆ | ಪ್ರಕರಣ | ಅನುಮೋದಿತ ದರ |
|---|---|---|
| 1 | Hearing Fee for Writ Petition before the High Court of Karnataka | Rs. 12,000/- |
| 2 | A Separate additional fee for drawing of Writ Petition if to be filed on behalf of the INU | Rs. 3,000/- |
| 3 | Expenses for filing of all kinds of cases (Clerkage) | Rs. 2,500/- |
| 4 | Filing of Interim Application in all kinds of cases before the High Court of Karnataka | Rs. 5,000/- |
| 5 | For drafting Statement of Objections inWPs | Rs. 3,000/- |
| 6 | Hearing fee for Writ Appeals before the High Court of Karnataka | Rs. 15,000/- |
| 7 | Drafting and filing for Writ Appeal if filed on behalf of INU | Rs. 5,000/- |
| 8 | Hearing fee for petitions filed before the Karnataka Administrative Tribunal | Rs. 10,000/- |
| 9 | Filing Statement of Objections on behalf of the INU before the Karnataka Administrative Tribunal | Rs. 2,500/- |
| 10 | Legal fee and expenses for filing of Caveat Petition before High Court, Civil court and Tribunals | Rs. 2,000/- |
| 11 | Matters relating to Consumer Protection act before the District Forum | Rs. 10,000/- |
| 12 | Matters relating to Consumer Protection act before the State Forum | Rs. 15,000/- |
| 13 | For issue of Legal Notice on behalf of INU and for reply to any Legal Notice on behalf of INU | Rs. 2,500/- |
| 14 | Monthly Retainer fee – retainer fee includes fee for routine opinion sought by the INU | Rs. 15,000/- |

ಮೇಲ್ಕಂಡಂತೆ ಸಂಸ್ಥೆಯ ಎಂಪ್ಯಾನೆಲ್ ವಕೀಲರ ಮಾಸಿಕ ರೀಟೈನರ್ ಶುಲ್ಕವನ್ನು ಪ್ರಸ್ತುತ ಇರುವ ರೀಟೈನರ್ ಶುಲ್ಕದ ಶೇ. 10ರಷ್ಟು ಹೆಚ್ಚಿಸಿ ನೀಡಲು ಆಡಳಿತ ಮಂಡಳಿಯು ಅನುಮೋದಿಸಿತು.

**ವಿಷಯ (15) : ದಿನಾಂಕ : 20.07.2021 ರ ಆರ್ಥಿಕ ಸಮಿತಿ ಸಭೆಯ ಅಂಶಗಳು :**

**ವಿಷಯ (ಅ) : ದಿನಾಂಕ : 07.10.2020 ರಂದು ಜರುಗಿದ ನೆಫ್ರೋ–ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡುವ ಬಗ್ಗೆ.**

ದಿನಾಂಕ: 07.10.2020 ರಂದು ಜರುಗಿದ ನೆಫ್ರೋ–ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಮತ್ತು ಅದರ ಮೇಲೆ ಕೈಗೊಂಡ ಅನುಪಾಲನಾ ವರದಿಯನ್ನು ಮಂಡಿಸಲಾಗಿ,

**ಸದರಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲು ಹಾಗೂ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯ ಬಗ್ಗೆ ಚರ್ಚಿಸಲಾಗಿ ಈ ಹಿಂದಿನ ದಿನಾಂಕ : 04.01.2020 ಮತ್ತು 07.10.2020ರಂದು ಜರುಗಿದ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಸಲುವಾಗಿ ಆಡಳಿತ ಮಂಡಳಿ ಸಭೆಗೆ ದಿನಾಂಕ ನಿಗದಿಯ ನಿರೀಕ್ಷಣೆಯಲ್ಲಿರುವುದಾಗಿ ತಿಳಿಸಿದ ಮೇರೆಗೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ, ನೆಫ್ರೋ–ಯುರಾಲಜಿ ಸಂಸ್ಥೆ ಇವರು ಆಡಳಿತದ ಹಿತದೃಷ್ಟಿಯಿಂದ ಮೇಲ್ಕಂಡ ಎರಡೂ ಸಭೆಯ ನಡವಳಿಗಳನ್ನು ಆಡಳಿತ ಮಂಡಳಿಯ ಉಪಾಧ್ಯಕ್ಷರಾದ ವೈದ್ಯಕೀಯ ಶಿಕ್ಷಣ ಸಚಿವರ ಶಿಫಾರಸ್ಸಿನೊಂದಿಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಕ ಏಕಕಡತವನ್ನು ಆಡಳಿತ ಮಂಡಳಿಯ ಅಧ್ಯಕ್ಷರಿಗೆ ಸಲ್ಲಿಸಿ ಅನುಮೋದನೆ ಪಡೆದು, ತದನಂತರ ಆಡಳಿತ ಮಂಡಳಿಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯುವಂತೆ ಸೂಚಿಸಿದ ಮೇರೆಗೆ, ದಿನಾಂಕ : 04.01.2020 ಹಾಗೂ 07.01.2020ರ ಆರ್ಥಿಕ ಸಮಿತಿ ಸಭೆಯ ನಡವಳಿಗಳಲ್ಲಿನ ಅಂಶಗಳನ್ನು ಆಡಳಿತ ಮಂಡಳಿಯ ಅಧ್ಯಕ್ಷರ ಅನುಮೋದನೆಗಾಗಿ ವೈದ್ಯಕೀಯ ಶಿಕ್ಷಣ ಸಚಿವರ ಶಿಫಾರಸ್ಸಿನೊಂದಿಗೆ ಸಲ್ಲಿಸುವ ಬಗ್ಗೆ ಸರ್ಕಾರಕ್ಕೆ ಏಕಕಡತದಲ್ಲಿ ಮಂಡಿಸಿರುವ ಬಗ್ಗೆ ಪ್ರಸ್ತಾಪಿಸಲಾಗಿ, ಸಮ್ಮತಿಸಿತು.**

**ವಿಷಯ (ಆ) : ನೆಫ್ರೋ–ಯುರಾಲಜಿ ಸಂಸ್ಥೆಯ 2021–22ನೇ ಸಾಲಿನ ಆಯವ್ಯಯವನ್ನು ಆಡಳಿತ ಮಂಡಳಿಯು ಅನುಮೋದಿಸುವ ಬಗ್ಗೆ.**

ನೆಫ್ರೋ–ಯುರಾಲಜಿ ಸಂಸ್ಥೆಯ 2021–22ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು, 2020–21ನೇ ಸಾಲಿನ ಅನುಮೋದಿತ ಅಂದಾಜುಗಳು ಹಾಗೂ 2021–22 ನೇ ಸಾಲಿನ ಪರಿಷ್ಕೃತ ಅಂದಾಜುಗಳೊಂದಿಗೆ ಮಂಡಿಸಲಾಗಿದೆ. (ಮೈಸೂರು ಘಟಕದ ಆಯವ್ಯಯ ಒಳಗೊಂಡಿರುತ್ತದೆ).

**2021–22ನೇ ಸಾಲಿನ ರಾಜಸ್ವ ಅಂದಾಜುಗಳ ವಿವರಗಳು :–**

2021–22ನೇ ಸಾಲಿಗೆ ರಾಜಸ್ವ ಲೆಕ್ಕ ಶೀರ್ಷಿಕೆಯಲ್ಲಿ ಒಟ್ಟಾರೆ ರೂ. 5282.00 ಲಕ್ಷ ರೂ. ಗಳನ್ನು ವಿವಿಧ ಮೂಲಗಳಿಂದ ಸ್ವೀಕರಿಸಲಾಗುವ ವಿವರಗಳು ಈ ಕೆಳಕಂಡಂತಿವೆ.

| ಎ.) ರಾಜಸ್ವ | | ಲಕ್ಷ ರೂ.ಗಳಲ್ಲಿ |
|---|---|---|
| 1) ಕರ್ನಾಟಕ ಸರ್ಕಾರದ ಸಹಾಯನುಧನ | – | 4076.00 |
| 2) ಆಸ್ಪತ್ರೆ ಬಳಕೆದಾರರ ಶುಲ್ಕ | – | 800.00 |
| 3) ದೇಣಿಗೆ | – | 0.00 |
| 4) ಬಡ್ಡಿ | – | 360.00 |
| 5) ಕ್ಲಿನಿಕಲ್ / ವಿದ್ಯಾರ್ಥಿಗಳ ಶುಲ್ಕ | – | 41.00 |
| 6) ಇತರೆ | – | 05.00 |
| | | 5282.00 |

**ರಾಜಸ್ವ ವೆಚ್ಚಗಳ ಪ್ರಸ್ತಾವನೆ :–**

1) **ವೇತನ ಮತ್ತು ಭತ್ಯೆಗಳು:–**2020–21ನೇ ಸಾಲಿನಲ್ಲಿ 2554.56 ಲಕ್ಷ ರೂ.ಗಳು ವೆಚ್ಚವಾಗಿದ್ದು, 2021–22ನೇ ಆರ್ಥಿಕ ಸಾಲಿನಲ್ಲಿ 2826.00 ಲಕ್ಷ ರೂ.ಗಳನ್ನು ಈ ಉಪಶೀರ್ಷಿಕೆಯಲ್ಲಿ ಅಂದಾಜಿಸಲಾಗಿದೆ.

2) **ಪೆಟ್ರೋಲ್ ಡೀಸೆಲ್:–** ಸಂಸ್ಥೆಯ ಎರಡು ಆಂಬ್ಯುಲೆನ್ಸ್, ಮೂರು ವಾಹನಗಳು ಹಾಗೂ ಒಂದು ಜನರೇಟರ್‌ಗಳಿದ್ದು ಇವುಗಳ ನಿರ್ವಹಣೆಗೆ 2020–21ನೇ ಸಾಲಿನಲ್ಲಿ 3.71 ಲಕ್ಷ ರೂ.ಗಳು ವೆಚ್ಚವಾಗಿದ್ದು 2021–22ನೇ ಸಾಲಿಗೆ 5.00ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

3) **ವಿದ್ಯುತ್ ಮತ್ತು ನೀರು ಸರಬರಾಜು:–** 2020–21ನೇ ಸಾಲಿನಲ್ಲಿ ರೂ.84.64 ಲಕ್ಷ ವೆಚ್ಚ ಭರಿಸಲಾಗಿದ್ದು, ಈಗಾಗಲೇ ವಿದ್ಯುತ್ ಬಳಕೆ ಶುಲ್ಕದ ದರಗಳನ್ನು ಹೆಚ್ಚಿಸಿರುವುದರಿಂದ ಹಾಗೂ ನೀರು ಸರಬರಾಜಿನಲ್ಲಿ ಬಳಕೆ ದರಗಳನ್ನು ಹೆಚ್ಚಿಸಿರುವುದರಿಂದ 2021–22ನೇ ಸಾಲಿನಲ್ಲಿ 120.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

4) **ಔಷಧಿ ಮತ್ತು ರಸಾಯನಿಕಗಳು:–** 2020–21 ನೇ ಸಾಲಿನಲ್ಲಿ 1024.64 ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದ್ದು, ಹೊರರೋಗಿ ವಿಭಾಗ, ತುರ್ತು ಚಿಕಿತ್ಸೆ ತೀವ್ರ ನಿಗಾ ಘಟಕಗಳಲ್ಲಿ ಔಷಧಿ ಬಳಕೆ ಹೆಚ್ಚಾಗುತ್ತಿದ್ದು ಮತ್ತು ಔಷಧಿ ದರಗಳು ಸಹ ಪ್ರತಿವರ್ಷ ಏರುತ್ತಿರುವುದರಿಂದ, 2021–22ನೇ ಸಾಲಿನಲ್ಲಿ ಈ ಉಪಶೀರ್ಷಿಕೆಗೆ 1000.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

4) **ಕಛೇರಿ ವೆಚ್ಚ:–** ಕಛೇರಿ ವೆಚ್ಚದ ಶೀರ್ಷಿಕೆಯಲ್ಲಿ ಲೇಖನ ಸಾಮಗ್ರಿಗಳು ಹಾಗೂ ಇತರೆ ವೆಚ್ಚಗಳಿಗೆ 35.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

5) **ಪೀಠೋಪಕರಣ :–** ವಾರ್ಡ್‌ಗಳಿಗೆ ಅವಶ್ಯವಿರುವ ಪೀಠೋಪಕರಣಗಳು, ರೋಗಿಗಳ ಮಂಚ, ಬೆಡ್‌ಸೈಡ್ ಲಾಕರ್ಸ್, ಮೇಜು, ಕುರ್ಚಿಗಳು ಮುಂತಾದವುಗಳಿಗೆ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

6) **ಟೆಲಿಫೋನ್ ವೆಚ್ಚ:–** ಆಸ್ಪತ್ರೆ ಸಂಪರ್ಕ ವ್ಯವಸ್ಥೆ, ಆಡಳಿತ ವ್ಯವಹಾರ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗ್ರಂಥಾಲಯ ಅಂತರ್ಜಾಲ ಸಂಪರ್ಕ ವ್ಯವಸ್ಥೆಯನ್ನು ಸ್ಥಾಪಿಸಿಕೊಂಡಿರುವುದರಿಂದ 5.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

7) **ವಾಹನ ಮತ್ತು ನಿರ್ವಹಣೆ:–** ಒಂದು ಆಂಬುಲೆನ್ಸ್ ಮತ್ತು ಮೂರು ಇತರೆ ವಾಹನಗಳಿದ್ದು ಇವುಗಳ ಸರ್ವೀಸ್, ರಿಪೇರಿ ವೆಚ್ಚಗಳಿಗೆ ಪ್ರಸಕ್ತ ಸಾಲಿನಲ್ಲಿ 3.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

8) **ಜಾಹೀರಾತು:–** ಸಂಸ್ಥೆಯಲ್ಲಿ ಔಷಧಿ ಉಪಕರಣ ಸಲಕರಣೆಗಳ ಸಂಗ್ರಹಣೆ ಮತ್ತು ನೇಮಕಾತಿ ಪ್ರಕ್ರಿಯೆಗಳಿಗೆ ಕೆ.ಟಿ.ಪಿ.ಪಿ. ನಿಯಮಗಳ ರೀತ್ಯ ಜಾಹೀರಾತು ನೀಡಬೇಕಾಗಿರುವುದರಿಂದ, 5.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

9) **ವೈದ್ಯಕೀಯ ಉಪಕರಣಗಳು:–** 2020–21ನೇ ಸಾಲಿನಲ್ಲಿ ಇ–ಟೆಂಡರ್ ಮೂಲಕ ವೈದ್ಯಕೀಯ ಉಪಕರಣಗಳನ್ನು ಖರೀದಿಸುವ ಸಲುವಾಗಿ 147.74 ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದ್ದು, 2021–22 ನೇ ಸಾಲಿನಲ್ಲಿ 742.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

10) **ಆತಿಥ್ಯ ವೆಚ್ಚ:–** ಆಡಳಿತ ಮಂಡಳಿ ಸಭೆ ಹಾಗು ಇತರೆ ಸಭೆಗಳಿಗೆ ಆಹ್ವಾನಿಸುವ ಸದಸ್ಯರುಗಳಿಗೆ ಆತಿಥ್ಯಕ್ಕೆ 5.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

11) **ಪಥ್ಯಾಹಾರ ವೆಚ್ಚ:–** ಸಂಸ್ಥೆಯಲ್ಲಿ ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿಯಲ್ಲಿ ಚಿಕಿತ್ಸೆ ನೀಡುವ ರೋಗಿಗಳಿಗೆ ಪಥ್ಯಾಹಾರಕ್ಕಾಗಿ ರೂ.15.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದೆ.

12) **ಹಾಸಿಗೆ ಮತ್ತು ವಸ್ತ್ರಗಳು:–** 2020–21ನೇ ಸಾಲಿನಲ್ಲಿ ರೋಗಿಗಳಿಗೆ ಅವಶ್ಯವಿರುವ ಹಾಸಿಗೆ ವಸ್ತ್ರಗಳು ಹಾಗು ತೀವ್ರ ನಿಗಾ ಘಟಕ ಮತ್ತು ಓ.ಟಿ ವಸ್ತ್ರಗಳನ್ನು ಖರೀದಿಸಲು 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

13) **ಕಿರು ಕಾಮಗಾರಿಗಳು:–** ಸಿವಿಲ್, ಎಲೆಕ್ಟ್ರಿಕಲ್, ನೀರು ಸರಬರಾಜು, ಸಂಸ್ಥೆಗೆ ಬಣ್ಣ ಹಾಕುವ ಕಾಮಗಾರಿ ಇತ್ಯಾದಿಗಳಿಗೆ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

15) **ಲೈಬ್ರರಿ:–** ಸಂಸ್ಥೆಯಲ್ಲಿ ಸ್ನಾತ್ತಕೋತ್ತರ ಕೋರ್ಸ್‌ಗಳಾದ ಎಂಸಿಹೆಚ್ ಯುರಾಲಜಿ, ಡಿಎಂ ನೆಫ್ರೋಲಜಿ ಇವುಗಳೊಂದಿಗೆ ಫೆಲೋಷಿಪ್ ಕೋರ್ಸ್‌ಗಳು, ಡಿಪ್ಲೊಮೋ ಇನ್ ಡಯಾಲಿಸಿಸ್, ಲ್ಯಾಬೋರೇಟರಿ ಹಾಗೂ ಓಟಿ ಟೆಕ್ನಾಲಜಿ ಕೋರ್ಸ್‌ಗಳು ಜರುಗುತ್ತಿದ್ದು ವಿದ್ಯಾರ್ಥಿಗಳಿಗೆ ಅವಶ್ಯವಿರುವ ಪುಸ್ತಕ, ಜರ್ನಲ್ಸ್‌ಗಳ ಸಂಗ್ರಹಣೆಗೆ 2020–21ನೇ ಸಾಲಿನಲ್ಲಿ 24.17 ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದ್ದು, 2021–22ನೇ ಸಾಲಿನಲ್ಲಿ 40.00 ಲಕ್ಷ ರೂ. ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

16) **ಆಸ್ಪತ್ರೆ ಅವಶ್ಯಗಳು:–** ಆಸ್ಪತ್ರೆ ಶುಚೀಕರಣ ಅವಶ್ಯವಿರುವ ವಸ್ತುಗಳ ಸಂಗ್ರಹಣೆಗೆ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

17) **ಪ್ರಯಾಣ ವೆಚ್ಚ :–** ವೈದ್ಯಕೀಯ ಬೋಧಕ ಸಿಬ್ಬಂದಿಯು ವೈಜ್ಞಾನಿಕ ಪ್ರಬಂಧಗಳನ್ನು ವೈದ್ಯಕೀಯ ಸಮಾವೇಶಗಳಲ್ಲಿ ಮಂಡಿಸಲು ಪ್ರಯಾಣ ಭತ್ಯೆಗೆ 3.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

18) **ಎಕ್ಸ್–ರೇ ಫಿಲಂಗಳು:– 2020–21ನೇ ಸಾಲಿನಲ್ಲಿ** ಎಕ್ಸ್–ರೇ ಫಿಲಂಗಳ ಸಂಗ್ರಹಣೆಗೆ 19.56 ಲಕ್ಷ ರೂ.ಗಳು ವೆಚ್ಚವಾಗಿದ್ದು, 2021–22ನೇ ಸಾಲಿಗೆ 22.00 ಲಕ್ಷ ರೂಗಳ ವೆಚ್ಚವನ್ನ ಅಂದಾಜಿಸಲಾಗಿದೆ.

19) **ವೃತ್ತಿಪರರಿಗೆ ಹಣ ಸಂದಾಯ:–** ಚಾರ್ಟರ್ಡ್ ಅಕೌಂಟೆಂಟ್‌ಗಳಿಗೆ ಲೆಕ್ಕ ತಪಾಸಣಾ ಶುಲ್ಕ ಹಾಗು ಇನ್ನಿತರೆ ವೃತ್ತಿಪರ ವೆಚ್ಚಗಳಿಗೆ 2020–21ನೇ ಸಾಲಿನಲ್ಲಿ 7.95 ಲಕ್ಷ ರೂ.ಗಳು ವೆಚ್ಚವಾಗಿದ್ದು 2021–22 ನೇ ಸಾಲಿಗೆ 20.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

20) **ಮಜೂರಿ :–**ಭದ್ರತಾ ಸಿಬ್ಬಂದಿ ಸೇವೆ ಪಡೆದುಕೊಳ್ಳಲ 2020–21ನೇ ಸಾಲಿನಲ್ಲಿ 60.00 ಲಕ್ಷ ರೂ.ಗಳು ವೆಚ್ಚವಾಗಿದ್ದು, 2021–22ನೇ ಸಾಲಿಗೆ 65.00 ಲಕ್ಷ ರೂ.ಗಳನ್ನು ಅಂದಾಜಿಸಲಾಗಿದೆ.

21) **ಗಣಕಯಂತ್ರ/ತಂತ್ರಾಂಶ:– ಗಣಕಯಂತ್ರ ಖರೀದಿಗಾಗಿ** 2020–21ನೇ ಸಾಲಿನಲ್ಲಿ 21.27 ಲಕ್ಷ ರೂ. ಗಳು ವೆಚ್ಚವಾಗಿದ್ದು 2021–22ನೇ ಸಾಲಿನಲ್ಲಿ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

22) **ಫೀ (ಶುಲ್ಕ) :–** ಸಂಸ್ಥೆಯು ಭಾರತೀಯ ವೈದ್ಯಕೀಯ ಮಂಡಳಿ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗು ಇತರೆ ಸಂಸ್ಥೆಗಳಿಂದ ಮಾನ್ಯತೆಗೆ ಹಾಗೂ ಇತರೆ ಶುಲ್ಕ ಸಂದಾಯ ಮಾಡಬೇಕಾಗಿರುವುದರಿಂದ 6.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

23) **ರಿಪೇರಿ ಹಾಗೂ ನಿರ್ವಹಣೆ:–** ಶೀತೋಪಕರಣ, ಸಿ.ಎಸ್.ಎಸ್.ಡಿ, ಜನರೇಟರ್‌ಗಳು ವಾಷಿಂಗ್ ಯಂತ್ರಗಳು, ಹವಾ ನಿಯಂತ್ರಣ, ನೀರೆತ್ತುವ ಪಂಪ್‌ಗಳು ಹಾಗೂ ಇನ್ನಿತರೆ ವಸ್ತುಗಳ ರಿಪೇರಿ ಹಾಗೂ ನಿರ್ವಹಣೆಗೆ 150.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

24) **ಕೈತೋಟ ನಿರ್ವಹಣೆ :–** ಸಂಸ್ಥೆಯ ಕೈತೋಟ ನಿರ್ವಹಣೆಗಾಗಿ ರೂ. 5.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದೆ.

25) **ಉಪಕರಣಗಳ ವಾರ್ಷಿಕ ನಿರ್ವಹಣೆ:–** ಸಂಸ್ಥೆಯಲ್ಲಿ ಈಗಾಗಲೇ ಸಂಗ್ರಹಣೆಯಾಗಿರುವ ವೆಂಟಿಲೇಟರ್ಸ್, ಮಾನಿಟರ್ಸ್‌ಗಳು, ಓ.ಟಿ.ಲೈಟ್, ಟೇಬಲ್‌ಗಳು, ಆಕ್ಸಿಜನ್ ಲೈನ್, ಸಕ್ಷನ್ ಲೈನ್ ಹಾಗೂ ಇನ್ನಿತರೆ ಉಪಕರಣಗಳ ವಾರ್ಷಿಕ ನಿರ್ವಹಣೆಗೆ 50.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

26) **ವೈದ್ಯಕೀಯ ಕಾರ್ಯಾಗಾರ ಮತ್ತು ಸಭೆಗಳು :** ಸಂಸ್ಥೆಯಲ್ಲಿ ವೈದ್ಯಕೀಯ ಕಾರ್ಯಾಗಾರ ಮತ್ತು ಸಭೆಗಳನ್ನು ಜರುಗಿಸಲು 5.00 ಲಕ್ಷ ರೂ.ಗಳ ವೆಚ್ಚವನ್ನು ಅಂಧಾಜಿಸಲಾಗಿದೆ.

27) **ಎನ್ ಎ ಬಿ ಹೆಚ್:** ಸಂಸ್ಥೆಗೆ ಎನ್ ಎ ಬಿ ಹೆಚ್ ಮಾನ್ಯತೆ ಪಡೆಯಲು 2021–22ನೇ ಸಾಲಿಗೆ ರೂ. 5 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದೆ.

28) **ವೈದ್ಯಕೀಯ ಮರುಪಾವತಿ :** ಸಂಸ್ಥೆಯಲ್ಲಿ ವೈದ್ಯಕೀಯ ಮರುಪಾವತಿಗಾಗಿ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

29) **ಶೈಕ್ಷಣಿಕ ವೆಚ್ಚ:** ಸಂಸ್ಥೆಯ ಶೈಕ್ಷಣಿಕ ಚಟುವಟಿಕೆಗಳಿಗಾಗಿ 10.00 ಲಕ್ಷ ರೂ.ಗಳ ವೆಚ್ಚವನ್ನು ಅಂದಾಜಿಸಲಾಗಿದೆ.

**ಕೋವಿಡ್ –2019 ರ ತುರ್ತು ಪರಿಸ್ಥಿತಿ ಹಿನ್ನಲೆಯಲ್ಲಿ ಆರ್ಥಿಕ ವರ್ಷದ ಆರಂಭದಿಂದಲೂ ಸಹ ಬಳಕೆದಾರರ ಶುಲ್ಕದಲ್ಲಿ ಸಂಗ್ರಹಣೆಯು ಪ್ರತಿ ದಿನವೂ ಕಡಿಮೆಯಾಗುತ್ತಿರುವುದರಿಂದ 2021–22 ನೇ ಸಾಲಿನಲ್ಲಿ ಬಳಕೆದಾರರ ಶುಲ್ಕದ ಆದಾಯವು ಗರಿಷ್ಠ 8.00 ಕೋಟಿಯಾಗುತ್ತದೆ ಎಂದು ಅಂದಾಜಿಸಲಾಗಿರುತ್ತದೆ.**

ಮೇಲ್ಕಂಡಂತೆ 2020–21ನೇ ಸಾಲಿನ ಆಯವ್ಯಯವನ್ನು ಆಡಳಿತ ಮಂಡಳಿಯು ಅನುಮೋದಿಸಲು ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿರುವ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (ಇ) : ಸಂಸ್ಥೆಯ 2020–2021 ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪಟ್ಟಿಯನ್ನು ಆಡಳಿತ ಮಂಡಳಿಯು ಅನುಮೋದಿಸುವ ಬಗ್ಗೆ.**

2020–21 ನೇ ಸಾಲಿನ ಲೆಕ್ಕಪತ್ರ ಪರಿಶೋಧನೆಗಾಗಿ ಸಂಸ್ಥೆಯ ಲೆಕ್ಕಪರಿಶೋಧಕರಾಗಿ ನೇಮಕ ಗೊಂಡಿರುವ ಮೆ॥ ಎಮ್ ಎಸ್ ಆರ್ ಕೆ ಅಂಡ್ ಕಂಪನಿ. ಚಾರ್ಟಡ್ ಅಕೌಂಟೆಂಟ್ಸ್, ನಂ.176, ಮೂರನೇ ಮಹಡಿ 10ನೇ ಅಡ್ಡರಸ್ತೆ, ಮಲ್ಲೇಶ್ವರಮ್, ಬೆಂಗಳೂರು–560 003 ಇವರು ಪರಿಶೋಧಿಸಲ್ಪಟ್ಟ ಸಂಸ್ಥೆಯ 2020–2021ನೇ ಸಾಲಿನ ಲೆಕ್ಕಪತ್ರಗಳ ಪಟ್ಟಿಗಳನ್ನು ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಆರ್ಥಿಕ ಸಮಿತಿಯು ಪರಿಶೀಲಿಸಿ ಆಡಳಿತ ಮಂಡಳಿಗೆ ನೀಡಿದನ್ವಯ ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸಲಾಗಿ, ಅನುಮೋದಿಸಿತು.

ವಿಷಯ (ಈ) : 2021-2022 ನೇ ಸಾಲಿನಿಂದ ಅನ್ವಯವಾಗುವಂತೆ ಸಂಸ್ಥೆಯ ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡುವ ಬಗ್ಗೆ.

ಸಂಸ್ಥೆಯಲ್ಲಿ ಪ್ರಸ್ತುತ ಲೆಕ್ಕಪರಿಶೋಧಕರಾಗಿ ಮೆ॥ ಎಮ್ ಎಸ್ ಆರ್ ಕೆ ಅಂಡ್ ಕಂಪನಿ. ಚಾರ್ಟಡ್ ಅಕೌಂಟೆಟ್ಸ್, ನಂ. 176, ಮೂರನೇ ಮಹಡಿ 10ನೇ ಅಡ್ಡರಸ್ತೆ, ಮಲ್ಲೇಶ್ವರಮ್, ಬೆಂಗಳೂರು-560 003 ಇವರು 2018-2019ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರ ಕಾರ್ಯದ ಅವಧಿಯು ಆರ್ಥಿಕ ವರ್ಷ 2020-21ಕ್ಕೆ ಮುಕ್ತಾಯಗೊಳ್ಳಲಿದ್ದು, 2021-22ನೇ ಸಾಲಿನಿಂದ ಅನ್ವಯವಾಗುವಂತೆ ನೂತನವಾಗಿ ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡಿಕೊಳ್ಳಲು, ಆರ್ಥಿಕ ಸಮಿತಿಯು ಸಮ್ಮತಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿರುವ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

ವಿಷಯ (ಉ) : ಸಂಸ್ಥೆಗೆ ಅವಶ್ಯಕವಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳ ಸಂಗ್ರಹಣೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ನೆಫ್ರೋ-ಯುರಾಲಜಿ ಸಂಸ್ಥೆಗೆ ಚಿಕಿತ್ಸೆಗಾಗಿ ಬರುವ ರೋಗಿಗಳಿಗೆ ಉತ್ತಮ ರೀತಿಯಲ್ಲಿ ಚಿಕಿತ್ಸೆಗಳನ್ನು ನೀಡಲು ಈ ಕೆಳಗೆ ತಿಳಿಸಿರುವ ವೈದ್ಯಕೀಯ ಉಪಕರಣಗಳ ಖರೀದಿಗಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸಿನೊಂದಿಗೆ ಆಡಳಿತಾತ್ಮಕ ಅನುಮೋದನೆ ಕೋರಲಾಗಿ, ಅನುಮೋದಿಸಿತು.

| Sl. No | Name of the equipments | Qty | Approx. Amount |
|---|---|---|---|
| 1 | PLASMA PHERESIS | 1 | 17,00,000 |
| 2 | THULLIUM FIBER LASER | 1 | 1,00,00,000 |
| 3 | ESWL Machine | 1 | 2,50,00,000 |
| 4 | ULTRASOUND& PNEUMATIC LITHOTRIPTER Lithotripser | 1 | 50,00,000 |
| 5 | CRRT Machine | 3 | 50,00,000 |
| 6 | Laminar flow unit for Indigenous third Preparation and TPN | 1 | 10,00,000 |
| 7 | Other medical equipments | | 75,00,000 |
| | A | | **5,52,00,000** |
| | **Mysore unit** | | |
| 8 | Laproscopy instruments | 1 | 50,00,000 |
| 9 | Laminar thro unit for Indigenous third Preparation onTPN | 1 | 10,00,000 |
| 10 | Holimium laser -30 watts | 1 | 30,,00,000 |
| 11 | Flexible ureteroscope - | 3 | 25,00000 |
| 12 | Mini PCNL set | 1 | 25,00,000 |
| 13 | Pediatric Endoscopic Instruments | 1 | 25,00,000 |
| 14 | PD Cycler | 1 | 10,00,000 |
| 15 | Bioimpedance Analyser | 1 | 10,00,000 |
| 16 | Alpha Bed | 15 | 5,00,000 |
| | B | | **1,90,00,000** |
| | **Grand Total (A+B)** | | **7,42,00,000** |

ವಿಷಯ (ಊ) : ಸಂಸ್ಥೆಯ ಅನೆಕ್ಸ್ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಹೆಚ್ಚುವರಿ ಸಿಬ್ಬಂದಿ ಅಗತ್ಯತೆಯ ಬಗ್ಗೆ ಆಡಳಿತಾತ್ಮಕ ಅನುಮೋದನೆಗಾಗಿ ಶಿಫಾರಸ್ಸು ನೀಡುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ/16/ಎಂಎಸ್ಎ/2016 ದಿನಾಂಕ: 06/04/2017ರ ಪ್ರಕಾರ ಅನೆಕ್ಸ್ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಅಗತ್ಯವಿರುವ ಹುದ್ದೆಗಳ ಸೃಜನೆಗಾಗಿ ಹುದ್ದೆಗಳ ವಿವರ ಹಾಗೂ ವೆಚ್ಚದ ವಿವರಗಳೊಂದಿಗೆ ಪ್ರತ್ಯೇಕ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದ್ದ ಮೇರೆಗೆ, ಸದರಿ ಅನೆಕ್ಸ್ ಕಟ್ಟಡವು 2022-23ರ ಸಾಲಿನಲ್ಲಿ ಕಾರ್ಯಾರಂಭವಾಗಲಿರುವುದರಿಂದ, ಅಗತ್ಯವಾದ ಹುದ್ದೆಗಳ ಸೃಜನೆಗಾಗಿ ಈ ಕೆಳಕಂಡಂತೆ ಪ್ರಸ್ತಾಪಿಸಿದೆ.

ಹುದ್ದೆಯ ವಿವರ, ವೇತನ ಶ್ರೇಣಿ, ವಾರ್ಷಿಕ ಅಂದಾಜು ವೆಚ್ಚ ಇವುಗಳ ವಿವರ ಈ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಸೃಜಿಸುವ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ (ರೂ) | ಸರಾಸರಿ ಮಾಸಿಕ ವೇತನ ಮತ್ತು ಭತ್ಯೆಗಳು (ಒಬ್ಬರಿಗೆ) (ರೂ) | ಸರಾಸರಿ ಮಾಸಿಕ ವೇತನ ಮತ್ತು ಭತ್ಯೆಗಳು (ರೂ) | ಅಂದಾಜು ವಾರ್ಷಿಕ ವೆಚ್ಚ (ರೂ) |
|---|---|---|---|---|---|---|
| 1. | ಶುಶ್ರೂಷಕರು | 50 | 33450-62600 | 49845 | 2492250 | 29907000 |
| 2 | ಡಯಾಲಿಸಿಸ್ ತಂತ್ರಜ್ಞರು | 10 | 27650-52650 | 41702 | 417020 | 5004240 |
| 3 | ಪ್ರಯೋಗಶಾಲಾ ತಂತ್ರಜ್ಞರು | 05 | 27650-52650 | 41702 | 208510 | 2502120 |
| 4 | ಕ್ಷಕಿರಣ ತಂತ್ರಜ್ಞರು | 05 | 27650-52650 | 41702 | 208510 | 2502120 |
| 5 | ಓ.ಟಿ.ತಂತ್ರಜ್ಞರು | 05 | 27650-52650 | 41702 | 208510 | 2502120 |
| 6 | ಡೇಟಾ ಎಂಟ್ರಿ ಆಪರೇಟರ್ಸ್ | 10 | 21400-42000 | 32277 | 322770 | 3873240 |
| 7 | ಗ್ರೂಪ್ ಡಿ | 75 | 17000-28950 | 22992 | 1724400 | 20692800 |
| | | | | | ಒಟ್ಟು | **66983640.00** |

ಮೇಲ್ಕಂಡಂತೆ ಅವಶ್ಯಕವಾಗಿರುವ ಹುದ್ದೆಗಳನ್ನು ಸೃಜಿಸಲು (ಕ್ರಮ ಸಂಖ್ಯೆ: 7 ನ್ನು ಹೊರಗುತ್ತಿಗೆ ಆಧಾರದ ಮೇಲೆ) ಆಡಳಿತ ಮಂಡಳಿಯ ಅನುಮೋದನೆಗಾಗಿ ಶಿಫಾರಸ್ಸು ಮಾಡುವಂತೆ ಕೋರಲಾಗಿ, ಆರ್ಥಿಕ ಇಲಾಖೆಯ ಸಹಮತಿಗಾಗಿ ಏಕಕಡತದಲ್ಲಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿ ಅನುಮೋದನೆ ಪಡೆಯುವಂತೆ ತಿಳಿಸಿರುವ ಬಗ್ಗೆ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಆರ್ಥಿಕ ಸಮಿತಿಯ ಸೂಚನೆಯಂತೆ ಕ್ರಮವಹಿಸಲು ಸೂಚಿಸಿತು.

**ವಿಷಯ (ಋ) :** **ಸಂಸ್ಥೆಯಲ್ಲಿ ಜರುಗುವ Ethics Committee meeting ನಲ್ಲಿ ಭಾಗವಹಿಸುವ ಸಂಸ್ಥೆಯೇತರ ಸದಸ್ಯರುಗಳಿಗೆ ಪಾವತಿಸಲಾಗುತ್ತಿರುವ Sitting Fee ಮೊತ್ತವನ್ನು ಹೆಚ್ಚಿಸಲು ಆಡಳಿತ ಮಂಡಳಿ ಅನುಮೋದನೆ ನೀಡುವ ಬಗ್ಗೆ.**

ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ಜರುಗುವ Ethics Committee meeting ನಲ್ಲಿ ಭಾಗವಹಿಸುವ ಸಂಸ್ಥೆಯೇತರ ಸದಸ್ಯರುಗಳಿಗೆ Sitting Fee ಮೊತ್ತ ರೂ 1000.00(ರೂ. ಒಂದು ಸಾವಿರ ಮಾತ್ರ) ಪಾವತಿಸಲಾಗುತ್ತಿದೆ. ಸದರಿ ಮೊತ್ತವನ್ನು ಪರಿಷ್ಕರಿಸಲು ಪ್ರಸ್ತಾಪಿಸಿದ್ದು, ಈಗಾಗಲೇ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪಾವತಿಸಲಾಗುತ್ತಿರುವ ರೂ. 2500.00 ಗಳಿಗೆ ಪರಿಷ್ಕರಿಸಲು ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿರುವ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (ಎ) :** **ಸಂಸ್ಥೆಯಲ್ಲಿ ಮಂಜೂರಾದ ಹುದ್ದೆಗಳ ಎದುರು ಹುದ್ದೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠವೇತನ ಪರಿಷ್ಕರಿಸಿ ಆಡಳಿತ ಮಂಡಳಿಗೆ ಶಿಫಾರಸ್ಸು ನೀಡುವ ಬಗ್ಗೆ.**

ಸರ್ಕಾರದ ಆದೇಶ ಸಂಖ್ಯೆ : ಆಕುಕ : 224 ಎಂಎಂಇ 2018 ದಿನಾಂಕ :26.02.2019ರಂತೆ ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಆಧಾರಿತ ನೌಕರರಿಗೆ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೆ ಆಯಾ ಹುದ್ದೆಯ 2018ರ ಪರಿಷ್ಕೃತ ವೇತನ ಶ್ರೇಣಿಯ ಸಂವಾದಿ ಕನಿಷ್ಟ ಹಂತದಲ್ಲಿ ವೇತನ ನಿಗದಿಗೊಳಿಸಿ ಆದೇಶಿಸಿದೆ. ಈ ಸಂಸ್ಥೆಯಲ್ಲಿ ಮಂಜೂರಾದ ವಿವಿಧ ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳ ಎದುರು ಹುದ್ದೆಯಲ್ಲಿ ಸಿಬ್ಬಂದಿಗಳು ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತದ್ದಾರೆ. ಇವರುಗಳಿಗೆ ಕನಿಷ್ಠ ವೇತನ ನಿಗದಿ ಕಾಯ್ದೆಯುಡಿಯಲ್ಲಿ ನಿಗದಿಪಡಿಸಿರುವ ವೇತನವನ್ನು ಪಾವತಿಸಲಾಗುತ್ತಿದೆ. ಸದರಿ ಮೊತ್ತವು ತುಂಬಾ ಕಡಿಮೆ ಇದ್ದು, ಇದರಿಂದಾಗಿ ಇವರ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿರುತ್ತದೆ ಇದರಿಂದಾಗಿ ಇವರುಗಳು ಆಗಾಗ ಕೆಲಸವನ್ನು ಬಿಟ್ಟು ಹೋಗುತ್ತಿರುತ್ತಾರೆ. ಇದರಿಂದಾಗಿ ಅನುಭವಿ ಸಿಬ್ಬಂದಿಗಳ ಕೊರತೆಯಿಂದಾಗಿ ಆಸ್ಪತ್ರೆಯ ಕೆಲಸಕಾರ್ಯಗಳಿಗೆ ಹಾಗೂ ರೋಗಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದು, ಕೋವಿಡ್-19 ರಂತಹ ಸಾಂಕ್ರಾಮಿಕ ರೋಗದ ಹರಡುವಿಕೆ ಸಂದರ್ಭದಲ್ಲಿ ಈಗಾಗಲೇ ಇರುವ ಕನಿಷ್ಟ ವೇತನದ ಅಡಿಯಲ್ಲಿ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೇಲೆ ಹೊಂದಿಸಿ ಆಸ್ಪತ್ರೆಯ ಕರ್ತವ್ಯವನ್ನು ನಿರ್ವಹಿಸಲು ಕಷ್ಟಸಾಧ್ಯವಾಗಿರುತ್ತದೆ, ಸದರಿ ಹುದ್ದೆಗಳಿಗೆ ಸರ್ಕಾರ ನಿಗದಿಪಡಿಸಿರುವ ಮೂಲವೇತನಕ್ಕೆ ಸಮಾನವಾಗಿ ಕನಿಷ್ಠವೇತನ ನಿಗದಿಪಡಿಸುವ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿರುತ್ತದೆ. ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನ ಸಂಸ್ಥೆಗಳಲ್ಲಿನ ಆಸ್ಪತ್ರೆಗಳಲ್ಲಿ ಇಂತಹ ಹುದ್ದೆಗಳಿಗೆ ಕನಿಷ್ಟ ಮೂಲ ವೇತನವನ್ನು ಪಾವತಿಸಲಾಗುತ್ತಿದ್ದು, ನಮ್ಮ ಸಂಸ್ಥೆಯಲ್ಲಿಯೂ ಸದರಿ ಹುದ್ದೆಗಳ ಕನಿಷ್ಟ ಮೂಲ ವೇತನಕ್ಕೆ ಮೀರದಂತೆ ಕನಿಷ್ಟವೇತನ ನಿಗದಿ ಪಡಿಸಿ ಇ-ಟೆಂಡರ್ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ

ಸೇವೆಯನ್ನು ಪಡೆದುಕೊಳ್ಳಲು ಆರ್ಥಿಕ ಸಮಿತಿಯಿಂದ ಅನುಮೋದನೆ ಕೋರುತ್ತಾ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡುವಂತೆ ಕೋರಿದನ್ವಯ, ಸದರಿ ಪ್ರಸ್ತಾವನೆಯನ್ನು ಏಕಕಡತದಲ್ಲಿ ಆರ್ಥಿಕ ಇಲಾಖೆಗೆ ಮಂಡಿಸುವಂತೆ ಸೂಚಿಸಿರುವ ಬಗ್ಗೆ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಆರ್ಥಿಕ ಸಮಿತಿಯ ಸೂಚನೆಯನುಸಾರ ಕ್ರಮವಹಿಸುವಂತೆ ಸೂಚಿಸಿತು.

## ಆಡಳಿತ ಮಂಡಳಿಯ ಅನುಮೋದನೆಗಾಗಿ ಪ್ರಸ್ತುತ ಮಂಡಿಸುತ್ತಿರುವ ಅಂಶಗಳು :

**ವಿಷಯ (3) : ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ದಿನಾಂಕ : 17.09.2019 ಮತ್ತು ದಿನಾಂಕ : 06.03.2020 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಇಲಾಖಾ ಪದೋನ್ನತಿ ಪರಿಶೀಲನಾ ಸಮಿತಿ ಸಭೆಯ ಶಿಫಾರಸ್ಸುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.**

ದಿನಾಂಕ : 17.09.2019 ಮತ್ತು ದಿನಾಂಕ : 06.03.2020 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಂಸ್ಥೆಯ ಪದೋನ್ನತಿ ಪರಿಶೀಲನಾ ಸಮಿತಿ ಸಭೆಯಲ್ಲಿ ಈ ಕೆಳಗೆ ತಿಳಿಸಿರುವ ವೈದ್ಯರುಗಳ ಪದೋನ್ನತಿಗೆ ಸಂಬಂಧಿಸಿದಂತೆ, ಸಂಸ್ಥೆಯ ವೃಂದ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅನುಸರಿಸಿ ಜನ್ಮದಿನಾಂಕ, ಸೇವೆಗೆ ಸೇರಿದ ದಿನಾಂಕ, ಸೇವಾನುಭವ, ಇಲಾಖಾ ಪರೀಕ್ಷೆ ತೇರ್ಗಡೆ, ವಾರ್ಷಿಕ ಕಾರ್ಯನಿರ್ವಹಣಾ ವರದಿ, ಇಲಾಖಾ ವಿಚಾರಣೆ ವಿವರ, ಪರೀಕ್ಷಾರ್ಥ ಸೇವಾವಧಿ ಘೋಷಣೆ, ಸಂಶೋಧನಾ ವರದಿ ಪ್ರಕಟಣೆ ಈ ಎಲ್ಲಾ ಅರ್ಹತಾ ಮಾನದಂಡಗಳನ್ನು ಪರಿಶೀಲಿಸಿ, ಈ ಕೆಳಕಂಡ ವೈದ್ಯರುಗಳಿಗೆ ಪದೋನ್ನತಿ ನೀಡಲು ಶಿಫಾರಸ್ಸು ಮಾಡಿ ಕೆಳಕಂಡಂತೆ ವರದಿ ನೀಡಲಾಗಿ,

| ಕ್ರಮ ಸಂಖ್ಯೆ | ವೈದ್ಯರ ಹೆಸರು | ಪ್ರಸ್ತುತ ಹುದ್ದೆ ಹಾಗೂ ವಿಭಾಗ | ಪದೋನ್ನತಿ ಹುದ್ದೆ |
|---|---|---|---|
| **ದಿನಾಂಕ : 17.09.2019ರ ಮುಂಬಡ್ತಿ ಆಯ್ಕೆ ಪಟ್ಟಿ :** | | | |
| 1 | ಡಾ॥ ರಾಮಲಿಂಗಯ್ಯ.ಕೆ.ಹೆಚ್. | ಸಹ ಪ್ರಾಧ್ಯಾಪಕರು (ರೇಡಿಯಾಲಜಿ) | ಪ್ರಾಧ್ಯಾಪಕರು |
| 2 | ಡಾ॥ ಸುಜಾತ ಸಿದ್ದಪ್ಪ | ಸಹ ಪ್ರಾಧ್ಯಾಪಕರು (ಪೆಥಾಲಜಿ) | ಪ್ರಾಧ್ಯಾಪಕರು |
| 3 | ಡಾ॥ ಮೈತ್ರಿ.ಕೆ.ಎಂ. | ಸಹ ಪ್ರಾಧ್ಯಾಪಕರು (ಮೈಕ್ರೋಬಯಾಲಜಿ) | ಪ್ರಾಧ್ಯಾಪಕರು |
| 4 | ಡಾ॥ ಕೌಶಲ್ಯ.ಆರ್. | ಸಹ ಪ್ರಾಧ್ಯಾಪಕರು (ಬಯೋಕೆಮಿಸ್ಟ್ರಿ) | ಪ್ರಾಧ್ಯಾಪಕರು |
| 5 | ಡಾ॥ ಶಿವಕುಮಾರ್.ವಿ. | ಸಹಾಯಕ ಪ್ರಾಧ್ಯಾಪಕರು (ಯುರಾಲಜಿ) | ಸಹ ಪ್ರಾಧ್ಯಾಪಕರು |
| 6 | ಡಾ॥ ಸಂಗೀತಾ.ಡಿ. | ಸಹಾಯಕ ಪ್ರಾಧ್ಯಾಪಕರು (ಅರವಳಿಕೆ) | ಸಹ ಪ್ರಾಧ್ಯಾಪಕರು |

| ದಿನಾಂಕ : 06.03.2020ರ ಮುಂಬಡ್ತಿ ಆಯ್ಕೆ ಪಟ್ಟಿ : | | | |
|---|---|---|---|
| 1 | ಡಾ॥ ನಾಗಭೂಷಣ.ಎಂ. | ಸಹ ಪ್ರಾಧ್ಯಾಪಕರು (ಯುರಾಲಜಿ) | ಪ್ರಾಧ್ಯಾಪಕರು |
| 2 | ಡಾ॥ ಶ್ರೀನಿವಾಸ್.ಜೆ. | ಸಹ ಪ್ರಾಧ್ಯಾಪಕರು (ಯುರಾಲಜಿ) | ಪ್ರಾಧ್ಯಾಪಕರು |
| 3 | ಡಾ॥ ಸಂಜಯ್.ಆರ್.ಪಿ. | ಸಹಾಯಕ ಪ್ರಾಧ್ಯಾಪಕರು (ಯುರಾಲಜಿ) | ಸಹ ಪ್ರಾಧ್ಯಾಪಕರು |
| 4 | ಡಾ॥ ಶ್ರೀಧರ್.ಸಿ.ಜಿ. | ಸಹಾಯಕ ಪ್ರಾಧ್ಯಾಪಕರು (ನೆಫ್ರೋಲಜಿ) | ಸಹ ಪ್ರಾಧ್ಯಾಪಕರು |

ಮೇಲ್ಕಂಡಂತೆ ಇಲಾಖಾ ಪದೋನ್ನತಿ ಪರಿಶೀಲನಾ ಸಮಿತಿ ಸಭೆ ದಿನಾಂಕ : 17.09.2019 ರ ಶಿಫಾರಸ್ಸಿಗೆ ಸಂಬಂಧಿಸಿದಂತೆ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ(1)/18/2019–20 ದಿನಾಂಕ : 03.02.2020 ರಲ್ಲಿ ಹಾಗೂ ಇಲಾಖಾ ಪದೋನ್ನತಿ ಪರಿಶೀಲನಾ ಸಮಿತಿ ಸಭೆ ದಿನಾಂಕ : 06.03.2020 ರ ಶಿಫಾರಸ್ಸಿಗೆ ಸಂಬಂಧಿಸಿದಂತೆ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ(1)/30/2019–20 ಮತ್ತು ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ(1)/30(ಎ)/2019–20 ದಿನಾಂಕ : 03.07.2020 ರಲ್ಲಿ ಕ್ರಮವಾಗಿ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಒಂದು ವರ್ಷದ ಅಫಿಷಿಯೇಟಿಂಗ್ (Officiating) ಅವಧಿಗೆ ಒಳಪಟ್ಟು ಆದೇಶ ನೀಡಿದ್ದು ಸದರಿ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (04) : ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ದಿನಾಂಕ : 28.05.2021 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಇಲಾಖಾ ಪದೋನ್ನತಿ ಪರಿಶೀಲನಾ ಸಮಿತಿ ಸಭೆಯ ಶಿಫಾರಸ್ಸುಗಳಿಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ದಿನಾಂಕ : 28.05.2021 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಂಸ್ಥೆಯ ಪದೋನ್ನತಿ ಪರಿಶೀಲನಾ ಸಮಿತಿ ಸಭೆಯಲ್ಲಿ ಈ ಕೆಳಗೆ ತಿಳಿಸಿರುವ ವೈದ್ಯರುಗಳ ಪದೋನ್ನತಿಗೆ ಸಂಬಂಧಿಸಿದಂತೆ, ಸಂಸ್ಥೆಯ ವೃಂದ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅನುಸರಿಸಿ ಜನ್ಮದಿನಾಂಕ, ಸೇವೆಗೆ ಸೇರಿದ ದಿನಾಂಕ, ಸೇವಾನುಭವ, ಇಲಾಖಾ ಪರೀಕ್ಷೆ ತೇರ್ಗಡೆ, ವಾರ್ಷಿಕ ಕಾರ್ಯನಿರ್ವಹಣಾ ವರದಿ, ಇಲಾಖಾ ವಿಚಾರಣೆ ವಿವರ, ಪರೀಕ್ಷಾರ್ಥ ಸೇವಾವಧಿ ಘೋಷಣೆ, ಸಂಶೋಧನಾ ವರದಿ ಪ್ರಕಟಣೆ ಈ ಎಲ್ಲಾ ಅರ್ಹತಾ ಮಾನದಂಡಗಳನ್ನು ಪರಿಶೀಲಿಸಿ, ಈ ಕೆಳಕಂಡ ವೈದ್ಯರುಗಳಿಗೆ ಪದೋನ್ನತಿ ನೀಡಲು ಶಿಫಾರಸ್ಸು ಮಾಡಿ ಕೆಳಕಂಡಂತೆ ವರದಿ ನೀಡಲಾಗಿ,

| ಕ್ರಮ ಸಂಖ್ಯೆ | ವೈದ್ಯರ ಹೆಸರು | ಪ್ರಸ್ತುತ ಹುದ್ದೆ ಹಾಗೂ ವಿಭಾಗ | ಪದೋನ್ನತಿ ಹುದ್ದೆ |
|---|---|---|---|
| 1 | ಡಾ॥ ಮಧುರ.ಎನ್.ಎಸ್. | ಸಹಾಯಕ ಪ್ರಾಧ್ಯಾಪಕರು (ಬಯೋಕೆಮಿಸ್ಟ್ರಿ) | ಸಹ ಪ್ರಾಧ್ಯಾಪಕರು |
| 2 | ಡಾ॥ ಶಶಿಕಲಾ.ಎನ್. | ಸಹಾಯಕ ಪ್ರಾಧ್ಯಾಪಕರು (ಮೈಕ್ರೋಬಯಾಲಜಿ). | ಸಹ ಪ್ರಾಧ್ಯಾಪಕರು |
| 3 | ಡಾ॥ ವಿನಯ್.ಕೆ.ಎಸ್. | ಸಹಾಯಕ ಪ್ರಾಧ್ಯಾಪಕರು (ಪೆಥಾಲಜಿ) | ಸಹ ಪ್ರಾಧ್ಯಾಪಕರು |
| 4 | ಡಾ॥ ಕಿಶನ್.ಎ. | ಸಹಾಯಕ ಪ್ರಾಧ್ಯಾಪಕರು (ನೆಫ್ರೋಲಜಿ) | ಸಹ ಪ್ರಾಧ್ಯಾಪಕರು |

ಮೇಲ್ಕಂಡಂತೆ ಇಲಾಖಾ ಪದೋನ್ನತಿ ಪರಿಶೀಲನಾ ಸಮಿತಿ ಸಭೆ ದಿನಾಂಕ : 28.05.20219 ರ ಶಿಫಾರಸ್ಸಿಗೆ ಸಂಬಂಧಿಸಿದಂತೆ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ(1)/19/2020-21 ದಿನಾಂಕ : 19.07.2021 ರಲ್ಲಿ ಕ್ರಮವಾಗಿ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಒಂದು ವರ್ಷದ ಅಫಿಷಿಯೇಟಿಂಗ್ (Officiating) ಅವಧಿಯ ಷರತ್ತಿಗೊಳಪಟ್ಟು ಆದೇಶ ನೀಡಿದ್ದು, ಈ ಸಂಬಂಧ ಸದರಿ ವೈದ್ಯರುಗಳು ದಿನಾಂಕ : 19.07.2021ರ ಅಪರಾಹ್ನದಂದು ಪದೋನ್ನತಿ ಹುದ್ದೆಗಳಿಗೆ ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮೇಲ್ಕಂಡ ಪ್ರಕ್ರಿಯೆಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (05) : ಸಂಸ್ಥೆಯ ಫಾರ್ಮಾಸಿಸ್ಟ್ ಹುದ್ದೆಯ ಪದನಾಮವನ್ನು ಫಾರ್ಮಸಿ ಅಧಿಕಾರಿ, ಶುಶ್ರೂಷಕ ವೃಂದವನ್ನು ಶುಶ್ರೂಷಾಧಿಕಾರಿ, ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಯ ಪದನಾಮವನ್ನು ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಕ್ಷ-ಕಿರಣ ತಂತ್ರಜ್ಞ ಹುದ್ದೆಯ ಪದನಾಮವನ್ನು ಕಿರಿಯ/ಹಿರಿಯ ವಿಕಿರಣಶಾಸ್ತ್ರ ಚಿತ್ರಣ ಅಧಿಕಾರಿ ಎಂದು ಮರು ಪದನಾಮೀಕರಿಸಿರುವ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ.**

ಸರ್ಕಾರದ ಆದೇಶ ಸಂಖ್ಯೆ : ಆಕುಕ 113 ಹೆಚ್ ಎಸ್ ಎಂ 2019, ಬೆಂಗಳೂರು ದಿನಾಂಕ : 29.02.2020ರಲ್ಲಿ ಫಾರ್ಮಾಸಿಸ್ಟ್ ಹುದ್ದೆಯ ಪದನಾಮವನ್ನು ಫಾರ್ಮಸಿ ಅಧಿಕಾರಿ ಎಂದು ಮರು ಪದನಾಮೀಕರಿಸಿ ಆದೇಶಿಸಿದ್ದು, ಸದರಿ ಆದೇಶದ ಮೇರೆಗೆ, ಸಂಸ್ಥೆಯ ಫಾರ್ಮಾಸಿಸ್ಟ್ ಹುದ್ದೆಯ ಪದನಾಮವನ್ನು ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ(2)/02.2020-21 ದಿನಾಂಕ : 16.05.2020 ರಂತೆ ಫಾರ್ಮಸಿ ಅಧಿಕಾರಿ ಎಂದು ಮರು ಪದನಾಮೀಕರಿಸಿ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಎಂಇಡಿ 244 ಎಂಎಂಸಿ 2020, ಬೆಂಗಳೂರು ದಿನಾಂಕ : 01.07.2020 ರಲ್ಲಿ ಶುಶ್ರೂಷಕ ವೃಂದದ ಪದನಾಮವನ್ನು ಶುಶ್ರೂಷಾಧಿಕಾರಿ ಎಂದು ಮರು ಪದನಾಮೀಕರಿಸಿ ಆದೇಶಿಸಿದ್ದು, ಸದರಿ ಆದೇಶದ ಮೇರೆಗೆ, ಸಂಸ್ಥೆಯ ಶುಶ್ರೂಷಕ ವೃಂದದ ಪದನಾಮವನ್ನು ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ (2)/03/2020-21 ದಿನಾಂಕ : 15.05.2020 ರಂತೆ ಶುಶ್ರೂಷಾಧಿಕಾರಿ ಎಂದು ಮರು ಪದನಾಮೀಕರಿಸಿ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 329 ಹೆಚ್ ಎಸ್ ಎಂ 2020, ಬೆಂಗಳೂರು ದಿನಾಂಕ : 12.01.2021ರಲ್ಲಿ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಯ ಪದನಾಮವನ್ನು ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಎಂದು ಮರು ಪದನಾಮೀಕರಿಸಿ ಆದೇಶಿಸಿದ್ದು, ಸದರಿ ಆದೇಶದ ಮೇರೆಗೆ, ಸಂಸ್ಥೆಯ ಪ್ರಯೋಗಶಾಲಾ ಹುದ್ದೆಯ ಪದನಾಮವನ್ನು ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ(2)/18/2020–21 ದಿನಾಂಕ : 03.02.2021 ರಂತೆ ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಎಂದು ಮರು ಪದನಾಮೀಕರಿಸಿ ಆದೇಶಿಸಿದೆ. ಮೇಲ್ಕಂಡ ಆದೇಶಗಳಿಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿದೆ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 343 ಹೆಚ್ ಎಸ್ ಎಂ 2020, ಬೆಂಗಳೂರು ದಿನಾಂಕ : 17.06.2021ರಲ್ಲಿ ಕ್ಷ–ಕಿರಣ ತಂತ್ರಜ್ಞರ ಹುದ್ದೆಯ ಪದನಾಮವನ್ನು ಕಿರಿಯ/ಹಿರಿಯ ವಿಕಿರಣಶಾಸ್ತ್ರ ಚಿತ್ರಣ ಅಧಿಕಾರಿ ಎಂದು ಮರು ಪದನಾಮೀಕರಿಸಿ ಆದೇಶಿಸಿದ್ದು, ಸದರಿ ಆದೇಶದ ಮೇರೆಗೆ, ಸಂಸ್ಥೆಯ ಕ್ಷ–ಕಿರಣ ಹುದ್ದೆಯ ಪದನಾಮವನ್ನು ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ(2)/18/2020–21 ದಿನಾಂಕ : 10.08.2021 ರಂತೆ ಕಿರಿಯ/ಹಿರಿಯ ವಿಕಿರಣಶಾಸ್ತ್ರ ಚಿತ್ರಣ ಅಧಿಕಾರಿ ಎಂದು ಮರು ಪದನಾಮೀಕರಿಸಿ ಆದೇಶಿಸಿದೆ.

ಮೇಲ್ಕಂಡ ಆದೇಶಗಳಿಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (06) : ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ಶುಶ್ರೂಷಾಧಿಕಾರಿ ಹಾಗೂ ಡಯಾಲಿಸಿಸ್ ತಂತ್ರಜ್ಞರುಗಳನ್ನು ಉನ್ನತ ವ್ಯಾಸಂಗಕ್ಕೆ ನಿಯೋಜಿಸಿರುವ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ.**

ಸಂಸ್ಥೆಯಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಸೇವಾನಿರತ ಶುಶ್ರೂಷಾಧಿಕಾರಿ ಹಾಗೂ ಡಯಾಲಿಸಿಸ್ ತಂತ್ರಜ್ಞರುಗಳನ್ನು ಈ ಕೆಳಕಂಡಂತೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸಿರುವ ಆದೇಶಗಳಿಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ,

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ | ಉನ್ನತ ವ್ಯಾಸಂಗ | ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಮತ್ತು ದಿನಾಂಕ |
|---|---|---|---|
| 1 | ಲೋಕೇಶ್.ಡಿ., ಡಯಾಲಿಸಿಸ್ ತಂತ್ರಜ್ಞ | ಬಿ.ಎಸ್ಸಿ. ಇನ್ ಡಯಾಲಿಸಿಸ್ ಟೆಕ್ನಾಲಜಿ ಕೋರ್ಸ್ | ಸಂಖ್ಯೆ : ನೆಯುಸಂ/ಸಿಬ್ಬಂದಿ (2)/102/2019–20 ದಿನಾಂಕ : 23.10.2019 |
| 2 | ಯೋಗೀಶ್.ಜಿ., ಡಯಾಲಿಸಿಸ್ ತಂತ್ರಜ್ಞ | ಬಿ.ಎಸ್ಸಿ. ಇನ್ ಡಯಾಲಿಸಿಸ್ ಟೆಕ್ನಾಲಜಿ ಕೋರ್ಸ್ | ಸಂಖ್ಯೆ : ನೆಯುಸಂ/ಸಿಬ್ಬಂದಿ (2)/344/2019–20 ದಿನಾಂಕ : 23.10.2019 |
| 3 | ಪವಿತ್ರ.ಎಸ್. ಶುಶ್ರೂಷಾಧಿಕಾರಿ | ಪಿ.ಪಿ.ಬಿ.ಎಸ್.ಸಿ ನರ್ಸಿಂಗ್ | ಸಂಖ್ಯೆ : ನೆಯುಸಂ/ಸಿಬ್ಬಂದಿ (2)/125/2019–20 ದಿನಾಂಕ : 25.10.2019 |

| | | | |
|---|---|---|---|
| 4 | ಪುಷ್ಪಲತ.ಜಿ.ಟಿ. ಶುಶ್ರೂಷಾಧಿಕಾರಿ | ಎಂ.ಎಸ್.ಸಿ. ನರ್ಸಿಂಗ್ | ಸಂಖ್ಯೆ : ನೆಯುಸಂ/ಸಿಬ್ಬಂದಿ (2)/33/2019–20 ದಿನಾಂಕ : 07.11.2019 |
| 5 | ಲೋಹಿತ್ ಕುಮಾರ್ ನಾಯ್ಕ್ ಶುಶ್ರೂಷಾಧಿಕಾರಿ | ಎಂ.ಎಸ್.ಸಿ. ನರ್ಸಿಂಗ್ | ಸಂಖ್ಯೆ : ನೆಯುಸಂ/ಸಿಬ್ಬಂದಿ (2)/74/2008–09/21 ದಿನಾಂಕ : 24.02.2021 |
| 6 | ಕವಿತ.ಪಿ.ಆರ್. ಶುಶ್ರೂಷಾಧಿಕಾರಿ | ಪಿ.ಪಿ.ಬಿ.ಎಸ್.ಸಿ ನರ್ಸಿಂಗ್ | ಸಂಖ್ಯೆ : ನೆಯುಸಂ/ಸಿಬ್ಬಂದಿ (2)/220/2011–12/21 ದಿನಾಂಕ : 31.03.2021 |
| 7 | ಸೌಮ್ಯ.ಹೆಚ್.ವಿ. ಶುಶ್ರೂಷಾಧಿಕಾರಿ | ಪಿ.ಪಿ.ಬಿ.ಎಸ್.ಸಿ ನರ್ಸಿಂಗ್ | ಸಂಖ್ಯೆ : ನೆಯುಸಂ/ಸಿಬ್ಬಂದಿ (2)/590/2008–09/21 ದಿನಾಂಕ : 01.04.2021. |

ಮೇಲ್ಕಂಡ ಆದೇಶಗಳಿಗೆ ಆಡಳಿತ ಮಂಡಳಿಯು ಘಟನೋತ್ತರ ಅನುಮೋದನೆ ನೀಡಿತು.

**ವಿಷಯ (07) : ಕೆ.ಇ.ಎ ಹಾಗೂ ಸಂಸ್ಥೆಯ ನೇರ ನೇಮಕಾತಿ ಮುಖಾಂತರ ಆಯ್ಕೆ ಹೊಂದಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶುಶ್ರೂಷಕರುಗಳ ರಾಜೀನಾಮೆಯನ್ನು ಅಂಗೀಕರಿಸಿರುವ ಪ್ರಕ್ರಿಯೆಯ ಆದೇಶಗಳಿಗೆ ಅಡಳಿತ ಮಂಡಳಿಯು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಕೆ.ಇ.ಎ. ಮುಖಾಂತರ ಆಯ್ಕೆ ಹೊಂದಿದ್ದ ಶುಶ್ರೂಷಕರುಗಳಾದ ಶ್ರೀಮತಿ. ಭವ್ಯ.ಕೆ. ಮತ್ತು ಶ್ರೀಮತಿ. ಪವಿತ್ರ.ಎಸ್. ಹಾಗೂ ಸಂಸ್ಥೆಯ ನೇರ ನೇಮಕಾತಿ ಮುಖಾಂತರ ಆಯ್ಕೆಯಾಗಿದ್ದ ಶುಶ್ರೂಷಕರಾದ ಶ್ರೀ. ಮಂಜುನಾಥ್.ಜೆ. ಇವರುಗಳು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತಿವೆ :

| ಕ್ರಮ ಸಂಖ್ಯೆ | ಹೆಸರು | ಅರ್ಜಿ ಸಲ್ಲಿಸಿದ ದಿನಾಂಕ | ಕಾರ್ಯವಿಮುಕ್ತಿಗೊಳಿಸಿದ ಆದೇಶ ಸಂಖ್ಯೆ ಮತ್ತು ದಿನಾಂಕ |
|---|---|---|---|
| 1 | ಶ್ರೀಮತಿ. ಭವ್ಯ.ಕೆ. | 13.01.2020 | ನೆಯುಸಂ/ಸಿಬ್ಬಂದಿ(2)/125/2019–20 ದಿನಾಂಕ : 21.01.2020. |
| 2 | ಶ್ರೀಮತಿ. ಪವಿತ್ರ.ಎಸ್. | 13.01.2020 | ನೆಯುಸಂ/ಸಿಬ್ಬಂದಿ(2)/70/2019–20 ದಿನಾಂಕ : 21.01.2020. |
| 3 | ಶ್ರೀ. ಮಂಜುನಾಥ್.ಜೆ. | 13.01.2020 | ನೆಯುಸಂ/ಸಿಬ್ಬಂದಿ(2)/537/2019–20 ದಿನಾಂಕ : 21.01.2020. |

ಮೇಲ್ಕಂಡ ಶುಶ್ರೂಷಕರುಗಳ ರಾಜೀನಾಮೆ ಅಂಗೀಕಾರ ಪ್ರಕ್ರಿಯೆಯ ಆದೇಶಗಳಿಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿದೆ.

**ವಿಷಯ (08) : ಸಂಸ್ಥೆಯಲ್ಲಿ ಖಾಲಿ ಇದ್ದ ಕಿರಿಯ ಅಭಿಯಂತರರ ಹುದ್ದೆಗೆ ಸರ್ಕಾರದ ಆದೇಶದಂತೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವ ಬಗ್ಗೆ ಹಾಗೂ ಸದರಿ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಮುಂದುವರೆಸುವ ಕುರಿತು ಆಡಳಿತ ಮಂಡಳಿಯ ಅನುಮೋದನೆ ಕೋರಿ.**

ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ಕಟ್ಟಡ ನಿರ್ವಹಣೆಯ ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ 01 ಕಿರಿಯ ಅಭಿಯಂತರರ ಹುದ್ದೆಯು ಸೃಜನೆಯಾಗಿದ್ದು, 2019 ರಿಂದ ಸದರಿ ಹುದ್ದೆಯು ಖಾಲಿ ಇರುವುದರಿಂದ ಸಂಸ್ಥೆಗು ಸಿವಿಲ್ ಕಾಮಗಾರಿಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ತೊಂದರೆಯಾಗುತ್ತಿದೆ. ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಸದರಿ ಹುದ್ದೆಯನ್ನು ನೇರ ನೇಮಕಾತಿ / ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆ / ಗುತ್ತಿಗೆ ಆಧಾರದ ಮೇಲೆ ತುಂಬಲು ಅವಕಾಶವಿದ್ದುದರಿಂದ, ಸದರಿ ಹುದ್ದೆಯನ್ನು ತುಂಬುವಂತೆ ಕೋರಿ ಲೋಕೋಪಯೋಗಿ ಇಲಾಖೆಗೆ ನಿರಂತರವಾಗಿ ಪತ್ರ ಬರೆಯಲಾಗಿದೆ. ಆದಾಗ್ಯೂ ಇಲ್ಲಿಯವರೆವಿಗೂ ಲೋಕೋಪಯೋಗಿ ಇಲಾಖೆಯಿಂದ ಯಾವುದೇ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ಸಂಸ್ಥೆಯ ಕಟ್ಟಡ ಮತ್ತು ಇತರೆ ನಿರ್ವಹಣೆಗೆ ಸಂಬಂಧಿಸಿದಂತೆ ಸಿವಿಲ್ ಕೆಲಸ ಕಾರ್ಯಗಳಿಗೆ ಅಡಚಣೆಯಾಗಬಾರದೆಂಬ ಉದ್ದೇಶದಿಂದ ಸದರಿ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಏಕಕಡತದಲ್ಲಿ ಸರ್ಕಾರಕ್ಕೆ ಮಂಡಿಸಲಾಗಿ, ಸದರಿ ಹುದ್ದೆಯನ್ನು 03 ತಿಂಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡುವಂತೆ ಆದೇಶಿಸಿ, ಆಡಳಿತ ಮಂಡಳಿಯಲ್ಲಿ ಮಂಡಿಸುವಂತೆ ಸೂಚಿಸಲಾಯಿತು. ತತ್ಸಂಬಂಧ ಶ್ರೀ. ಶ್ರೀನಿವಾಸ ಮೂರ್ತಿ.ವಿ., ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರನ್ನು ಸಂಸ್ಥೆಯಲ್ಲಿ ಖಾಲಿ ಇದ್ದ ಕಿರಿಯ ಅಭಿಯಂತರರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ 03 ತಿಂಗಳ ಅವಧಿಗೆ ನೇಮಕಾತಿ ಮಾಡಿರುವ ಬಗ್ಗೆ ಅವಗಾಹನೆಗೆ ತರುತ್ತಾ, ಕಿರಿಯ ಅಭಿಯಂತರರ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಮುಂದುವರೆಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಪ್ರತಿ 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸದರಿ ಹುದ್ದೆಯನ್ನು ನೇಮಕಾತಿ ಮಾಡಿಕೊಳ್ಳುವಂತೆ ಸೂಚಿಸಿ ಅನುಮೋದಿಸಿತು.

**ವಿಷಯ (09) : ಸಂಸ್ಥೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಚರಾಸ್ತಿ–ಸ್ಥಿರಾಸ್ತಿಗಳನ್ನು ಖರೀದಿಸುವ ಬಗ್ಗೆ ನೀಡಿರುವ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ.**

ಡಾ॥ ಶಿವಲಿಂಗಯ್ಯ.ಎಂ., ಪ್ರಾಧ್ಯಾಪಕರು, ಯುರಾಲಜಿ ವಿಭಾಗ ಇವರು ತಮ್ಮ ವೇತನ ಉಳಿತಾಯ ಮತ್ತು ಬ್ಯಾಂಕ್ ಲೋನ್ ಮುಖಾಂತರ ಹುಂಡೈ ಕ್ರೆಟಾ ಕಾರನ್ನು ಖರೀದಿಸುವ ಕುರಿತು ಸಂಬಂಧಪಟ್ಟ ದಾಖಲೆಗಳೊಂದಿಗೆ ದಿನಾಂಕ : 03.06.2020ರಂದು ಕಛೇರಿಗೆ ಪತ್ರ ಸಲ್ಲಿಸಿ, ಅನುಮತಿ ನೀಡಬೇಕಾಗಿ ಕೋರಿದ್ದರ ಮೇರೆಗೆ, ಕರ್ನಾಟಕ ನಾಗರೀಕ ಸೇವೆ (ವರ್ತನೆ) ನಿಯಮಗಳು 1966ರ ನಿಯಮ 23 ರ ಅಡಿಯಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಘಟನೋತ್ತರ ಮಂಜೂರಾತಿಯ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ.

ಡಾ॥ ನಾಗಭೂಷಣ.ಎಂ., ಪ್ರಾಧ್ಯಾಪಕರು, ಯುರಾಲಜಿ ವಿಭಾಗ ಇವರು ದಿನಾಂಕ : 01.03.2021 ರಂದು ಕಛೇರಿಗೆ ಪತ್ರ ಸಲ್ಲಿಸಿ, ಬಿ.ಡಿ.ಎ ಲೇಔಟ್, ಹೆಚ್ ಬ್ಲಾಕ್, ಬನಶಂಕರಿ ಸೈಟ್ ನಂ. 3487 (ಸೈಜ್. 24ಮೀX15ಮೀ) ಇಲ್ಲಿ ಖಾಲಿ ಇರುವ ರೂ. 2 ಕೋಟಿ 50 ಲಕ್ಷ ಮೌಲ್ಯದ ನಿವೇಶನವನ್ನು ತಮ್ಮ ಹಾಗೂ ಪತ್ನಿಯ ಉಳಿತಾಯ ಮತ್ತು ಬ್ಯಾಂಕ್ ಲೋನ್ ಮುಖಾಂತರ, ಖರೀದಿಸಲು ಅನುಮತಿ ನೀಡಬೇಕೆಂದು ಕೋರಲಾಗಿ, ಕರ್ನಾಟಕ ನಾಗರೀಕ ಸೇವೆ (ವರ್ತನೆ) ನಿಯಮಗಳು 1966ರ ನಿಯಮ 23 ರ ಅಡಿಯಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಘಟನೋತ್ತರ ಮಂಜೂರಾತಿಯ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ.

ಡಾ॥ ಶ್ರೀಧರ್.ಸಿ.ಜಿ., ಸಹ ಪ್ರಾಧ್ಯಾಪಕರು, ನೆಫ್ರೋಲಜಿ ವಿಭಾಗ ಇವರು ದಿನಾಂಕ : 10.12.2020 ರಂದು ಕಛೇರಿಗೆ ಪತ್ರ ಸಲ್ಲಿಸಿ, ಬಿ.ಇ.ಎಂ.ಎಲ್, ಲೇಔಟ್, 7ನೇ ಹಂತ, 1ನೇ ಫೇಜ್. ವಾಡ್ ್ ನಂ. 198 ರಲ್ಲಿನ ರೂ. 57 ಲಕ್ಷ 04 ಸಾವಿರ ಮೌಲ್ಯದ ಖಾಲಿ ನಿವೇಶನ ಸಂಖ್ಯೆ : 46 ನಿವೇಶನವನ್ನು ತಮ್ಮ ಉಳಿತಾಯ ಮತ್ತು ಬ್ಯಾಂಕ್ ಲೋನ್ ಮುಖಾಂತರ, ಖರೀದಿಸಲು ಅನುಮತಿ ನೀಡಬೇಕೆಂದು ಕೋರಲಾಗಿ, ಕರ್ನಾಟಕ ನಾಗರೀಕ ಸೇವೆ (ವರ್ತನೆ) ನಿಯಮಗಳು 1966ರ ನಿಯಮ 23 ರ ಅಡಿಯಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಘಟನೋತ್ತರ ಮಂಜೂರಾತಿಯ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ.

ಶ್ರೀಮತಿ. ಗುಣಸುಂದರಿ.ಕೆ., ಶೀಘ್ರಲಿಪಿಗಾರರು ಇವರು ತಮ್ಮ ವೇತನ ಉಳಿತಾಯ ಮತ್ತು ಬ್ಯಾಂಕ್ ಲೋನ್ ಮುಖಾಂತರ ಹುಂಡೈ ವೆನ್ಯೂ ಕಾರನ್ನು ಖರೀದಿಸಲು ಸಂಬಂಧಪಟ್ಟ ದಾಖಲೆಗಳೊಂದಿಗೆ ದಿನಾಂಕ : 24.08.2020 ರಂದು ಕಛೇರಿಗೆ ಮನವಿ ಪತ್ರ ಸಲ್ಲಿಸಿ, ಅನುಮತಿ ನೀಡುವಂತೆ ಕೋರಿದ್ದ ಮೇರೆಗೆ, ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಕರ್ನಾಟಕ ನಾಗರೀಕ ಸೇವೆ (ವರ್ತನೆ) ನಿಯಮಗಳು 1966ರ ನಿಯಮ 23 ರ ಅಡಿಯಲ್ಲಿ ಹುಂಡೈ ವೆನ್ಯೂ ಕಾರನ್ನು ಖರೀದಿಸಲು ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ(2)/736/2020–21 ದಿನಾಂಕ : 15.10.2020 ರ ಆದೇಶದ ಮೇರೆಗೆ ಅನುಮತಿ ನೀಡಲಾಗಿದೆ.

ತತ್ಸಂಬಂಧ ಮೇಲ್ಕಂಡ ಆದೇಶಗಳಿಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಮುಂಬರುವ ದಿನಗಳಲ್ಲಿ ಸಂಸ್ಥೆಯ ಸಿಬ್ಬಂದಿಗಳ ಚರಾಸ್ತಿ–ಸ್ಥಿರಾಸ್ತಿ ಖರೀದಿಸುವುದಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಮುಖ್ಯಸ್ಥರ ಹಂತದಲ್ಲಿಯೇ ಅನುಮತಿಯನ್ನು ನೀಡುವ ಬಗ್ಗೆ ಕ್ರಮವಹಿಸುವಂತೆ ಸೂಚಿಸಿ, ಅನುಮೋದಿಸಲಾಯಿತು.

**ವಿಷಯ (10) : ಡಾ॥ ಶಶಿಕಿರಣ್.ಕೆ.ಬಿ. ಸಹಾಯಕ ಪ್ರಾಧ್ಯಾಪಕರು, ಶಿಶುವೈದ್ಯಶಾಸ್ತ್ರ ವಿಭಾಗ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರನ್ನು ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು ಇಲ್ಲಿಗೆ ಖಾಯಂ ಆಗಿ ವರ್ಗಾವಣೆ ಮಾಡಿರುವ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಡಾ॥ ಶಶಿಕಿರಣ್.ಕೆ.ಬಿ. ಸಹಾಯಕ ಪ್ರಾಧ್ಯಾಪಕರು, ಶಿಶುವೈದ್ಯಶಾಸ್ತ್ರ ವಿಭಾಗ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರು ಡಿ.ಎಂ. ನೆಫ್ರೋಲಜಿ ಪದವಿ ವಿದ್ಯಾರ್ಹತೆ ಹೊಂದಿ ನೆಫ್ರೋಲಜಿ ವಿಭಾಗದಲ್ಲಿ ನೈಪುಣ್ಯತೆ ಹೊಂದಿರುವುದರಿಂದ ಇವರ ಸೇವೆಯು ನೆಫ್ರೋ–ಯುರಾಲಜಿ ಸಂಸ್ಥೆಯ ಮೈಸೂರು

ಘಟಕದಲ್ಲಿ ಬಹಳ ಉಪಯುಕ್ತವಾಗುವುದೆಂದು ಪರಿಗಣಿಸಿ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ : ಎಂಇಡಿ 497 ಎಂಎಸ್ ಎಫ್ 2020, ಬೆಂಗಳೂರು, ದಿನಾಂಕ : 07.04.2021ರ ಆದೇಶದನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇಲ್ಲಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಷರತ್ತುಗಳನ್ವಯ ಖಾಯಂ ಆಗಿ ವರ್ಗಾಯಿಸಿದ್ದು, ವರ್ಗಾಯಿಸಿದ ಹುದ್ದೆಯಲ್ಲಿ ಒಂದು ದಿನದ ಮಟ್ಟಿಗೆ ಕಾರ್ಯವರದಿ ಮಾಡಿಕೊಂಡು ನಂತರದ ದಿನಾಂಕದಿಂದ ಜಾರಿಗೆ ಬರುವಂತೆ ನೆಫ್ರೋ-ಯುರಾಲಜಿ ಸಂಸ್ಥೆ, ಮೈಸೂರು ಘಟಕ ಇಲ್ಲಿಗೆ ನಿಯೋಜಿಸಿ ಆದೇಶಿಸಿದೆ. ಸದರಿ ಆದೇಶಾನುಸಾರ ಡಾ॥ ಶಶಿಕಿರಣ್.ಕೆ.ಬಿ. ಇವರು ದಿನಾಂಕ : 16.04.2021ರ ಪೂರ್ವಾಹ್ನದಂದು ಸಂಸ್ಥೆಯ ನೆಫ್ರೋಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ವರದಿ ಮಾಡಿಕೊಂಡು ದಿನಾಂಕ : 17.04.2021ರಿಂದ ಮೈಸೂರು ಘಟಕದಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತತ್ಸಂಬಂಧ ಸರ್ಕಾರದ ಆದೇಶಾನುಸಾರ ಮೇಲ್ಕಂಡಂತೆ ಸದರಿಯವರ ವರ್ಗಾವಣೆ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು ಆಡಳಿತ ಮಂಡಳಿ ಇವರು ಕೂಲಂಕಷವಾಗಿ ಚರ್ಚಿಸಿ, ಈ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಇವರಿಗೆ ಪರಿಶೀಲಿಸಿ, ನಿರ್ಣಯಿಸುವಂತೆ ಸೂಚಿಸಲಾಯಿತು.

**ವಿಷಯ (11) : ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ॥ ವಿವೇಕ್.ಎಸ್.ಆರ್. ಸಹಾಯಕ ಪ್ರಾಧ್ಯಾಪಕರು, ಯುರಾಲಜಿ ವಿಭಾಗ ಇವರನ್ನು ಖಾಯಂ ಆಗಿ ಲೀನ್ ಸಮೇತ ವರ್ಗಾವಣೆ ಮಾಡಿರುವ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಡಾ॥ ವಿವೇಕ್. ಎಸ್. ಆರ್., ಸಹಾಯಕ ಪ್ರಾಧ್ಯಾಪಕರು, ಜನರಲ್ ಸರ್ಜರಿ ವಿಭಾಗ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ಸರ್ಕಾರದ ಆದೇಶ ಸಂಖ್ಯೆ : ಎಂಇಡಿ 30 ಎಂಎಂಸಿ 2020, ಬೆಂಗಳೂರು, ದಿನಾಂಕ : 03.03.2020ರ ಆದೇಶದನ್ವಯ ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇಲ್ಲಿನ ಯುರಾಲಜಿ ವಿಭಾಗದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಖಾಯಂ ಆಗಿ ಲೀನ್ ಸಮೇತ ವರ್ಗಾಯಿಸಿ ಆದೇಶವಾಗಿರುತ್ತದೆ. ಸದರಿ ಆದೇಶಾನುಸಾರ ಡಾ॥ ವಿವೇಕ್. ಎಸ್.ಆರ್., ಇವರು ದಿನಾಂಕ : 04.05.2020ರ ಪೂರ್ವಾಹ್ನದಂದು ಸಂಸ್ಥೆಯ ಯುರಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತತ್ಸಂಬಂಧ ಸರ್ಕಾರದ ಆದೇಶಾನುಸಾರ ಸದರಿಯವರ ವರ್ಗಾವಣೆ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು ಆಡಳಿತ ಮಂಡಳಿ ಇವರು ಕೂಲಂಕಷವಾಗಿ ಚರ್ಚಿಸಿ, ಈ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಇವರಿಗೆ ಪರಿಶೀಲಿಸಿ, ನಿರ್ಣಯಿಸುವಂತೆ ಸೂಚಿಸಲಾಯಿತು.

**ವಿಷಯ (12) : ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ॥ ಕೇಶವಮೂರ್ತಿ.ಆರ್. ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಯುರಾಲಜಿ ವಿಭಾಗ ಹಾಗೂ ನಿರ್ದೇಶಕರು (ಪ್ರ), ಇವರ ವಿದೇಶ ಪ್ರಯಾಣದ ಆದೇಶಕ್ಕೆ ಆಡಳಿತ ಮಂಡಳಿಯು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಡಾ॥ ಕೇಶವಮೂರ್ತಿ.ಆರ್., ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಯುರಾಲಜಿ ವಿಭಾಗ ಹಾಗೂ ನಿರ್ದೇಶಕರು (ಪ್ರ) ಇವರು ಭಾರತೀಯ ಯುರಾಲಜಿಕಲ್ ಸೊಸೈಟಿಯ ಗೌರವ ಕಾರ್ಯದರ್ಶಿಯಾಗಿರುವ ನಿಮಿತ್ತ, ದಿನಾಂಕ : 09.11.2021 ರಿಂದ 14.11.2021ರವರೆಗೆ ದುಬೈ ದೇಶಕ್ಕೆ International SIU 2021 Scientific Programme ನಲ್ಲಿ ಉಪನ್ಯಾಸ ನೀಡುವ ಸಂಬಂಧ, ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಏಕಕಡತ ಸಂಖ್ಯೆ : ನೆಯುಸಂ/ಸಿಬ್ಬಂದಿ (1)/17/2021–22 ದಿನಾಂಕ : 12.10.2021 ರ ಅನುಮತಿ ಮೇರೆಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯ ಷರತ್ತಿಗೆ ಒಳಪಟ್ಟು ಪ್ರವಾಸ ಕೈಗೊಂಡಿದ್ದು, ಸದರಿ ಅನುಮತಿಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (13) : ಡಾ॥ ಲೀಲಾವತಿ.ವಿ., ಸಹಾಯಕ ಪ್ರಾಧ್ಯಾಪಕರು, ನೆಫ್ರೋಲಜಿ ವಿಭಾಗ ಇವರನ್ನು ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು ಇಲ್ಲಿಗೆ ನಿಯೋಜನೆ ಮೇಲೆ ಸೇವೆಗೆ ಸೇರಿದ ದಿನಾಂಕದಿಂದಲೇ ಸಂಸ್ಥೆಯಲ್ಲಿ ವಿಲೀನಗೊಳಿಸುವಂತೆ ಕೋರಿರುವ ಬಗ್ಗೆ**

ಸಂಸ್ಥೆಯಲ್ಲಿ ದಿನಾಂಕ : 07.09.2014 ರಿಂದ ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿದ್ದ ಡಾ॥ ಲೀಲಾವತಿ.ವಿ. ಇವರನ್ನು ಸರ್ಕಾರದ ಆದೇಶ ಸಂಖ್ಯೆ : ಆಕುಕ 50 ಎಂ ಎಸ್ ಎಫ್ 2017, ಬೆಂಗಳೂರು ದಿನಾಂಕ : 08.02.2018 ರಲ್ಲಿ ಷರತ್ತಿಗೊಳಪಟ್ಟು ಖಾಯಂ ಆಗಿ ವಿಲೀನಗೊಳಿಸಿದ್ದು ಇವರು ದಿನಾಂಕ : 09.02.2018ರಂದು ಪೂರ್ವಾಹ್ನ ನೆಫ್ರೋಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಸರ್ಕಾರದ ಆದೇಶದಲ್ಲಿ ಸೇವಾ ಜ್ಯೇಷ್ಠತೆಯನ್ನು ಸಂಸ್ಥೆಗೆ ವಿಲೀನಗೊಂಡ ದಿನಾಂಕದಿಂದ ಪರಿಗಣಿಸಲು ಹಾಗೂ ವಿಲೀನಾತಿಗೊಂಡ ಹುದ್ದೆಗಳಲ್ಲಿ ಇವರ ಜ್ಯೇಷ್ಠತೆಯನ್ನು ಕಿರಿಯವರಾಗಿ ನಿಗದಿಪಡಿಸಲು ಆದೇಶವಾಗಿದ್ದ ಹಿನ್ನೆಲೆಯಲ್ಲಿ, ಡಾ॥ ಲೀಲಾವತಿ.ವಿ ಇವರ ಜ್ಯೇಷ್ಠತೆಯನ್ನು ವಿಲೀನಗೊಂಡ ದಿನಾಂಕದಿಂದ ಪರಿಗಣಿಸಿ ನೆಫ್ರೋಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ಕಿರಿಯವರಾಗಿ ನಿಗದಿಪಡಿಸಲಾಗಿರುತ್ತದೆ.

ಸರ್ಕಾರದ ಆದೇಶದಂತೆ ಸಂಸ್ಥೆಯು ಸೇವಾ ಜ್ಯೇಷ್ಠತೆಯನ್ನು ನಿಗದಿಗೊಳಿಸಿದ್ದರ ವಿರುದ್ಧ ಡಾ॥ ಲೀಲಾವತಿ ಇವರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ **ಪ್ರಕರಣ ಸಂಖ್ಯೆ : 28543/2018 (S-PRO) ದಾಖಲಿಸಿದ್ದು, ಸದರಿ ಪ್ರಕರಣವನ್ನು ಮಾನ್ಯ ನ್ಯಾಯಾಲಯವು ವಿಚಾರಣೆ ನಡೆಸಿ ದಿನಾಂಕ : 02.01.2020ರಂದು ಅರ್ಜಿಯನ್ನು ವಜಾಗೊಳಿಸಿ ಡಾ॥ ಲೀಲಾವತಿ.ವಿ. ಇವರು ರೂ. 25,000/–ಗಳನ್ನು ಸಂಸ್ಥೆಗೆ ಪಾವತಿಸುವಂತೆ ಆದೇಶಿಸಿಸಲಾಗಿ, ಡಾ॥ ಲೀಲಾವತಿ.ವಿ. ಇವರು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ಮಾನ್ಯ ನ್ಯಾಯಾಲಯವು ವಿಚಾರಣೆ**

ನಡೆಸಲಾಗಿ, ಅರ್ಜಿದಾರರಾದ ಡಾ|| ಲೀಲಾವತಿ.ವಿ., ಇವರು ತಮ್ಮ ವಿಲೀನಾತಿಯನ್ನು ರದ್ದುಪಡಿಸುವಂತೆ ಕೋರಿ ಸ್ವ ಇಚ್ಛೆಯಿಂದ ಮಾನ್ಯ ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿದ್ದ ಮೇರೆಗೆ, ಮಾನ್ಯ ನ್ಯಾಯಾಲಯವು ದಿನಾಂಕ : 28.02.2020ರ ವಿಲೀನಾತಿಯನ್ನು **(Set aside)** ರದ್ದುಗೊಳಿಸಿ ಈ ಕೆಳಕಂಡಂತೆ ಆದೇಶಿಸಿದೆ :

**"(i) The impugned order dated 8th February 2018 (Annexure-A to W.P.No. 28543/2018) is hereby set aside only in relation to the appellant. The said order will continue to remain in force as far as the fourth respondent is concerned;**

**(ii) As Annexure-C is the communication issued on the basis of the representation made by the petitioner on the basis of the order dated 8th February 2018, the same does not survive;**

**(iii) In view of the aforesaid directions, the impugned order is formally set aside;**

**(iv) We make it clear that as the appellant has taken the risk of getting the order of 8th February 2018 set aside at her instance, the State Government while considering the prayer of the appellant for absorption shall not consider the affidavit filed by the appellant on 6th December 2017;**

**(v) We direct the State Government to consider the case of the appellant for absorption in the cadre of Assistant Professor in accordance with law as expediously as possible. The decision shall be taken by the State Government not later than one month from today which shall be communicated to the appellant;**

**(vi) We make it clear that we made no adjudication on the rival contentions of the parties;**

**(vii) The appeal is disposed of on the above terms;**

**(viii) The pending interlocutory application does not survive for consideration and stands disposed of".**

ಮೇಲ್ಕಂಡ ಮಾನ್ಯ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಸದರಿಯವರನ್ನು ಸಂಸ್ಥೆಯಲ್ಲಿ ವಿಲೀನಗೊಳಿಸಿ ಜ್ಯೇಷ್ಠತೆಯನ್ನು ನಿಗದಿಪಡಿಸುವ ಸಂಬಂಧ ಪ್ರಸ್ತಾವನೆಯನ್ನು ಸಂಸ್ಥೆಯ ಆಡಳಿತ

ಮಂಡಳಿಯಲ್ಲಿ ಮಂಡಿಸಿ ಆಡಳಿತ ಮಂಡಳಿಯು ತೆಗೆದುಕೊಂಡ ನಿರ್ಣಯದಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿರುವ ಬಗ್ಗೆ ತಮ್ಮ ಆದ್ಯ ಅವಗಾಹನೆಗೆ ತರುತ್ತಾ, ವಿಷಯವನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಿದೆ ಎಂಬುದಾಗಿ ಸಂಸ್ಥೆಯ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ, ಇವರು ತಿಳಿಸಿದನ್ವಯ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರು ಈ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು, ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ ಇವರಿಂದ ವಿವರಣೆ ಪಡೆದು, ನಿಯಮಾನುಸಾರ ಸದರಿ ವೈದ್ಯರ ಸೇವಾ ಜ್ಯೇಷ್ಠತೆಯನ್ನು ವಿಲೀನಾತಿ (Absorption) ಹೊಂದಿದ ದಿನಾಂಕದಿಂದ Retrospective ಆಗಿ ಪರಿಗಣಿಸಲು ಅವಕಾಶ ಇಲ್ಲದೇ ಇರುವುದರಿಂದ ಈ ಬಗ್ಗೆ ಅಸ್ತಿತ್ವದಲ್ಲಿರುವ ನಿಯಮಗಳ (Existing Rules) ಪ್ರಕಾರ ಕ್ರಮವಹಿಸುವಂತೆ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಇವರಿಗೆ ಸೂಚಿಸಲಾಯಿತು.

ವಿಷಯ (14) : **ಡಾ|| ಸುಜಾತ ಸಿದ್ದಪ್ಪ, ಪ್ರಾಧ್ಯಾಪಕರು, ಪೆಥಾಲಜಿ ವಿಭಾಗ ಇವರ ವಿರುದ್ಧ ಆರೋಪಗಳು ಕಂಡು ಬಂದಿರುವ ಹಿನ್ನೆಲೆಯಲ್ಲಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಸರ್ಕಾರವು ಆದೇಶಿಸಿರುವ ಬಗ್ಗೆ.**

ಡಾ|| ಸುಜಾತ ಸಿದ್ದಪ್ಪ, ಪ್ರಾಧ್ಯಾಪಕರು, ಪೆಥಾಲಜಿ ವಿಭಾಗ, ನೆಫ್ರೋ-ಯುರಾಲಜಿ ಸಂಸ್ಥೆ ಇವರು ದಿನಾಂಕ : 18.03.2021ರಂದು ಪೂರ್ವಾಹ್ನ 10.00 ಗಂಟೆಗೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸ್ಥಳೀಯ ಪರಿವೀಕ್ಷಣಾ ತಂಡವು ಪರಿಶೀಲನೆಗೆ ಸಂಸ್ಥೆಗೆ ಭೇಟಿ ನೀಡಿ ನಿರ್ದೇಶಕರ ಕಛೇರಿಯಲ್ಲಿ ಪರಿವೀಕ್ಷಣೆ ಮಾಡುತ್ತಿರುವ ಸಂದರ್ಭದಲ್ಲಿ ಸದರಿಯವರು ಪರಿವೀಕ್ಷಣಾ ತಂಡದ ಮುಂದೆ ಹಾಜರಾಗಿ ಸಂಸ್ಥೆಯ ನಿರ್ದೇಶಕರು ಹಾಗೂ ವೈದ್ಯಕೀಯ ಸಿಬ್ಬಂದಿಗಳ ಮುಂದೆ ಅಗೌರವದಿಂದ ವರ್ತಿಸಿ, ನಿರ್ದೇಶಕರನ್ನು ಅವಾಚ್ಯ ಶಬ್ಧಗಳಿಂದ ನಿಂದಿಸಿ, ನಿರ್ದೇಶಕರ ಹುದ್ದೆಯ ವರ್ಚಸ್ಸಿಗೆ ಹಾಗೂ ಆ ಹುದ್ದೆಯನ್ನು ಹೊಂದಿದ ವ್ಯಕ್ತಿಯ ಘನತೆಗೆ ಧಕ್ಕೆ ಬರುವಂತೆ ನಡೆದುಕೊಂಡ ಬಗ್ಗೆ, ಸದರಿ ವೈದ್ಯರು ಕಛೇರಿಗೆ ಹಾಜರಾಗುತ್ತಿದ್ದಂತೆಯೇ ಸಂಬಂಧಪಡದ ಯಾವುದಾದರೊಂದು ವಿಷಯವನ್ನು ಮುಂದಿಟ್ಟುಕೊಂಡು ಸಿಬ್ಬಂದಿಗಳ ಮೇಲೆ ಜೋರು ಮಾಡುವುದು, ಆಡಳಿತಾಧಿಕಾರಿಗಳಾಗಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕೆ.ಎ.ಎಸ್. ಅಧಿಕಾರಿಗಳನ್ನು ಏಕವಚನದಲ್ಲಿ ನಿಂದಿಸುವುದು, ಲಿಖಿತವಾಗಿ ನೋಟೀಸ್ ನೀಡಿದಲ್ಲಿ ಅದರ ಮೇಲೆಯೇ ಮನಸ್ಸಿಗೆ ಬಂದಂತೆ ಬರೆದು ಕಳುಹಿಸುವುದು, ಸಂಸ್ಥೆಯ ಇತರೆ ಕೊಠಡಿಗೆ ಅನಧಿಕೃತವಾಗಿ ಪ್ರವೇಶಿಸಿ ಅಲ್ಲಿದ್ದ ಕಡತಗಳು, ದಾಖಲೆಗಳನ್ನು ಬಿಸಾಡುವುದು ಹಾಗೂ ರೋಗಿಯ ಪ್ರಯೋಗಾಲಯ ವರದಿಯಲ್ಲಿ ರಕ್ತದ ಗುಂಪನ್ನು ತಪ್ಪಾಗಿ ನಮೂದಿಸಿ ನೀಡುವುದು ಇತ್ಯಾದಿ ಇವರ ವರ್ತನೆಯ ಬಗ್ಗೆ ಸರ್ಕಾರಕ್ಕೆ ವರದಿ ಮಾಡಲಾಗಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಹಾಗೂ ಸದಸ್ಯರು, ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ ಇವರು ಕಡತ ಸಂಖ್ಯೆ : ನೆಯುಸಂ/ಸಿಬ್ಬಂದಿ(1)/20/2020-21 ದಿನಾಂಕ : 01.06.2021 ರನ್ವಯ, ಮೇಲ್ಕಂಡಂತೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ

ಹಿನ್ನೆಲೆಯಲ್ಲಿ ಡಾ॥ ಸುಜಾತ ಸಿದ್ದಪ್ಪ, ಪ್ರಾಧ್ಯಾಪಕರು, ಪೆಥಾಲಜಿ ವಿಭಾಗ ಇವರ ವಿರುದ್ಧ ಮಾಡಲಾದ ಆರೋಪಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆದೇಶಿಸಿರುತ್ತಾರೆ :

**" ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಡಾ॥ ಸುಜಾತ ಸಿದ್ದಪ್ಪ, ಪ್ರಾಧ್ಯಾಪಕರು, ಪೆಥಾಲಜಿ ವಿಭಾಗ, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇವರ ವಿರುದ್ಧ ಮಾಡಲಾದ ಆರೋಪಗಳು ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ 10(1)(ಡಿ) ರನ್ವಯ ಮತ್ತು ಸಂಸ್ಥೆಯ ಬೈಲಾದ ನೇಮಕಾತಿ ನಿಯಮಗಳನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಿದೆ. ಅಮಾನತ್ತಿನ ಅವಧಿಯಲ್ಲಿ ಡಾ॥ ಸುಜಾತ ಸಿದ್ದಪ್ಪ, ಇವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ -98 ರನ್ವಯ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.**

**ಈ ಆದೇಶವನ್ನು ಸದರಿ ವೈದ್ಯರ ನೇಮಕಾತಿ / ಶಿಸ್ತು ಪ್ರಾಧಿಕಾರವಾದ, ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ : 28.05.2021ರಂದು ನೀಡಿರುವ ಅನುಮೋದನೆಯ ಮೇರೆಗೆ ಹೊರಡಿಸಿದೆ. ಸದರಿ ಆದೇಶವನ್ನು ಸಂಸ್ಥೆಯ ಮುಂದಿನ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.**

**ಅಮಾನತ್ತಿನ ಅವಧಿಯಲ್ಲಿ ಸದರಿಯವರು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ".**

ಮೇಲ್ಕಂಡ ಆದೇಶವನ್ನು ಪ್ರಶ್ನಿಸಿ ಡಾ॥ ಸುಜಾತ ಸಿದ್ದಪ್ಪ ಇವರು ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ : 10469/2021 ಅನ್ನು ದಾಖಲಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ : 17.06.2021ರಂದು ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿ ದಿನಾಂಕ : 05.07.2021ರಂದು ಈ ಕೆಳಕಂಡಂತೆ ಆದೇಶಿಸಿ ಪ್ರಕರಣವನ್ನು ವಜಾಗೊಳಿಸಿದೆ :

" Liberty sought for is granted for withdrawl of the order of suspension. All contentions of both the parties are left open. The Petitioner is at liberty to approach the appropriate forum in the event of any action that would entail prejudice to the petitioner.

With the aforesaid observations, the writ petition is disposed."

ತದನಂತರ, ಡಾ॥ ಸುಜಾತ ಸಿದ್ದಪ್ಪ ಇವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ, ಕಛೇರಿಗೆ ಆಗಮಿಸುತ್ತಿದ್ದು, ಹಾಜರಾತಿ ಪುಸ್ತಕದಲ್ಲಿ ತಮ್ಮ ಹಾಜರಾತಿಯನ್ನು ನಮೂದಿಸುತ್ತಿದ್ದಾರೆಯೇ ಹೊರತು ಯಾವುದೇ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುತ್ತಿಲ್ಲ. ಕರ್ತವ್ಯ ನಿರ್ವಹಿಸುವಂತೆ ಸೂಚಿಸಿ ಕಛೇರಿಯಿಂದ ನೋಟೀಸ್ ನೀಡಿದಲ್ಲಿ ಸ್ವೀಕರಿಸದೇ ಇರುವ ನಿಮಿತ್ತ, ಇ-ಮೇಲ್ ಮುಖಾಂತರ ನೋಟೀಸ್ ನೀಡಲಾಗಿದೆ. ಅಲ್ಲದೇ, ಮಾನ್ಯ ಉಚ್ಚ

ನ್ಯಾಯಾಲಯದ ಆದೇಶದಂತೆ, ಸದರಿ ವೈದ್ಯರಿಗೆ ಅಮಾನತ್ತಿನ ಅವಧಿಯಲ್ಲಿ ನೀಡಬಹುದಾದ ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗಿದೆ. ಆದಾಗ್ಯೂ ಸಹ, ಸದರಿ ವೈದ್ಯರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಮತ್ತು ಸದಸ್ಯರು, ಆಡಳಿತ ಮಂಡಳಿ ಇವರ ವಿರುದ್ಧ ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಸಂಖ್ಯೆ : 596/2021 ರ ನ್ಯಾಯಾಂಗ ನಿಂದನಾ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಆದ್ಯ ಅವಗಾಹನೆಗೆ ತರುತ್ತಾ, ಈ ಬಗ್ಗೆ ಸರ್ಕಾಗಕ್ಕೆ ಕಡತ ಮಂಡಿಸಿದ್ದು, ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ, ಗ್ರೂಪ್ ಎ ಅಧಿಕಾರಿಯ ಇಲಾಖಾ ವಿಚಾರಣೆ ಕೈಗೊಳ್ಳಬೇಕಾದಲ್ಲಿ ಆಡಳಿತ ಮಂಡಳಿಯ ಅನುಮೋದನೆ ಪಡೆಯಬೇಕಾಗಿದ್ದು, ಸದರಿ ವೈದ್ಯರ ವರ್ತನೆ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳುವ ಬಗ್ಗೆ ಅನುಮೋದನೆ ಕೋರಿ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರು ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸದರಿ ವೈದ್ಯರಿಗೆ ಸಂಬಂಧಿಸಿದ ಕಡತ/ದಾಖಲೆಗಳನ್ನು ಸಂಬಂಧಪಟ್ಟ ಸಂಸ್ಥೆಯ ನಿರ್ದೇಶಕರು ಹಾಗೂ ಸರ್ಕಾರದಿಂದ ಪಡೆದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಇವರು ಕ್ರಮವಹಿಸುವಂತೆ ಸೂಚಿಸಲಾಯಿತು.

**ವಿಷಯ (15) : ಡಾ॥ ಉಮೇಶ.ಎಲ್., ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ನೆಫ್ರೋಲಜಿ ವಿಭಾಗ ಇವರು ವಯೋನಿವೃತ್ತಿ ಹೊಂದಿರುವ ಬಗ್ಗೆ ಹಾಗೂ ಸದರಿ ವೈದ್ಯರು ಗುತ್ತಿಗೆ ಆಧಾರದ ಮೇಲೆ ಸಂಸ್ಥೆಯಲ್ಲಿ ಮನರ್ ನೇಮಕಾತಿ ಆಗಿರುವ ಬಗ್ಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ.**

ಸಂಸ್ಥೆಯ ನೆಫ್ರೋಲಜಿ ವಿಭಾಗದಲ್ಲಿ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ॥ ಉಮೇಶ.ಎಲ್., ಇವರು ದಿನಾಂಕ : 30.04.2021ರಂದು ವಯೋನಿವೃತ್ತಿ ಹೊಂದಿರುತ್ತಾರೆ.

ಸರ್ಕಾರದ ಪತ್ರ ಸಂಖ್ಯೆ : ಎಂಇಡಿ 118 ಎಂಎಸ್ ಎಫ್ 2021 (ಪಿ-1) ಬೆಂಗಳೂರು, ದಿನಾಂಕ : 03.05.2021 ರಲ್ಲಿ ಸದರಿ ವೈದ್ಯರಿಗೆ ಗುತ್ತಿಗೆ ಆಧಾರದ ಮೇಲೆ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ಅಗತ್ಯ ಕ್ರಮ ವಹಿಸುವಂತೆ ನಿರ್ದೇಶಿಸಲಾಗಿದೆ. ತತ್ಸಂಬಂಧ ಸಂಸ್ಥೆಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ(1)/04/2020-21 ದಿನಾಂಕ : 05.05.2021ರಲ್ಲಿ ನೆಫ್ರೋಲಜಿ ವಿಭಾಗದ ಪ್ರಾಧ್ಯಾಪಕರ ಎದುರು ಹುದ್ದೆಗೆ ಸಂಸ್ಥೆಯ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ 02 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ 06 ತಿಂಗಳಿಗೊಮ್ಮೆ ನವೀಕರಿಸುವ ಹಾಗೂ ಇತರೆ ಸಾಮಾನ್ಯ ಷರತ್ತುಗಳಿಗೊಳಪಟ್ಟು ನಿಯಮಾನುಸಾರ ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ ಪ್ರಾಧ್ಯಾಪಕರ ಹುದ್ದೆಗೆ ನೇಮಿಸಿ ಆದೇಶಿಸಲಾಗಿದೆ. ಈ ಸಂಬಂಧ ಸದರಿ ವೈದ್ಯರು ದಿನಾಂಕ : 17.05.2021ರ ಪೂರ್ವಾಹ್ನದಂದು ಪ್ರಾಧ್ಯಾಪಕರ ಎದುರು ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಪ್ರಾಧ್ಯಾಪಕರಾಗಿ ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರದ ಆದೇಶದನ್ವಯ ಮೇಲ್ಕಂಡ ಅಂಶಗಳನ್ನು ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಗೆ ಮಂಡಿಸಲಾಗಿ, ಅನುಮೋದಿಸಿತು.

**ವಿಷಯ (16) : ಡಾ॥ ರಾಜೇಶ್ವರಿ ಸಹಾಯಕ ಪ್ರಾಧ್ಯಾಪಕರು ಪೀಡಿಯಾಟ್ರಿಕ್ ವಿಭಾಗ, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಇವರನ್ನು ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ಪೀಡಿಯಾಟ್ರಿಕ್ ನೆಫ್ರೋಲಜಿ ಹುದ್ದೆಯನ್ನು ಸೃಜಿಸಿ ವರ್ಗಾವಣೆ ಮಾಡಿಕೊಳ್ಳುವ ಕುರಿತು.**

ಸರ್ಕಾರದ ಪತ್ರ ಸಂಖ್ಯೆ : ಎಂಇಡಿ/331/ಎಂಎಸ್‌ಎಫ್/2021 ದಿನಾಂಕ : 17.09.2021ರಲ್ಲಿ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ॥ ರಾಜೇಶ್ವರಿ, ಸಹಾಯಕ ಪ್ರಾಧ್ಯಾಪಕರು ಪೀಡಿಯಾಟ್ರಿಕ್ ವಿಭಾಗ, ಇವರನ್ನು ಡಿ.ಎಂ. ಪೀಡಿಯಾಟ್ರಿಕ್ ನೆಫ್ರೋಲಜಿ ಸೂಪರ್ ಸ್ಪೆಷಾಲಿಟಿ ಕೋರ್ಸ್‌ನ್ನು ಪೂರೈಸಿರುವುದರಿಂದ ಸದರಿಯವರಿಗೆ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಸೇವೆ ಸಲ್ಲಿಸಲು ಸೌಲಭ್ಯ ಇಲ್ಲದ ಕಾರಣ ಹಾಗೂ ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ಎಲ್ಲಾ ರೀತಿಯ ಸೌಲಭ್ಯ ಇರುವುದರಿಂದ ಪೀಡಿಯಾಟ್ರಿಕ್ ನೆಫ್ರೋಲಜಿ ಹುದ್ದೆಯನ್ನು ಸೃಜಿಸಿ ವರ್ಗಾವಣೆ ಮಾಡುವ ಬಗ್ಗೆ, ಹುದ್ದೆ ಮಂಜೂರಾತಿಗಾಗಿ ಆರ್ಥಿಕ ಇಲಾಖೆಯ ಸಹಮತಿ ಅವಶ್ಯಕವಾಗಿರುವುದರಿಂದ, ವಿಷಯಕ್ಕೆ ಸಂಬಂಧಿಸಿದ ದಾಖಲೆ/ಅಭಿಪ್ರಾಯದೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಿಸಲಾಗಿತ್ತು.

ತತ್ಸಂಬಂಧ ಸಂಸ್ಥೆಯಿಂದ ದಿನಾಂಕ : 27.09.2021ರಂದು ಈ ಕೆಳಕಂಡಂತೆ ಅಭಿಪ್ರಾಯ ನೀಡಲಾಗಿದೆ :

ಸಂಸ್ಥೆಯಲ್ಲಿ ಪೀಡಿಯಾಟ್ರಿಕ್ ನೆಫ್ರೋಲಜಿ ಹುದ್ದೆ ಸೃಜನೆಯಾಗಿರುವುದಿಲ್ಲ ಹಾಗೂ ಪ್ರಸ್ತುತ ಸಂಸ್ಥೆಗೆ ಬರುವ ಪೀಡಿಯಾಟ್ರಿಕ್ ವಿಭಾಗದ ರೋಗಿಗಳ ಚಿಕಿತ್ಸೆಯನ್ನು ನೆಫ್ರೋಲಜಿ ವಿಭಾಗದವರೇ ನೀಡುತ್ತಿದ್ದಾರೆ. ಪೀಡಿಯಾಟ್ರಿಕ್ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಪ್ರತ್ಯೇಕ ಪಿಡಿಯಾಟ್ರಿಕ್ ನೆಫ್ರೋಲಜಿ ವಿಭಾಗದ ಅವಶ್ಯಕತೆ ಇದ್ದು, ಸಂಸ್ಥೆಗೆ ಸದರಿ ಹುದ್ದೆಯ ಸೃಜನೆಯ ಅವಶ್ಯಕತೆ ಇದೆ. ಸಂಸ್ಥೆಯ ಬೈಲಾ ನಿಯಮಗಳನುಸಾರ ಹುದ್ದೆ ಸೃಜನೆಗೆ ನೇರವಾಗಿ ಸರ್ಕಾರ/ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಬರುವುದಿಲ್ಲ, ಸಂಸ್ಥೆಯ ಆರ್ಥಿಕ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ತದನಂತರ ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ ಎಂಬ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪ್ರಸ್ತಾವನೆಯನ್ನು ಮುಂದಿನ ಆರ್ಥಿಕ ಸಮಿತಿಯಲ್ಲಿ ಮಂಡಿಸಲು ಆಡಳಿಯ ಮಂಡಳಿಯ ಅನುಮೋದನೆ ಕೋರಲಾಗಿ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರು ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಂಸ್ಥೆಯು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿರುವುದರಿಂದ, ಇತರೆ ವಿಷಯಗಳಂತೆ ಪೀಡಿಯಾಟ್ರಿಕ್ ನೆಫ್ರೋಲಜಿ ವಿಷಯವು ಉಪ ವಿಶೇಷತೆಯೆಂದು (Sub-speciality) ಕಂಡು ಬಂದಲ್ಲಿ ಪೀಡಿಯಾಟ್ರಿಕ್ ನೆಫ್ರೋಲಜಿ ವಿಷಯವನ್ನು ಉಪ ವಿಶೇಷತೆಯನ್ನಾಗಿ ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆ ಪಡೆಯುವಂತೆ ಸೂಚಿಸಲಾಯಿತು.

**ವಿಷಯ (17) : ನೆಫ್ರೋ-ಯುರಾಲಜಿ ಸಂಸ್ಥೆಯ ಮೈಸೂರು ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ॥ ನರೇಂದ್ರ.ಜೆ.ಬಿ. ಸಹಾಯಕ ಪ್ರಾಧ್ಯಾಪಕರು, ಯುರಾಲಜಿ ವಿಭಾಗ ಇವರನ್ನು ಬೆಂಗಳೂರು ನೆಫ್ರೋ-ಯುರಾಲಜಿ ಸಂಸ್ಥೆಗೆ ಖಾಯಂ ಆಗಿ ವರ್ಗಾವಣೆ ಮಾಡಿರುವ ಬಗ್ಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ.**

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿ ಸರ್ಜರಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ॥ ನರೇಂದ್ರ.ಜೆ.ಬಿ., ಇವರನ್ನು ಸರ್ಕಾರದ ಆದೇಶ ಸಂಖ್ಯೆ : ಆಕುಕ 133 ಎಂ ಎಸ್ ಎಫ್ 2017, ದಿನಾಂಕ : 06.03.2018ರ ಆದೇಶದನ್ವಯ ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು

ಇಲ್ಲಿಗೆ ಲೀನ್ ಸಮೇತ ವರ್ಗಾಯಿಸಿ ಮೈಸೂರಿನ ನೆಫ್ರೋ–ಯುರಾಲಜಿ ಘಟಕದಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸಲು ಆದೇಶವಾಗಿರುತ್ತದೆ. ಸದರಿ ಆದೇಶಾನುಸಾರ ಡಾ॥ ನರೇಂದ್ರ.ಜೆ.ಬಿ., ಇವರು ದಿನಾಂಕ : 09.03.2018ರಿಂದ ಮೈಸೂರು ಘಟಕದ ನೆಫ್ರೋಲಜಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರ ಪತ್ರ ಸಂಖ್ಯೆ : ಎಂಇಡಿ/85/ಎಂಎಸ್ ಎಫ್/2019 ದಿನಾಂಕ : 27.07.2020ರಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಟಿಪ್ಪಣಿ ಸಂಖ್ಯೆ : ಗ್ರಾಅಪಂರಾ/355/2020 ದಿನಾಂಕ : 13.03.2020 ಅನ್ನು ಉಲ್ಲೇಖಿಸಿ ಡಾ॥ ನರೇಂದ್ರ.ಜೆ.ಬಿ., ಸಹಾಯಕ ಪ್ರಾಧ್ಯಾಪಕರು, ನೆಫ್ರೋ–ಯುರಾಲಜಿ ಸಂಸ್ಥೆ, ಮೈಸೂರು ವಿಭಾಗ, ಮೈಸೂರು ಇವರನ್ನು ಈ ಹಿಂದೆ ಬೆಂಗಳೂರು ನೆಫ್ರೋ–ಯುರಾಲಜಿ ಸಂಸ್ಥೆಗೆ ಖಾಯಂ ಆಗಿ ವರ್ಗಾಯಿಸಿರುವ ಸರ್ಕಾರದ ಆದೇಶ ಸಂಖ್ಯೆ : 133 ಎಂಎಸ್ಎಫ್ 2017, ದಿನಾಂಕ : 06.03.2018 ಅನ್ನು ಆಡಳಿತ ಪರಿಷತ್ ನ ಘಟನೋತ್ತರ ಅನುಮೋದನೆಗೆ ಹಾಗೂ ಸರ್ಕಾರದ ಆದೇಶ ದಿನಾಂಕ : 07.08.2019ರಲ್ಲಿನ ಷರತ್ತಿನ ಅನ್ವಯ ಅವರ ಜ್ಯೇಷ್ಠತೆಯನ್ನು ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ನಿಗದಿಪಡಿಸಲು ಮುಂಬರುವ ಆಡಳಿತ ಪರಿಷತ್ ನ ಮುಂದೆ ಮಂಡಿಸುವಂತೆ ಸೂಚಿಸಿರುವ ಮೇರೆಗೆ, ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು ಆಡಳಿತ ಮಂಡಳಿ ಇವರು ಕೂಲಂಕಷವಾಗಿ ಚರ್ಚಿಸಿ, ಈ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಇವರಿಗೆ ಪರಿಶೀಲಿಸಿ, ನಿರ್ಣಯಿಸುವಂತೆ ಸೂಚಿಸಲಾಯಿತು.

**ವಿಷಯ (18) : ಡಾ॥ ಹಿಮಮಣಿ.ಎಸ್., (ನಿಯೋಜನೆ), ಪ್ರಾಧ್ಯಾಪಕರು, ನೆಫ್ರೋಲಜಿ ವಿಭಾಗ, ನೆಫ್ರೋ–ಯುರಾಲಜಿ ಸಂಸ್ಥೆ, ಮೈಸೂರು ಘಟಕ, ಮೈಸೂರು ಇವರನ್ನು ನೆಫ್ರೋ–ಯುರಾಲಜಿ ಘಟಕಕ್ಕೆ ವರ್ಗಾವಣೆ ಮಾಡುವ ಕುರಿತು.**

ಸರ್ಕಾರದ ಪತ್ರ ಸಂಖ್ಯೆ : ಎಂಇಡಿ/343/ಎಂಎಸ್ಎಫ್/2021 ದಿನಾಂಕ : 18.09.2021ರಲ್ಲಿ ಡಾ॥ ಹಿಮಮಣಿ ಎಸ್., (ನಿಯೋಜನೆ) ಪ್ರಾಧ್ಯಾಪಕರು, ನೆಫ್ರೋಲಜಿ ವಿಭಾಗ, ಮೈಸೂರು ಘಟಕ ಇವರನ್ನು ನೆಫ್ರೋ–ಯುರಾಲಜಿ ಘಟಕಕ್ಕೆ ಹುದ್ದೆ ಸಮೇತ ವರ್ಗಾವಣೆ ಮಾಡುವ ಬಗ್ಗೆ ಸ್ಪಷ್ಟ ವರದಿ / ಅಭಿಪ್ರಾಯ ಹಾಗೂ ನಿರಾಕ್ಷೇಪಣಾ ಪತ್ರ ನೀಡುವಂತೆ ನಿರ್ದೇಶಿಸಿದನ್ವಯ, ಸಂಸ್ಥೆಯಿಂದ ದಿನಾಂಕ : 07.10.2021ರಂದು ಈ ಕೆಳಕಂಡಂತೆ ವರದಿ ನೀಡಲಾಗಿದೆ:

ಡಾ॥ ಹಿಮಮಣಿ, ಪ್ರಾಧ್ಯಾಪಕರು (ನಿಯೋಜನರ) ಇವರು ಮೂಲತಃ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವೈದ್ಯರಾಗಿದ್ದು, ದಿನಾಂಕ:22.03.2017 ರಿಂದ 11.09.2019 ರವರೆಗೆ ಸಹ ಪ್ರಾಧ್ಯಾಪಕರ ಹುದ್ದೆಯಲ್ಲಿ ಹಾಗೂ ದಿನಾಂಕ: 08.11.2019 ರಿಂದ ಇಲ್ಲಿಯವರೆಗೆ ಪ್ರಾಧ್ಯಾಪಕರ ಹುದ್ದೆಯಲ್ಲಿ ನಿಯೋಜನೆ ಮೇರೆಗೆ ನೆಫ್ರೋ–ಯುರಾಲಜಿ ಘಟಕ, ಮೈಸೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**ಸಂಸ್ಥೆಯ ಬೈಲಾ ವೃಂದ ನೇಮಕಾತಿ ನಿಯಮ 12(2)ರ ಪ್ರಕಾರ, ಹುದ್ದೆಯ ವಿಲೀನಾತಿ / ವರ್ಗಾವಣೆಗೆ ಈ ಕೆಳಗಿನಂತೆ ಅವಕಾಶವಿರುತ್ತದೆ.**

- It shall be lawful for the Institute to obtain the services of any Government servant on deputation or to absorb him in its services:
- Provided that absorption into the service of the Institute shall be only with the approval of

screening committee to be constituted by the Governing council for that purpose.

- Provided further that the terms and conditions on which any Government servant may be so absorbed shall in no way be less advantageous than the terms and conditions applicable to him, immediately before the date of this absorption in the Government service.

ಸರ್ಕಾರವು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಕಾಲೇಜುಗಳಲ್ಲಿನ ಬೋಧಕ /ಬೋಧಕೇತ್ತರ ಸಿಬ್ಬಂದಿಗಳ ವರ್ಗಾವಣೆ ಕುರಿತು ಕಾಲೇಜುಗಳನ್ನು ಎ,ಬಿ,ಸಿ,ಡಿ ಗುಂಪುಗಳಾಗಿ ವಿಂಗಡಿಸಿ ಮಾರ್ಗಸೂಚಿಗಳನ್ನು ರೂಪಿಸಿ ಸಂಖ್ಯೆ: ಎಂಇಡಿ 95 ಆರ್‌ಜಿಯು 2019, ಬೆಂಗಳೂರು ದಿನಾಂಕ: 31.12.2019ರಂತೆ ಸರ್ಕಾರಿ ಆದೇಶ ಹೊರಡಿಸಿದ್ದು, ಅದರಲ್ಲಿ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿರುತ್ತದೆ.

- ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಕಾಲೇಜುಗಳಲ್ಲಿನ ಬೋಧಕ /ಬೋಧಕೇತರ ಸಿಬ್ಬಂದಿಗಳ ವರ್ಗಾವಣೆ ಕುರಿತು ಕಾಲೇಜುಗಳನ್ನು ಎ,ಬಿ,ಸಿ,ಡಿ ಗುಂಪುಗಳಾಗಿ ವಿಂಗಡಿಸಿರುತ್ತದೆ.
- ಸದರಿ ಆದೇಶದಲ್ಲಿ ವಿಂಗಡಿಸಿರುವ ಗುಂಪುಗಳಲ್ಲಿ ಅಂತರ್ ಗುಂಪು ಅಂದರೆ, ಒಂದು ಗುಂಪಿನ ಸಂಸ್ಥೆಗಳಿಂದ ಇನ್ನೊಂದು ಗುಂಪಿನ ಸಂಸ್ಥೆಗಳಿಗೆ ಯಾವುದೇ ವರ್ಗಾವಣೆ ಮತ್ತು ನಿಯೋಜನೆಗೆ ಅವಕಾಶವಿರುವುದಿಲ್ಲ. ಆದರೆ ಸಿ ಗುಂಪಿನ ಸಂಸ್ಥೆಗಳಿಂದ ಡಿ ಗುಂಪಿನ ಸಂಸ್ಥೆಗಳಿಗೆ ಮಾತ್ರ ಮಿತಿಗೊಳಪಟ್ಟು ವೈದ್ಯರ ವರ್ಗಾವಣೆಗೆ ಅವಕಾಶ ಇದ್ದು, ಡಿ ಗುಂಪಿನ ಸಂಸ್ಥೆಗಳಿಂದ ಸಿ ಗುಂಪಿನ ಸಂಸ್ಥೆಗಳಿಗೆ ಯಾವುದೇ ವರ್ಗಾವಣೆಯನ್ನು ಪರಿಗಣಿಸಲಾಗುವುದಿಲ್ಲ. ಪತಿ–ಪತ್ನಿ ವರ್ಗಾವಣೆ ಪ್ರಸ್ತಾವನೆಗಳಿಗೆ ಇದರಿಂದ ವಿನಾಯಿತಿ ನೀಡಲಾಗಿದೆ.
- ಎ ಗುಂಪಿನಲ್ಲಿರುವ ಸಂಸ್ಥೆಗಳು ಒಂದೊಂದು ವೈದ್ಯಕೀಯ ವಿಭಾಗದಲ್ಲಿ ವೈಶಿಷ್ಟ್ಯತೆಯನ್ನು ಹೊಂದಿರುವುದರಿಂದ, ಈ ಗುಂಪಿನಲ್ಲಿ ಅಂತರ್ ಸಂಸ್ಥೆಯ ವರ್ಗಾವಣೆಗೆ ಯಾವುದೇ ಅವಕಾಶವಿರುವುದಿಲ್ಲ.
- ಎ ಗುಂಪು ಹೊರತುಪಡಿಸಿ ಪ್ರತಿ ಗುಂಪಿನಲ್ಲಿನ ಸಂಸ್ಥೆಗಳ ಮಧ್ಯೆ ವೈದ್ಯರುಗಳ ವರ್ಗಾವಣೆಗಳಿಗೆ ಮಾತ್ರ ಅವಕಾಶವಿರುತ್ತದೆ. ಇದರ ಹೊರತು ಬೇರೆ ಗುಂಪಿನ ಸಂಸ್ಥೆಗಳಿಗೆ ವರ್ಗಾವಣೆಗೆ ಅವಕಾಶ ಇರುವುದಿಲ್ಲ.
- ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಯಾವುದಾದರು ಹುದ್ದೆಗಳಿಗೆ 02 ವರ್ಷದೊಳಗೆ ಪದೋನ್ನತಿಗೆ ಅರ್ಹರಿರುವ ವೈದ್ಯರುಗಳು ಸಂಸ್ಥೆಗಳಲ್ಲಿದ್ದಲ್ಲಿ ಅಂತಹ ಹುದ್ದೆಗಳಿಗೆ ಸಂಸ್ಥೆಯ ಒಳಬರುವ ಯಾವುದೇ ವರ್ಗಾವಣೆ ಪ್ರಸ್ತಾವನೆಗಳನ್ನು ಪರಿಗಣಿಸುವಂತಿಲ್ಲ.
- ವೈದ್ಯರುಗಳು ಯಾವ ವೃಂದದಲ್ಲಿ ನೇಮಕಾತಿ ಹೊಂದಿರುತ್ತಾರೋ ಅದೇ ವೃಂದದಲ್ಲಿ ಮಾತ್ರ ವರ್ಗಾವಣೆಗೆ ಅರ್ಹರಿರುತ್ತಾರೆ. ಪದೋನ್ನತಿ ಹೊಂದಿದ ವೃಂದಗಳಲ್ಲಿ ವರ್ಗಾವಣೆಗೆ ಅವಕಾಶವಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಾಧ್ಯಾಪಕರ ಹುದ್ದೆಯ ಯಥಾರೀತಿ ವರ್ಗಾವಣೆಗೆ ಅವಕಾಶವಿಲ್ಲದಿರುವುದರಿಂದ ಸದರಿ ವಿಷಯವನ್ನು ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಮಂಡಿಸಿ, ನಿರಾಕ್ಷೇಪಣಾ ಪತ್ರವನ್ನು ನೀಡುವ ಬಗ್ಗೆ ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ ಕ್ರಮಕೈಗೊಳ್ಳಲಾಗುವುದು ಎಂಬ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ ಸಭೆಯ ಗಮನಕ್ಕೆ ತರುತ್ತಾ, ಸೂಕ್ತ ಆದೇಶ ಕೋರಿ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರಿಂದ ಮೇಲ್ಕಂಡ ಅಂಶಗಳ ಬಗ್ಗೆ ವಿವರಣೆ ಪಡೆದು ಕೂಲಂಕಷವಾಗಿ ಚರ್ಚಿಸಿ, ಸಂಸ್ಥೆಯ ಬೈಲಾ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕ್ರಮವಹಿಸುವಂತೆ ಸೂಚಿಸಿ, ಸರ್ಕಾರದ ಆದೇಶ ಸಂಖ್ಯೆ : ಆಕುಕ 293 ಎಂಎಸ್ ಎಫ್ 2016, ಬೆಂಗಳೂರು ದಿನಾಂಕ : 27.01.2018ರಲ್ಲಿ ನೆಫ್ರೋ–ಯುರಾಲಜಿ ಸಂಸ್ಥೆಯ ಮೈಸೂರು ಘಟಕದ ಹುದ್ದೆಗಳನ್ನು ಸೃಜಿಸಿ ಆದೇಶಿಸಿರುವಂತೆ, ಡಾ॥ ಹಿಮಮಣಿ ಎಸ್., ಪ್ರಾಧ್ಯಾಪಕರು, ನೆಫ್ರೋಲಜಿ ವಿಭಾಗ, ಮೈಸೂರು ಘಟಕ ಇವರ ಹುದ್ದೆಯನ್ನು ನಿಯೋಜನೆ ಮೇಲೆ ಮುಂದುವರೆಸುವಂತೆ ಸೂಚಿಸಲಾಯಿತು.

**ವಿಷಯ (19) : ಶ್ರೀ. ಚವ್ಹಾಣ್ ಸಕಾರಾಮ್ ಗಣು, ಶುಶ್ರೂಷಾಧಿಕಾರಿ ಇವರನ್ನು ಪರಸ್ಪರ ವರ್ಗಾವಣೆ ಮೇರೆಗೆ ಸಂಸ್ಥೆಯಿಂದ ಬಿಡುಗಡೆಗೊಳಿಸಿರುವ ಆದೇಶಕ್ಕೆ ಆಡಳಿತ ಮಂಡಳಿಯು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಶ್ರೀ. ಚವ್ಹಾಣ್ ಸಕಾರಾಮ್ ಗಣು ಇವರು ಸಂಸ್ಥೆಯಲ್ಲಿ ದಿನಾಂಕ : 27.07.2012ರಿಂದ ಶುಶ್ರೂಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರ ಖಾಯಂ ಪೂರ್ವ ಅವಧಿಯು ದಿನಾಂಕ : 26.07.2014 ರಂದು ಪೂರ್ಣಗೊಂಡಿರುತ್ತದೆ. ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಅಶೋಕ್.ಹೆಚ್., ಶುಶ್ರೂಷಕರು ಇವರು ಶ್ರೀ. ಚವ್ಹಾಣ್ ಸಕಾರಾಮ್ ಗಣು ಇವರ ಜಾಗಕ್ಕೆ ಪರಸ್ಪರ ವರ್ಗಾವಣೆ ಹೊಂದಲು ಇಚ್ಛಿಸಿದ್ದು, ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ಕೋರಿ ಮನವಿ ಸಲ್ಲಿಸಿದ್ದು, ಸದರಿಯವರ ಖಾಯಂ ಪೂರ್ವ ಸೇವಾ ಅವಧಿ ಪೂರ್ಣಗೊಂಡಿರುವ ಬಗ್ಗೆ ಹಾಗೂ ಸದರಿಯವರುಗಳ ಸೇವೆಯನ್ನು ಬಿಟ್ಟುಕೊಡುವ ಅಥವಾ ಪಡೆಯುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ವರದಿಯನ್ನು ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ : ಎಂಇಡಿ 32 ಕೆವಿಎಂ 2019 ದಿನಾಂಕ : 15.07.2019ರಲ್ಲಿ ಸೂಚಿಸಿದ್ದ ಮೇರೆಗೆ, ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿ, ದಿನಾಂಕ : 26.12.2019ರ ಆಡಳಿತ ಮಂಡಳಿಯ ಸಭೆಯಲ್ಲಿ ಪರಸ್ಪರ ವರ್ಗಾವಣೆಯನ್ನು ಮಾತ್ರ ಪರಿಗಣಿಸುವಂತೆ ನಿರ್ಣಯಿಸಲಾಗಿ, ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಆಕುಕ 32 ಕೆವಿಎಂ 2019 ದಿನಾಂಕ : 10.12.2019ರನ್ವಯ ಸಂಸ್ಥೆಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ನೆಯುಸಂ/ಸಿಬ್ಬಂದಿ (2)/05/2019–20 ದಿನಾಂಕ : 23.12.2019ರಂತೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಸದರಿ ಶುಶ್ರೂಷಾಧಿಕಾರಿಯನ್ನು ಈ ಸಂಸ್ಥೆಯಿಂದ ಬಿಡುಗಡೆಗೊಳಿಸಿ ಆದೇಶಿಸಿದೆ. ಸದರಿ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯನ್ನು ಕೋರಲಾಗಿ, ಅನುಮೋದಿಸಿತು.

**ವಿಷಯ (20) : ಶ್ರೀ. ಮಾರುತೆಪ್ಪ, ಶುಶ್ರೂಷಾಧಿಕಾರಿ, ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು ಹಾಗೂ ಶ್ರೀಮತಿ. ಶೀಲಾಸಿಂಗ್, ಶುಶ್ರೂಷಾಧಿಕಾರಿ, ಓಪೆಕ್ ಆಸ್ಪತ್ರೆ, ರಾಯಚೂರು ಇವರುಗಳ ಪರಸ್ಪರ ವರ್ಗಾವಣೆ ಸಂಬಂಧ ಆಡಳಿತ ಮಂಡಳಿಯು ಅನುಮೋದನೆ ನೀಡುವ ಬಗ್ಗೆ.**

ಶ್ರೀ. ಮಾರುತೆಪ್ಪ, ಶುಶ್ರೂಷಾಧಿಕಾರಿ ಇವರು ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ದಿನಾಂಕ : 07.11.2017 ರಿಂದ ಶುಶ್ರೂಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರ ಖಾಯಂ

ಪೂರ್ವ ಅವಧಿಯು ದಿನಾಂಕ : 10.01.2020..ರಂದು ಪೂರ್ಣಗೊಂಡಿದ್ದು, ಇವರು ಕೌಟುಂಬಿಕ ತೊಂದರೆಗಳ ಹಿನ್ನೆಲೆಯಲ್ಲಿ ಓಪೆಕ್ ಆಸ್ಪತ್ರೆ, ರಾಯಚೂರು ಇಲ್ಲಿ ಶುಶ್ರೂಷಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ. ಶೀಲಾಸಿಂಗ್ ಇವರ ಜಾಗಕ್ಕೆ ಪರಸ್ಪರ ವರ್ಗಾವಣೆ ಹೊಂದಲು ಇಚ್ಛಿಸಿರುವುದಾಗಿ ಸಂಸ್ಥೆಗೆ ದಿನಾಂಕ : 24.02.2020ರಂದು ಮನವಿ ಸಲ್ಲಿಸಿರುತ್ತಾರೆ. ದಿನಾಂಕ : 26.12.2019 ರ ಸಂಸ್ಥೆಯ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ, **ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಹುದ್ದೆಗಳ ವರ್ಗಾವಣೆಯಲ್ಲಿ ಸಂಬಂಧಪಟ್ಟ ನೌಕರರ ಸ್ಪೆಷಾಲಿಟಿ ವಿದ್ಯಾರ್ಹತೆ / ತರಬೇತಿಯ ಆಧಾರದ ಮೇಲೆ ಪರಸ್ಪರ ವರ್ಗಾವಣೆಯನ್ನು ಮಾತ್ರ ಪರಿಗಣಿಸುವಂತೆ ಹಾಗೂ ವಿಷಯವನ್ನು ಎರಡೂ ಸಂಸ್ಥೆಗಳ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಲಾಗಿದೆ.** ತತ್ಸಂಬಂಧ ಶ್ರೀ. ಮಾರುತೆಪ್ಪ, ಶುಶ್ರೂಷಾಧಿಕಾರಿ ಇವರ ಸ್ಥಳಕ್ಕೆ ಪರಸ್ಪರ ವರ್ಗಾವಣೆ ಹೊಂದಲು ಬಯಸಿರುವ ಶ್ರೀಮತಿ. ಶೀಲಾಸಿಂಗ್ ಇವರು ನೆಫ್ರೋಲಜಿ / ಯುರಾಲಜಿ ವಿಷಯದ ಚಿಕಿತ್ಸೆಗೆ ಸಂಬಂಧಿಸಿದಂತೆ ಅನುಭವ ಹೊಂದಿರುವ ಬಗ್ಗೆ ಅನುಭವ ಪ್ರಮಾಣ ಪತ್ರವನ್ನು ನೀಡಿದಲ್ಲಿ ಪರಿಶೀಲಿಸಿ ಮುಂದಿನ ಕ್ರಮ ವಹಿಸುವ ಬಗ್ಗೆ ಪತ್ರ ಬರೆಯಲಾಗಿತ್ತು. ಈ ಸಂಬಂಧ ಸರ್ಕಾರದ ಪತ್ರ ಸಂಖ್ಯೆ : ಎಂಇಡಿ 69 ಎಂಎಂಇ 2020 ದಿನಾಂಕ : 11.11.2020ರಲ್ಲಿ ಶ್ರೀಮತಿ. ಶೀಲಾಸಿಂಗ್ ಇವರು ನೆಫ್ರೋಲಜಿ / ಯುರಾಲಜಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಓಪೆಕ್ ಆಸ್ಪತ್ರೆ, ರಾಯಚೂರು ಇವರು ನೀಡಿರುವ ಅನುಭವ ಪ್ರಮಾಣ ಪತ್ರವನ್ನು ಸಲ್ಲಿಸಿದ ಮೇರೆಗೆ, ಸಂಸ್ಥೆಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಸಿಬ್ಬಂದಿ (2)/103/2014–15 ದಿನಾಂಕ : 22.09.2021 ರನ್ವಯ ಶ್ರೀ. ಮಾರುತೆಪ್ಪ, ಶುಶ್ರೂಷಾಧಿಕಾರಿ, ನೆ.ಯು.ಸಂ., ಇವರನ್ನು ಓಪೆಕ್ ಆಸ್ಪತ್ರೆ, ರಾಯಚೂರು ಇಲ್ಲಿಗೆ ಪರಸ್ಪರ ವರ್ಗಾವಣೆ ನಿಯಮದಡಿಯಲ್ಲಿ ವರ್ಗಾವಣೆ ಮಾಡುವ ಸಂಬಂಧ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯ ಷರತ್ತಿಗೊಳಪಟ್ಟು ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ ಘಟನೋತ್ತರ ಆದೇಶ ಕೋರಲಾಗಿ, ಅನುಮೋದಿಸಿತು.

**ವಿಷಯ (21) : ಶ್ರೀ. ಶರತ್ ಕುಮಾರ್, ಶುಶ್ರೂಷಾಧಿಕಾರಿ, ಇವರನ್ನು ಪತಿ–ಪತ್ನಿ ಪ್ರಕರಣದಡಿ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇಲ್ಲಿಗೆ ವರ್ಗಾವಣೆ ಮಾಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ.**

ಶ್ರೀ. ಶರತ್ ಕುಮಾರ್ ಇವರು ಸಂಸ್ಥೆಯಲ್ಲಿ ದಿನಾಂಕ : 28.05.2012 ರಂದು ಶುಶ್ರೂಷಾಧಿಕಾರಿ ಹುದ್ದೆಗೆ ವರದಿ ಮಾಡಿಕೊಂಡಿದ್ದು, ಇವರ ಖಾಯಂ ಪೂರ್ವ ಸೇವಾ ಅವಧಿಯು ದಿನಾಂಕ : 27.05.2014 ರಂದು ಪೂರ್ಣಗೊಂಡಿರುತ್ತದೆ. ಸದರಿ ನೌಕರರ ಪತ್ನಿಯು ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ ಇಲ್ಲಿ ಶುಶ್ರೂಷಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ, ತಮ್ಮನ್ನು ಪತಿ–ಪತ್ನಿ ಪ್ರಕರಣದಡಿ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇಲ್ಲಿಗೆ ವರ್ಗಾವಣೆ ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ ಮೇರೆಗೆ, ಸರ್ಕಾರದ ಪತ್ರ ಸಂಖ್ಯೆ : ಎಂಇಡಿ 365 ಎಂಪಿಎಸ್ 2021 ದಿನಾಂಕ : 25.06.2021ರಲ್ಲಿ ಸದರಿ ನೌಕರರನ್ನು ವರ್ಗಾವಣೆ ಮಾಡುವ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ಕೋರಿರುತ್ತಾರೆ.

ದಿನಾಂಕ : 26.12.2019 ರ ಸಂಸ್ಥೆಯ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ, **ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಹುದ್ದೆಗಳ ವರ್ಗಾವಣೆಯಲ್ಲಿ ಸಂಬಂಧಪಟ್ಟ ನೌಕರರ ಸ್ಪೆಷಾಲಿಟಿ ವಿದ್ಯಾರ್ಹತೆ / ತರಬೇತಿಯ ಆಧಾರದ ಮೇಲೆ ಪರಸ್ಪರ ವರ್ಗಾವಣೆಯನ್ನು ಮಾತ್ರ ಪರಿಗಣಿಸುವಂತೆ ಹಾಗೂ ವಿಷಯವನ್ನು ಎರಡೂ ಸಂಸ್ಥೆಗಳ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಲಾಗಿದೆ.**

ಮಾನ್ಯ ಘನ ಸರ್ಕಾರವು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸ್ವಾಯತ್ತ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕ / ಬೋಧಕೇತರ ಸಿಬ್ಬಂದಿಗಳ ವರ್ಗಾವಣೆ ಕುರಿತು ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ ಆದೇಶವನ್ನು ಹೊರಡಿಸಿದ್ದು, ಕರ್ನಾಟಕ ಸರ್ಕಾರದ ನಡವಳಿ ಆದೇಶ ಸಂಖ್ಯೆ : ಎಂಇಡಿ 95 ಆರ್‌ಜೆಯು 2019, ಬೆಂಗಳೂರು, ದಿನಾಂಕ : 31.12.2019 ರಲ್ಲಿ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಿ ಆದೇಶಿಸಿದೆ :

**ಬೋಧಕೇತರ ಸಿಬ್ಬಂದಿಗಳಿಗೆ ಅನ್ವಯಿಸುವ ಮಾರ್ಗಸೂಚಿಗಳು :**

1. ಬೋಧಕೇತರ ಸಿಬ್ಬಂದಿಗಳ **ಪರಸ್ಪರ ಮತ್ತು ಪತಿ–ಪತ್ನಿ ಪ್ರಕರಣಗಳಲ್ಲಿ ಹಾಗೂ ಅತ್ಯಂತ ವಿಶೇಷ ಪ್ರಕರಣಗಳಲ್ಲಿ ಮಾತ್ರ ಇಲಾಖೆಯ ಅಧೀನ ಸಂಸ್ಥೆಗಳ ಮಧ್ಯೆ ವರ್ಗಾವಣೆಗೆ ಅವಕಾಶವಿರತಕ್ಕದ್ದು.**
2. ಬೋಧಕೇತರ ಸಿಬ್ಬಂದಿಗಳ **ಖಾಯಂ ಪೂರ್ವ ಸೇವಾವಧಿ ಯಶಸ್ವಿಯಾಗಿ ಪೂರೈಸಿದ್ದಲ್ಲಿ** ಮಾತ್ರ ವರ್ಗಾವಣೆಗೆ ಅರ್ಹರಿರುತ್ತಾರೆ.
3. ಸಂಸ್ಥೆಗಳಲ್ಲಿ ವರ್ಗಾವಣೆ ಪ್ರಸ್ತಾವನೆಗಳಿಗೆ **ನಿರಾಕ್ಷೇಪಣಾ (NOC) ಪತ್ರಗಳನ್ನು** ನೀಡುವ **ಅಧಿಕಾರ ಆಡಳಿತ ಪರಿಷತ್ ಗೆ ಮಾತ್ರ ಇದ್ದು,** ಎಂ.ಸಿ.ಐ ನಿಯಮಾವಳಿಗಳ ಅನುಸಾರ ಬೋಧಕ / ಬೋಧಕೇತರ **ಸಿಬ್ಬಂದಿಯ ಅನುಪಾತವನ್ನು ಗಮನದಲ್ಲಿರಿಸಿಕೊಂಡು, ಕಡ್ಡಾಯವಾಗಿ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ, ಪರಿಗಣಿಸಿದ ಪ್ರಕರಣಗಳಲ್ಲಿ ಮಾತ್ರ ಏಕಕಡತದಲ್ಲಿ ಆಡಳಿತ ಪರಿಷತ್ತಿನ ಅಧ್ಯಕ್ಷರು / ನೇಮಕಾತಿ ಪ್ರಾಧಿಕಾರದ ಅನುಮೋದನೆ ಪಡೆದ ನಂತರವಷ್ಟೇ ಸ್ವಾಯತ್ತ ಸಂಸ್ಥೆಯ ನಿರ್ದೇಶಕರುಗಳು ನಿರಾಕ್ಷೇಪಣಾ ಪತ್ರಗಳನ್ನು ನೀಡುವುದು. ಉಭಯ ಸಂಸ್ಥೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದಿದ್ದಲ್ಲಿ ಮಾತ್ರ ವರ್ಗಾವಣೆಗೆ ಪರಿಗಣಿಸಲಾಗುವುದು ಎಂಬುದಾಗಿ ಉಲ್ಲೇಖಿಸಿದ್ದು, ತದನಂತರ** ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ : ಎಂಇಡಿ 95 ಆರ್‌ಜೆಯು 2019, ಬೆಂಗಳೂರು, ದಿನಾಂಕ : 10.02.2020 ರಲ್ಲಿ ಈ ಕೆಳಕಂಡಂತೆ ಆದೇಶಿಸಿದೆ :

**"ಸಂಸ್ಥೆಗಳಲ್ಲಿ ವರ್ಗಾವಣೆ ಪ್ರಸ್ತಾವನೆಗಳಿಗೆ ನಿರಾಕ್ಷೇಪಣಾ ಪತ್ರಗಳನ್ನು ನೀಡುವಾಗ ಅಧಿಕಾರ ಆಡಳಿತ ಪರಿಷತ್ ಗೆ ಮಾತ್ರ ಇದ್ದು, ಎಂ.ಸಿ.ಐ ನಿಯಮಾವಳಿಗಳ ಅನುಸಾರ ಬೋಧಕೇತರ ಸಿಬ್ಬಂದಿಯ ಅನುಪಾತವನ್ನು ಗಮನದಲ್ಲಿರಿಸಿಕೊಂಡು ಸ್ವಾಯತ್ತ ಸಂಸ್ಥೆಯ ನಿರ್ದೇಶಕರುಗಳು ಆಡಳಿತ ಪರಿಷತ್ ನ ಘಟನೋತ್ತರ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ನಿರಾಕ್ಷೇಪಣಾ ಪತ್ರಗಳನ್ನು ನೀಡುವುದು. ಉಭಯ ಸಂಸ್ಥೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದಿದ್ದಲ್ಲಿ ಮಾತ್ರ ವರ್ಗಾವಣೆಗೆ ಪರಿಗಣಿಸಲಾಗುವುದು" ಎಂಬುದಾಗಿ ಉಲ್ಲೇಖಿತವಾಗಿದೆ.**

ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ತರುತ್ತಾ, ಶ್ರೀ. ಶರತ್ ಕುಮಾರ್, ಶುಶ್ರೂಷಾಧಿಕಾರಿ, ಇವರನ್ನು ಪತಿ–ಪತ್ನಿ ಪ್ರಕರಣದಡಿ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇಲ್ಲಿಗೆ ವರ್ಗಾವಣೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ಅನುಮೋದಿಸಿತು.

**ವಿಷಯ (22) : ಶ್ರೀಮತಿ. ಶಾರದಮ್ಮ.ಟಿ.ಎಸ್., ಶುಶ್ರೂಷಾಧಿಕಾರಿ, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಆಸ್ಪತ್ರೆ, ಬೆಳಗಾವಿ ಇವರು ಲೀನ್ ಸಮೇತ ಪತಿ–ಪತ್ನಿ ಪ್ರಕರಣದಡಿ ಸಂಸ್ಥೆಗೆ ವರ್ಗಾವಣೆಯಾಗಿರುವ ಬಗ್ಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ.**

ಶ್ರೀಮತಿ. ಶಾರದಮ್ಮ.ಟಿ.ಎಸ್., ಶುಶ್ರೂಷಕರು, ಇವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ತಾವು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಆಸ್ಪತ್ರೆ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು,

ತಮ್ಮ ಪರೀಕ್ಷಾರ್ಥ ಸೇವಾ ಅವಧಿಯು ಪೂರ್ಣಗೊಂಡಿರುವುದಾಗಿ ತಿಳಿಸಿ, ತಮ್ಮ ಪತಿ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಸರ್ಕಾರಿ ಪಾಲಿಟೆಕ್ನಿಕ್ ನಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ, ವೈಯಕ್ತಿಕ ಕಾರಣಗಳ ನಿಮಿತ್ತ ನೆಫ್ರೋ–ಯುರಾಲಜಿ ಸಂಸ್ಥೆಗೆ ವರ್ಗಾವಣೆ ಹೊಂದಲು ಬಯಸಿದ್ದು, ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ಕೋರಿರುತ್ತಾರೆ. **ಈ ಸಂಬಂಧ ಸರ್ಕಾರದ ಅಧೀನ ಕಾರ್ಯದರ್ಶಿಗಳು–2, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಎಂಇಡಿ 86 ಎಂಎಂಸಿ 2019 ದಿನಾಂಕ : 27.11.2020ರಲ್ಲಿ ಸದರಿ ಶುಶ್ರೂಷಾಧಿಕಾರಿಯನ್ನು ಪತಿ–ಪತ್ನಿ ಪ್ರಕರಣದಡಿ ಲೀನ್ ಸಮೇತ ಖಾಯಂ ಆಗಿ ವರ್ಗಾವಣೆಗೊಳಿಸಿ, ವಿಷಯವನ್ನು ಎರಡೂ ಸಂಸ್ಥೆಗಳ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯುವಂತೆ ಸೂಚಿಸಲಾಗಿದೆ.** ಶ್ರೀಮತಿ. ಶಾರದಮ್ಮ.ಟಿ.ಎಸ್., ಶುಶ್ರೂಷಾಧಿಕಾರಿ ಇವರು ದಿನಾಂಕ : 08.12.2020ರ ಪೂರ್ವಾಹ್ನದಂದು ಸಂಸ್ಥೆಯಲ್ಲಿ ವರದಿ ಮಾಡಿಕೊಂಡಿದ್ದು, ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತತ್ಸಂಬಂಧ ಸರ್ಕಾರದ ಆದೇಶದ ಮೇರೆಗೆ ವಿಷಯವನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಿದ್ದು, ಪತಿ–ಪತ್ನಿ ಪ್ರಕರಣದಡಿ ಸದರಿ ಶುಶ್ರೂಷಾಧಿಕಾರಿಯವರು ಸಂಸ್ಥೆಗೆ ವರ್ಗಾವಣೆಯಾಗಿರುವ ಆದೇಶಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (23) : ಶ್ರೀ. ಶಿವಣ್ಣ.ಜಿ., ಶುಶ್ರೂಷಾಧಿಕಾರಿ ಇವರನ್ನು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ ಇಲ್ಲಿಗೆ ಶುಶ್ರೂಷಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ನಿಯೋಜಿಸಿರುವ ಆದೇಶಕ್ಕೆ ಸಂಬಂಧಿಸಿದಂತೆ ಕ್ರಮವಹಿಸಿರುವ ಬಗ್ಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ.**

ಶ್ರೀ. ಶಿವಣ್ಣ.ಜಿ. ಇವರು ಸಂಸ್ಥೆಯಲ್ಲಿ ಶುಶ್ರೂಷಾಧಿಕಾರಿಯಾಗಿ ದಿನಾಂಕ : 20.07.2012 ರಂದು ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸಿ, ದಿನಾಂಕ : 19.07.2014 ರಂದು ಖಾಯಂ ಪೂರ್ವ ಸೇವಾ ಅವಧಿಯನ್ನು ಪೂರ್ಣಗೊಳಿಸಿರುತ್ತಾರೆ. ಸದರಿ ನೌಕರರು ತಮ್ಮ ವೈಯಕ್ತಿಕ ಕಾರಣದ ನಿಮಿತ್ತ, ವರ್ಗಾವಣೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿ, ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಎಂಇಡಿ 257 ಎಂಎಸ್ ಎಫ್ 2019 ದಿನಾಂಕ : 19.03.2021ರಲ್ಲಿ ಸದರಿ ನೌಕರರನ್ನು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ ಇಲ್ಲಿ ಖಾಲಿಯಿರುವ ಶುಶ್ರೂಷಕರ ಹುದ್ದೆಗೆ 02 ವರ್ಷದ ಅವಧಿಗೆ ನಿಯೋಜಿಸಿ ಆದೇಶಿಸಲಾಗಿ, ಸರ್ಕಾರದ ಆದೇಶದಂತೆ ದಿನಾಂಕ : 16.04.2021ರ ಪೂರ್ವಾಹ್ನದಂದು ಸದರಿ ನೌಕರರನ್ನು ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯನ್ನು ಕಾಯ್ದಿರಿಸಿ ಸಂಸ್ಥೆಯಿಂದ ಬಿಡುಗಡೆಗೊಳಿಸಲಾಗಿದ್ದ ನಿಮಿತ್ತ, ಸದರಿ ಕ್ರಮಕ್ಕೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ವಿಷಯ (24) : ಶ್ರೀಮತಿ. ಶುಭ.ಸಿ.ಜಮಖಂಡಿ, ಕಿರಿಯ ಸಹಾಯಕಿ/ಡೇಟಾ ಎಂಟ್ರಿ ಆಪರೇಟರ್, ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು ಇವರನ್ನು ವರ್ಗಾವಣೆ ಮೂಲಕ ಗ್ಯಾಸ್ಟ್ರೋ ಎಂಟರಾಲಜಿ ಸಂಸ್ಥೆಗೆ ವಿಲೀನಗೊಳಿಸುವ ಸಂಬಂಧ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಬಗ್ಗೆ ಸೂಕ್ತ ಆದೇಶ ಕೋರಿ ಆಡಳಿತ ಮಂಡಳಿಯಲ್ಲಿ ಮಂಡಿಸಿದೆ.**

ಶ್ರೀಮತಿ. ಶುಭ.ಸಿ.ಜಮಖಂಡಿ ಇವರು ಸಂಸ್ಥೆಯಲ್ಲಿ ದಿನಾಂಕ : 28.05.2010ರಂದು ಕಿರಿಯ ಸಹಾಯಕಿ / ಡೇಟಾ ಎಂಟ್ರಿ ಆಪರೇಟರ್ ಹುದ್ದೆಗೆ ವರದಿ ಮಾಡಿಕೊಂಡಿದ್ದು, ಇವರ ಖಾಯಂ ಪೂರ್ವ ಅವಧಿಯು ದಿನಾಂಕ : 27.05.2012 ರಂದು ಪೂರ್ಣಗೊಂಡಿರುತ್ತದೆ.

ಪ್ರಸ್ತುತ ಅನ್ಯಪರ ಸೇವೆಯ ಮೇಲೆ ಮಾನ್ಯ ಮುಖ್ಯಮಂತ್ರಿಗಳ ಅಪರ ಕಾರ್ಯದರ್ಶಿಗಳ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇವರು 10 ವರ್ಷಗಳ ಸೇವಾವಧಿಯನ್ನು ಪೂರ್ಣಗೊಳಿಸಿದ್ದು, ಮುಂಬಡ್ತಿಯ ಅವಕಾಶಕ್ಕಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಗ್ಯಾಸ್ಟ್ರೋಎಂಟ್ರಾಲಜಿ ಸಂಸ್ಥೆಗೆ ವರ್ಗಾವಣೆಯ ಮೂಲಕ ಶಾಶ್ವತ ವಿಲೀನಾತಿ ಹೊಂದಲು ಉದ್ದೇಶಿಸಿ ಸರ್ಕಾರಕ್ಕೆ ದಿನಾಂಕ : 17.10.2020ರಂದು ಮನವಿ ಸಲ್ಲಿಸಿರುತ್ತಾರೆ. ತತ್ಸಂಬಂಧ ಸದರಿ ನೌಕರರ ಮನವಿಯನ್ನು ಪರಿಶೀಲಿಸಿ, ನಿರಾಕ್ಷೇಪಣಾ ಪತ್ರ ಮತ್ತು ಸ್ಪಷ್ಟ ಅಭಿಪ್ರಾಯವನ್ನೊಳಗೊಂಡ ವರದಿಯನ್ನು ಸಲ್ಲಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರ ಪತ್ರ ಸಂಖ್ಯೆ : ಎಂಇಡಿ/387/ಎಂಎಸ್‌ಎಫ್/2020 ದಿನಾಂಕ : 04.01.2021 ರಲ್ಲಿ ಸೂಚಿಸಲಾಗಿದೆ.

ದಿನಾಂಕ : 26.12.2019 ರ ಸಂಸ್ಥೆಯ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ, **ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಹುದ್ದೆಗಳ ವರ್ಗಾವಣೆಯಲ್ಲಿ ಸಂಬಂಧಪಟ್ಟ ನೌಕರರ ಸ್ಪೆಷಾಲಿಟಿ ವಿದ್ಯಾರ್ಹತೆ / ತರಬೇತಿಯ ಆಧಾರದ ಮೇಲೆ ಪರಸ್ಪರ ವರ್ಗಾವಣೆಯನ್ನು ಮಾತ್ರ ಪರಿಗಣಿಸುವಂತೆ ಹಾಗೂ ವಿಷಯವನ್ನು ಎರಡೂ ಸಂಸ್ಥೆಗಳ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚಿಸಲಾಗಿದೆ.**

ಮಾನ್ಯ ಘನ ಸರ್ಕಾರವು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸ್ವಾಯತ್ತ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕ / ಬೋಧಕೇತರ ಸಿಬ್ಬಂದಿಗಳ ವರ್ಗಾವಣೆ ಕುರಿತು ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ ಆದೇಶವನ್ನು ಹೊರಡಿಸಿದ್ದು, ಕರ್ನಾಟಕ ಸರ್ಕಾರದ ನಡವಳಿ ಆದೇಶ ಸಂಖ್ಯೆ : ಎಂಇಡಿ 95 ಆರ್‌ಜೆಯು 2019, ಬೆಂಗಳೂರು, ದಿನಾಂಕ : 31.12.2019 ರಲ್ಲಿ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಿ ಆದೇಶಿಸಿದೆ :

**ಬೋಧಕೇತರ ಸಿಬ್ಬಂದಿಗಳಿಗೆ ಅನ್ವಯಿಸುವ ಮಾರ್ಗಸೂಚಿಗಳು :**

1. ಬೋಧಕೇತರ ಸಿಬ್ಬಂದಿಗಳ **ಪರಸ್ಪರ ಮತ್ತು ಪತಿ–ಪತ್ನಿ ಪ್ರಕರಣಗಳಲ್ಲಿ ಹಾಗೂ ಅತ್ಯಂತ ವಿಶೇಷ ಪ್ರಕರಣಗಳಲ್ಲಿ ಮಾತ್ರ ಇಲಾಖೆಯ ಅಧೀನ ಸಂಸ್ಥೆಗಳ ಮಧ್ಯೆ ವರ್ಗಾವಣೆಗೆ ಅವಕಾಶವಿರತಕ್ಕದ್ದು.**
2. ಬೋಧಕೇತರ ಸಿಬ್ಬಂದಿಗಳ **ಖಾಯಂ ಪೂರ್ವ ಸೇವಾವಧಿ** ಯಶಸ್ವಿಯಾಗಿ **ಪೂರೈಸಿದ್ದಲ್ಲಿ** ಮಾತ್ರ ವರ್ಗಾವಣೆಗೆ ಅರ್ಹರಿರುತ್ತಾರೆ.
3. ಸಂಸ್ಥೆಗಳಲ್ಲಿ ವರ್ಗಾವಣೆ ಪ್ರಸ್ತಾವನೆಗಳಿಗೆ **ನಿರಾಕ್ಷೇಪಣಾ (NOC) ಪತ್ರಗಳನ್ನು** ನೀಡುವ **ಅಧಿಕಾರ ಆಡಳಿತ ಪರಿಷತ್ ಗೆ ಮಾತ್ರ ಇದ್ದು,** ಎಂ.ಸಿ.ಐ ನಿಯಮಾವಳಿಗಳ ಅನುಸಾರ ಬೋಧಕ / ಬೋಧಕೇತರ **ಸಿಬ್ಬಂದಿಯ ಅನುಪಾತವನ್ನು ಗಮನದಲ್ಲಿರಿಸಿಕೊಂಡು, ಕಡ್ಡಾಯವಾಗಿ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ, ಪರಿಗಣಿಸಿದ ಪ್ರಕರಣಗಳಲ್ಲಿ ಮಾತ್ರ ಏಕಕಡತದಲ್ಲಿ ಆಡಳಿತ ಪರಿಷತ್ತಿನ ಅಧ್ಯಕ್ಷರು / ನೇಮಕಾತಿ ಪ್ರಾಧಿಕಾರದ ಅನುಮೋದನೆ ಪಡೆದ ನಂತರವಷ್ಟೇ ಸ್ವಾಯತ್ತ ಸಂಸ್ಥೆಯ** ನಿರ್ದೇಶಕರುಗಳು **ನಿರಾಕ್ಷೇಪಣಾ ಪತ್ರಗಳನ್ನು ನೀಡುವುದು. ಉಭಯ ಸಂಸ್ಥೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದಿದ್ದಲ್ಲಿ ಮಾತ್ರ ವರ್ಗಾವಣೆಗೆ ಪರಿಗಣಿಸಲಾಗುವುದು.**
4. ಈ ವರ್ಗಾವಣೆಗಳು ಕೋರಿಕೆ ಮೇರೆಗೆ ಪರಿಗಣಿಸುತ್ತಿರುವುದರಿಂದ ಬೋಧಕೇತರ ಸಿಬ್ಬಂದಿಗಳು ವರ್ಗಾವಣೆಗೊಂಡ ಸಂಸ್ಥೆಯಲ್ಲಿನ **ಸಂಬಂಧಿಸಿದ ವೃಂದದಲ್ಲಿನ ಜ್ಯೇಷ್ಠತಾ ಪಟ್ಟಿಯಲ್ಲಿ ಎಲ್ಲರಿಗಿಂತ ಕಿರಿಯವರಾಗಿರುತ್ತಾರೆ.**

**ಮೇಲ್ಕಂಡ ಸರ್ಕಾರದ ಮಾರ್ಗಸೂಚಿಗಳನ್ವಯ, ಶ್ರೀಮತಿ. ಶುಭ.ಸಿ.ಜಮಖಂಡಿ ಇವರ ಕೋರಿಕೆಯು ಸರ್ಕಾರದ 1 ನೇ ಮಾರ್ಗಸೂಚಿಯಂತೆ ಪರಸ್ಪರ / ಪತಿ–ಪತ್ನಿ ಪ್ರಕರಣದಡಿ ವರ್ಗಾವಣೆ ವ್ಯಾಪ್ತಿಗೆ ಒಳಪಡುವುದಿಲ್ಲ. ಅಲ್ಲದೇ, 3ನೇ**

ಮಾರ್ಗಸೂಚಿಯನ್ವಯ ಸದರಿಯವರ ವರ್ಗಾವಣೆ ಕುರಿತು ಸರ್ಕಾರಕ್ಕೆ ನಿರಾಕ್ಷೇಪಣಾ ಪ್ರಮಾಣ ಪತ್ರ ಸಲ್ಲಿಸುವ ಬಗ್ಗೆ ಆಡಳಿತ ಮಂಡಳಿಯಲ್ಲಿ ಮಂಡಿಸಿ, ಪರಿಗಣಿಸಿದ ಪ್ರಕರಣವನ್ನು ಮಾತ್ರ ಏಕಕಡತದಲ್ಲಿ ಆಡಳಿತ ಪರಿಷತ್ತಿನ ಅಧ್ಯಕ್ಷರು / ನೇಮಕಾತಿ ಪ್ರಾಧಿಕಾರದ ಅನುಮೋದನೆ ಪಡೆದ ನಂತರವಷ್ಟೇ ಸ್ವಾಯತ್ತ ಸಂಸ್ಥೆಯ ನಿರ್ದೇಶಕರುಗಳು ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ನೀಡುವಂತೆ ಸೂಚಿಸಿರುವ ಮೇರೆಗೆ, ಶ್ರೀಮತಿ. ಶುಭ.ಸಿ.ಜಮಖಂಡಿ, ಕಿರಿಯ ಸಹಾಯಕ / ಡೇಟಾ ಎಂಟ್ರಿ ಆಪರೇಟರ್, ಇವರನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಗ್ಯಾಸ್ಟ್ರೋಎಂಟ್ರಾಲಜಿ ಸಂಸ್ಥೆಗೆ ವರ್ಗಾವಣೆಯ ಮೂಲಕ ಶಾಶ್ವತ ವಿಲೀನಾತಿ ಹೊಂದಲು ನಿರಾಕ್ಷೇಪಣಾ ಪ್ರಮಾಣ ಪತ್ರ (NOC) ನೀಡುವ ಬಗ್ಗೆ, ಸೂಕ್ತ ಆದೇಶ ಕೋರಿ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಬಗ್ಗೆ ಅನುಮೋದಿಸಿತು.

**ವಿಷಯ (25) : ಸಂಸ್ಥೆಯ ನಿರ್ದೇಶಕರ ಹುದ್ದೆಯನ್ನು ಖಾಯಂ ಆಗಿ ನೇಮಕಾತಿ ಮಾಡುವ ಬಗ್ಗೆ.**

ನೆಫ್ರೋ–ಯುರಾಲಜಿ ಸಂಸ್ಥೆಯ ನಿರ್ದೇಶಕರ ಹುದ್ದೆಯು 2013 ರಿಂದ ಈವರೆವಿಗೂ ಪ್ರಭಾರದಲ್ಲಿಯೇ ನಿರ್ವಹಿಸಲ್ಪಡುತ್ತಿದ್ದು, ಈ ಬಗ್ಗೆ ಗೌರವಾನ್ವಿತ ನ್ಯಾಯಾಲಯದಲ್ಲಿ ಹಲವಾರು ಪ್ರಕರಣಗಳು ದಾಖಲಾಗಿ ಇತ್ಯರ್ಥಗೊಂಡಿವೆ.

ಪ್ರಕರಣ ಸಂಖ್ಯೆ : W P 7141/2020 (S-RES) ಗೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯವು ದಿನಾಂಕ : 02.12.2020 ರಂದು ಈ ಕೆಳಕಂಡಂತೆ ಆದೇಶಿಸಿದೆ:

"The impugned notification dated 20.05.2020 issued by the first respondent bearing No. MED/95/MSF/2019 (Annexure-Q) is set-aside only in so far as appointing third Respondent as Incharge Director to the second Respondent-Institute. Consequently the petitioner shall continue as Director on incharge basis to the second respondent Institute of Nephro-Urology until a permanent Director is appointed in terms of Rule 13 of Rules and Regulations of the Institute or any further arrangement is made for appointment of officiating Director in terms of Rule 14 of Rules and Regulations of the Institute".

ಮೇಲ್ಕಂಡ ಆದೇಶವನ್ನು ಪ್ರಶ್ನಿಸಿ ಡಾ|| ಉಮೇಶ.ಎಲ್. ಇವರು ರಿಟ್ ಅಪೀಲು ಸಂಖ್ಯೆ : W A 6/2021 (S-RES) ಪ್ರಕರಣ ದಾಖಲಿಸಲಾಗಿ, ಸದರಿ ಪ್ರಕರಣವನ್ನು ಇತ್ಯರ್ಥಪಡಿಸಿದ ಮಾನ್ಯ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿದೆ:

"In the considered opinion of this Court, as the process for appointing a new Director has already been initiated, the present writ appeal as prayed for is dismissed as withdrawn with a direction to the respondents/State to ensure appointment of a regular Director within a period of three months from today".

ಮೇಲ್ಕಂಡ ಎಲ್ಲಾ ಅಂಶಗಳನ್ನು ಸರ್ಕಾರದ ಅವಗಾಹನೆಗೆ ಸಲ್ಲಿಸಿ, ನಿಯಮಾನುಸಾರ ನಿರ್ದೇಶಕರ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ ಅಧಿಸೂಚನೆ ಹೊರಡಿಸುವಂತೆ ಕೋರಿ ಕಡತ ಮಂಡಿಸಲಾಗಿ, ಸರ್ಕಾರದ ಆದೇಶದ ಪ್ರಕಾರ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರು ದಿನಾಂಕ : 07.10.2021 ರಂದು ಪ್ರಕಟಣೆ ಹೊರಡಿಸಿ, ಸಂಸ್ಥೆಯ ನಿರ್ದೇಶಕರ ಹುದ್ದೆಯನ್ನು ಖಾಯಂ ಆಗಿ ನೇಮಕಾತಿ ಮಾಡುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಪ್ರಸ್ತುತ ಸದರಿ ಅರ್ಜಿಗಳು ಸರ್ಕಾರದ ಹಂತದಲ್ಲಿ ಬಾಕಿ ಇರುವ ಬಗ್ಗೆ ತಮ್ಮ ಆದ್ಯ ಅವಗಾಹನೆಗೆ ತರುತ್ತಾ, ವಿಷಯವನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರು ಇವರಿಂದ ವಿವರಣೆ ಪಡೆದು, ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಂಸ್ಥೆಯ ನಿರ್ದೇಶಕರ ಹುದ್ದೆಯನ್ನು ಖಾಯಂ ಆಗಿ ನೇಮಕಾತಿ ಮಾಡುವ ಸಂಬಂಧ ಪ್ರಕ್ರಿಯೆಗಳನ್ನು ಮುಂದುವರೆಸಲು ಕ್ರಮವಹಿಸುವಂತೆ ಹಾಗೂ ಇದರ ಬಗ್ಗೆ ಮಾನ್ಯ ನ್ಯಾಯಾಲಯದಲ್ಲಿ ಈವರೆಗೆ ದಾಖಲಾಗಿದ್ದ ಪ್ರಕರಣಗಳ ಆದೇಶಗಳನ್ನು ಕ್ರೋಢೀಕರಿಸಿ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರಿಗೆ ವರದಿ ಸಲ್ಲಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರಿಗೆ ಸೂಚಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲ್ಪಟ್ಟ ಇತರೆ ವಿಷಯಗಳು :**

ಮೈಸೂರಿನಲ್ಲಿ ನೆಫ್ರೋ-ಯುರಾಲಜಿ ಘಟಕವನ್ನು ಪ್ರಾರಂಭಿಸಿರುವಂತೆಯೇ, ಕಲ್ಬುರ್ಗಿ ಮತ್ತು ಹುಬ್ಬಳ್ಳಿ ನಗರಗಳಲ್ಲಿಯೂ ಸಹ ನೆಫ್ರೋ-ಯುರಾಲಜಿ ಘಟಕವನ್ನು ಪ್ರಾರಂಭಿಸಿದಲ್ಲಿ ಆ ಭಾಗದ ಜನಸಾಮಾನ್ಯರಿಗೆ ನೆಫ್ರೋಲಜಿ ಮತ್ತು ಯುರಾಲಜಿ ಕಾಯಿಲೆಗೆ ಸಂಬಂಧಿಸಿದಂತೆ ಉತ್ತಮ ಸರ್ಕಾರಿ ಚಿಕಿತ್ಸಾ ಸೌಲಭ್ಯ ದೊರಕುವ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ವಿವರವಾದ ಯೋಜನಾ ವರದಿಯೊಂದಿಗೆ ಪ್ರಸ್ತಾವನೆಯನ್ನು ಬಜೆಟ್ ಅನುಮೋದನೆಗೆ ಸಲ್ಲಿಸಲು ಕ್ರಮವಹಿಸುವಂತೆ ವೈದ್ಯಕೀಯ ಶಿಕ್ಷಣ ಸಚಿವರಿಗೆ ಸೂಚಿಸಲಾಯಿತು.

ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷ ಪೀಠಕ್ಕೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಬಸವರಾಜ ಎಸ್ ಬೊಮ್ಮಾಯಿ)
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ,
ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು.

(ಡಾ॥ ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ
ಮತ್ತು ಉಪಾಧ್ಯಕ್ಷರು, ಆಡಳಿತ ಮಂಡಳಿ,
ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು.

(ನವೀನ್ ರಾಜ್ ಸಿಂಗ್)
ಸರ್ಕಾರದ ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ವೈದ್ಯಕೀಯ ಶಿಕ್ಷಣ)